
ಗೌರಿ ಲಂಕೇಶರ

ಲಂಕೇಶ್

ಮಾರ್ಚ್ 21, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಪತ್ರಕರ್ತ ಸೀತಾರಾಂ ಬಂಧನ



ಹೆಗ್ಗಡೇನ ಪ್ರಶ್ನಿಸಬಾರದೇ



ಪೊಲೀಸರ ದಬ್ಬಾಳಿಕೆ




ನಗ್ನ ಮುನಿ ಸುತ್ತ ವಿವಾದ

ರೆ ಲಂಚ:

ಟ್ ರಾಜೀನಾಮೆ ನೀಡಿದ್ದೇಕೆ



ಲಾಡು ಕಬಾಬು ಬ್ಯಾನ್!



'ಆವರಣ' ವಿಮರ್ಶೆ

ಮಕ್ಕಳನ್ನು ತಿಂದಿದ್ದು ನಾಯಿಗಳು, ಕೊಂದಿದ್ದು ಸರ್ಕಾರ!!

ಬೀದಿ ನಾಯಿಗಳ ಕ್ರೂರ ದಾಳಿಗೆ ಸಿಕ್ಕಿ ನಾಲ್ಕಕ್ಕೂ ಹೆಚ್ಚು ಹಸುಕಂದಮ್ಮಗಳು ಸತ್ತವು. ಸಹಜವಾಗಿಯೇ ಸಾರ್ವಜನಿಕರ ಆಕ್ರೋಶ ನಾಯಿಗಳ ಮೇಲೂ ಮತ್ತು ಅದರ ಹಾವಳಿಯನ್ನು ತಡೆಯಲಾಗದ ನಗರಪಾಲಿಕೆಯ ಮೇಲೂ ಉಕ್ಕಿ ಹರಿದಿದೆ. ನಗರಪಾಲಿಕೆ ಜನರ ಸಿಟ್ಟನ್ನೆಲ್ಲಾ ನಾಯಿಗಳ ಮೇಲೆ ತಿರುಗಿಸಿ ತಾನು ಬಚಾವಾಗಲು ನೋಡುತ್ತಿದೆ. ನಾಯಿಗಳು — ಅದರಲ್ಲೂ ಬೀದಿ ನಾಯಿಗಳು — ಆಗಾಗ ಮನುಷ್ಯರನ್ನು ಕಚ್ಚುವುದು ಹೊಸ ವಿಷಯವೇನಲ್ಲ. ಸರ್ಕಾರದ ದಾಖಲೆಗಳ ಪ್ರಕಾರ ಬೆಂಗಳೂರು ಒಂದರಲ್ಲೇ ಪ್ರತಿ ವರ್ಷ ಹತ್ತು ಸಾವಿರಕ್ಕೂ ಹೆಚ್ಚು ಜನ ನಾಯಿ ಕಡಿತಕ್ಕೆ ತುತ್ತಾಗುತ್ತಾರೆ.

ಆದರೆ ಈ ರೀತಿ ಬೀದಿ ನಾಯಿಗಳು ಹಸುಕಂದಮ್ಮಗಳನ್ನು ಹಸಿ ಮಾಂಸವೆಂದು ಭಾವಿಸಿ ಎಳೆದಾಡಿ ತಿಂದದ್ದು ಇದೇ ಪ್ರಥಮ. ಹೀಗಾಗಿ ಇದರ ಬಗ್ಗೆ ತೀವ್ರವಾಗಿ ಎಲ್ಲರೂ ತಲೆ ಕೆಡಿಸಿಕೊಳ್ಳಬೇಕು. ನಾಯಿಗಳೇಕೆ ನರಮಾಂಸ ತಿನ್ನುವಷ್ಟು ವ್ಯಗ್ರವಾಗುತ್ತಿವೆ? ಅದಕ್ಕೆ ನಾಯಿಗಳೆಷ್ಟು ಕಾರಣ? ನಗರಪಾಲಿಕೆಯೆಷ್ಟು ಕಾರಣ? ಹಾಗೆಂದು ಬೆಂಗಳೂರಿನಲ್ಲಿ ಇದೆ ಎಂದು ಹೇಳಲಾಗುವ 50,000ಕ್ಕೂ ಹೆಚ್ಚು ಬೀದಿ ನಾಯಿಗಳನ್ನು ಕೊಲ್ಲಿಸಿ ಬಿಟ್ಟರೆ ಸಮಸ್ಯೆ ಬಗೆಹರಿಯುತ್ತದೆಯೇ? ಈಗ ಮಲಬಾರ್‌ನಿಂದ ಬಂದಿರುವ ತಂಡ ದಿನಕ್ಕೆ ಸಾವಿರದ ಲೆಕ್ಕದಲ್ಲಿ ನಾಯಿಗಳನ್ನು ಹಿಡಿದು ಹಾಕುತ್ತಿದೆ. ಅವರಿಗೆ ಒಂದು ನಾಯಿ ಹಿಡಿಯಲು 50 ರೂಪಾಯಿ ಕೊಡುತ್ತಾರಂತೆ. ಅಂದರೆ ಎಲ್ಲಾ ಬೀದಿ ನಾಯಿಗಳನ್ನು ಹಿಡಿದು ಹಾಕಲು ಐವತ್ತು ಲಕ್ಷ ರೂಪಾಯಿಗಳು ಬೇಕು.




ಆದರೆ ವಿಪರ್ಯಾಸವೇನೆಂದರೆ ಇದರ ಬದಲಿಗೆ ಮೊದಲೇ ಇದೇ ಹಣವನ್ನು ನಾಯಿಗಳ ಸಂತಾನಹರಣ ಮಾಡಲು ಎತ್ತಿಟ್ಟಿದ್ದರೆ ಬೀದಿ ನಾಯಿಗಳ ಸಂಖ್ಯೆಯೇ ಜಾಸ್ತಿಯಾಗುತ್ತಿರಲಿಲ್ಲ. ಸಮಸ್ಯೆ ಇರುವುದೇ ಇಲ್ಲಿ. ನಗರಪಾಲಿಕೆ ನಾಯಿಗಳ ಸಂತಾನಹರಣ ಯೋಜನೆಯನ್ನು ಖಾಸಗೀಕರಿಸಿಬಿಟ್ಟಿದೆ. ಸುಮಾರು ಹತ್ತಕ್ಕೂ ಹೆಚ್ಚು ಎನ್.ಜಿ.ಒ.ಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುವುದಾಗಿ ಹೇಳಿ ಪಾಲಿಕೆಯಿಂದ ಮತ್ತು ವಿದೇಶದಿಂದ ಹಣ ಪಡೆಯುತ್ತವೆ. ಅವುಗಳು ಕೊಡುತ್ತಿರುವ ಲೆಕ್ಕದ ಪ್ರಕಾರ ಅವು ಈಗಾಗಲೇ 2.8 ಲಕ್ಷ ಬೀದಿ ನಾಯಿಗಳಿಗೆ ಸಂತಾನಹರಣ ಚಿಕಿತ್ಸೆಯನ್ನು ಮಾಡಿವೆ. ಆದರೆ ಬೆಂಗಳೂರಿನಲ್ಲಿ ಇರುವುದೇ 55,000 ಬೀದಿ ನಾಯಿಗಳೆಂದು ಸರ್ಕಾರ ಹೇಳುತ್ತಿದೆ. ಅಂದರೆ ಈ ಎನ್.ಜಿ.ಒ ಗಳು ಇರುವ ನಾಯಿಗಳಿಗೂ ಇಲ್ಲದ ನಾಯಿಗಳಿಗೂ ಸಂತಾನಹರಣ ಚಿಕಿತ್ಸೆ ಮಾಡಿವೆ. ಅದರಲ್ಲಿ ಇಲ್ಲದ ನಾಯಿಗಳ ಸಂಖ್ಯೆಯೇ ಹೆಚ್ಚು ಎಂದಾಯಿತು! ಅದೇ ಸಮಸ್ಯೆಯ ಮೂಲ.

ಈಗ ಈ ಸಮಸ್ಯೆಗೆ ಕಾರಣವಾದ ಸರ್ಕಾರದ ಸಂತಾನಹರಣ ಖಾಸಗೀಕರಣ ನೀತಿ ಮತ್ತು ಅದರ ದುರ್ಲಾಭ ಪಡೆದ ಎನ್.ಜಿ.ಒಗಳೆಲ್ಲಾ ಬಚಾವಾಗಿ ಎಲ್ಲಾ ಸಿಟ್ಟನ್ನು ನಾಯಿಗಳ ಮೇಲೆ ತಿರುಗಿಸಲಾಗಿದೆ. ತಮಗೆ ಸಂತಾನಹರಣ ಮಾಡದ ಬಗ್ಗೆ ಸಾಕ್ಷ್ಯ ನುಡಿದುಬಿಡುತ್ತವೇನೋ ಎಂಬ ಭಯದಲ್ಲಿ ಅತಿ ವೇಗವಾಗಿ ನಾಯಿಗಳ ಸಂಹಾರ ಪ್ರಾರಂಭವಾಗಿದೆ. ನಾಯಿಗಳನ್ನೆಲ್ಲಾ ಕೊಲ್ಲಬಹುದು. ಆದರೆ ಈ ನಗರಪಾಲಿಕೆ ಮತ್ತು ಸರ್ಕಾರ ಮಾತ್ರ ಹೀಗೆ ಇರುತ್ತದಲ್ಲಾ? •

ಮುನಿಶ್ರೀಗಳ

ಬೆತ್ತಲೆ ಮತ್ತು ರಾಗದ್ವೇಷಗಳ ಕತ್ತಲೆ!

ಜೈನಮುನಿ ತರುಣಶ್ರೀ ಮುನಿಸಾಗರರನ್ನು ಅವರ ಅನುಯಾಯಿಗಳು ಕ್ರಾಂತಿಕಾರಿ ಸಂತನೆನ್ನುತ್ತಾರೆ. ಅದಕ್ಕೆ ಆತ ಜೈನ ಮತದ ದಿಗಂಬರ ಪಂಥವನ್ನು ಚಾಚೂತಪ್ಪದೆ ಅನುಸರಿಸುವುದು. ಅವರು ಅಕ್ಷರಶಃ ದಿಗಂಬರರು. ಮೈಮೇಲೆ ಒಂದು ನೂಲಿನಷ್ಟೂ ಬಟ್ಟೆ ಇರುವುದಿಲ್ಲ, ಅಲ್ಲದೆ ನಿಗದಿತ ಅವಧಿಯಲ್ಲಿ ಅವರು ಸಲ್ಲೇಖನ— ಅಂದರೆ ತಮ್ಮ ಕೂದಲನ್ನು ಒಂದೊಂದಾಗಿ ತಾವೇ ಕಿತ್ತು ಕೊಳ್ಳುವುದು — ಮಾಡುತ್ತಾರೆ. ಅವರ ಆರೋಗ್ಯ ತಪ್ಪಿದರೂ ಬೇರೆ ಎಲ್ಲಾದರೂ ಹೋಗಬೇಕೆಂದರೆ ಮನುಷ್ಯ ನಿರ್ಮಿತ ವಾಹನಗಳಲ್ಲಿ ಹೋಗುವುದಿಲ್ಲ, ಇತ್ಯಾದಿ, ಇತ್ಯಾದಿ...



ಆದರೆ ಜೈನ ಪಂಥದ ದಿಗಂಬರತೆಯ ಸಂದೇಶ ದೇಹದ ಬೆತ್ತಲೆಯೇ? ಅಲ್ಲ, ಅದು ಮನುಷ್ಯನ ಮನಸ್ಸಿನ ಬೆತ್ತಲಿನ ಬಾಹ್ಯ ಸಂಕೇತ! ಅಂದರೆ ಮನುಷ್ಯ ಐಹಿಕ ಸುಖಭೋಗ, ಕೀರ್ತಿ ಕಾಂಚಾಣ ಎಲ್ಲದರ ಬಗ್ಗೆಯೂ ನಿರ್ಲಿಪ್ತನಾಗಿ ಕಾಮ, ಕ್ರೋಧ, ಮದ, ಮತ್ಸರ, ಮೋಹ, ಲಾಭಗಳೆಂಬ ಐಹಿಕ ಅರಿಷಡ್ವರ್ಗಗಳನ್ನು ಮೀರಬೇಕೆಂಬುದು ಅದರ ಸಾರಾಂಶ. ಈ ಅಹಿಕಲಾಲಸೆಗಳು ಮನುಷ್ಯನಲ್ಲಿ ಮೋಹವನ್ನು ಮತ್ತು ಅದರಿಂದ ಹಿಂಸೆಯನ್ನು ಹುಟ್ಟಹಾಕುತ್ತದೆ ಎಂಬುದು ಅದರ ದರ್ಶನ. ಹೀಗೆ ಅವೆಲ್ಲವನ್ನೂ ಮೀರಿ ಮನಸ್ಸು ಬಯಲಾಗುವುದು, ಬಟ್ಟೆ ಕಳಚಿ ಬೆತ್ತಲಾಗುವುದೇ ನಿರ್ವಾಣ.

ಆದರೆ ಇಂದು ಸಾರಾಂಶಗಳನ್ನೆಲ್ಲಾ ಕೇವಲ ಸಂಕೇತಗಳಿಗೆ ಮಾತ್ರ ಇಳಿಸಿಬಿಡಲಾಗುತ್ತಿರುವ ಕಾಲವಲ್ಲವೇ? ಅದು ಎಲ್ಲಾ ಸಿದ್ಧಾಂತಗಳಿಗೂ, ಧರ್ಮಗಳಿಗೂ, ಚಳವಳಿಗಳಿಗೂ ಅನ್ವಯವಾಗುತ್ತಿರುವ ಕಾಲ. ಅದೇರೀತಿ ಜೈನ ದಿಗಂಬರತೆಯ ಈ ಕ್ರಾಂತಿಕಾರಿ ಸಾರಾಂಶವನ್ನೂ ಸಹ ಕೇವಲ ದೇಹದ ದಿಗಂಬರತೆಗೆ ಮಾತ್ರ ಇಳಿಸಿ ಮನಸಿನಲ್ಲಿ ಐಹಿಕವಾದ ಎಲ್ಲಾ ಮತ್ಸರಗಳನ್ನು ಹೊದ್ದುಕೊಂಡಿರುವವರು ಜೈನ ಮುನಿಶ್ರೀ ತರುಣಸಾಗರ!

ಚಾರ್ವಾಕ

- ಶಿವಸುಂದರ್-

ಹೆಂಗಸರು ಗಂಡಸರನ್ನು ಪಾಪದ ಹಳವಂಡಕೆ ತಳ್ಳುವ ಪಾಪಿಷ್ಠರು, ಜಗತ್ತಿನಲ್ಲಿ ಎಲ್ಲಾ ಸುಖವನ್ನು ಪಡೆ ಆದರೆ ಮದುವೆ ಮಾತ್ರ ಆಗಬೇಡ, ಮಾಂಸಾಹಾರ ತಿಂದರೆ ತಾಮಸ ಗುಣ ಬೆಳೆದು ವೀರಪ್ಪನ್ ಮತ್ತು ಸದ್ದಾಂ ಹುಟ್ಟುತ್ತಾರೆ ಎಂದು ತಾರತಮ್ಯವೇ ಉಸಿರಾಗಿರುವ ಬ್ರಾಹ್ಮಣ್ಯವೇ ಇವರ ಆಧ್ಯಾತ್ಮ ಮತ್ತು ಧರ್ಮ. ಇದು ಖಂಡಿತಾ ಮಹಾವೀರನ ದರ್ಶನವಲ್ಲ.

ಜಗತ್ತಿನ ಮುಕ್ಕಾಲು ವಾಸಿ ಜನಗಳ ಬಗ್ಗೆ ಆಳದಲ್ಲಿ ಅಸಹನೆ ಮತ್ತು ದ್ವೇಷ ಮಾತ್ರ ಇಟ್ಟುಕೊಂಡಿರುವ; ಹಿಂಸೆಯನ್ನೇ, ಪರಮ ದ್ವೇಷವನ್ನೇ ಉಸಿರಾಡುವ ಮತ್ತು ಅದನ್ನೇ ರಾಜಕೀಯ ಅಸ್ತ್ರ ಮಾಡಿಕೊಂಡಿರುವ ಸಂಘ ಪರಿವಾರದ ಸ್ನೇಹದಲ್ಲಿರುವ ಸಂತರು ಬೆತ್ತಲಾಗಿದ್ದರೂ ಕ್ರಾಂತಿಕಾರಿಯೇನೂ ಆಗುವುದಿಲ್ಲ. ಬದಲಿಗೆ ನಿತ್ಯ ಜೀವನದಲ್ಲೆಲ್ಲೂ ಹಿಂಸೆ ಮಾಡಬಾರದೆಂಬ ಮೂಲ ದರ್ಶನದ ವಿರುದ್ಧ ಪ್ರತಿಕ್ರಾಂತಿ ನಡೆಸುವ ಹಿಂಸಾವಾದಿಯೇ ಆಗುತ್ತಾರೆ.

ತನ್ನನ್ನು ಟೀಕಿಸಿದ ಸಮಾಜಕ್ಕೆ ಮತ್ತು ತನಗೆ ಸಿಕ್ಕ ರಾಜ್ಯಶಕ್ತಿಗೆ ಬೆನ್ನು ಹಾಕಿ ಪರಮಾರ್ಥವನ್ನು ಅರಸುತ್ತಾ ಬೆಳಗೊಳದಲ್ಲಿ ಬೆತ್ತಲ ಬೆಳಕಾದ ಮಹಾವೀರ. ಆದರೆ ಅವರ ಅನುಯಾಯಿ ಎಂದು ಹೇಳಿಕೊಳ್ಳುವ ಈ ಸ್ವಾಮಿ ತನ್ನನ್ನು ಟೀಕಿಸಿದ ಪತ್ರಿಕಾ ಸಂಪಾದಕರೊಬ್ಬರನ್ನು ರಾಜ್ಯಶಕ್ತಿಯನ್ನಾಗಿ ಬಳಸಿ ಕತ್ತಲ ಕಾರಾಸ್ಥಾನಕ್ಕೆ ತಳ್ಳಿದ್ದಾರೆ. ಲೌಕಿಕ ಬದುಕಿನ ಯಾವುದೇ ರಾಗ ದ್ವೇಷಗಳಿಂದ ಮುಕ್ತವಾಗದ ಮತ್ತು ಸಮಾಜದ ಕೇವಲ ಉನ್ನತ ವರ್ಗದ ಜನರ ದುರಾಸೆ ಮತ್ತು ಶೋಷಣೆಯ ಲೌಕಿಕ ಬದುಕಿನ ಪಾಪಪ್ರಜ್ಞೆಗೆ ಆಧ್ಯಾತ್ಮಿಕತೆಯ ಮುಲಾಮು ಹಚ್ಚುವ ಸಂತನ ಕ್ರಾಂತಿಕಾರಿ ಹೇಗಾದೀತು. ಇಲ್ಲಿ ಬೆತ್ತಲು ಕ್ರಾಂತಿಕಾರಿತನವಲ್ಲ, ಒಂದು ಕ್ಷುಲ್ಲಕ ರಾಜಕೀಯ. ವಿಕೃತ ಪ್ರದರ್ಶನ ಮಾತ್ರ! ಅಲ್ಲವೇ? •

ತಮಿಳು ಚಿತ್ರ ಪ್ರದರ್ಶನವಾದರೆ ಕರ್ನಾಟಕಕ್ಕೆ ರಕ್ಷಣೆ ಇಲ್ಲವಾಗುವುದೇ?

ಈ ಬಾರಿ ಕಾವೇರಿ ನೀರು ಹಂಚಿಕೆಯಲ್ಲಾದ ಅನ್ಯಾಯದ ವಿರುದ್ಧ ನಡೆಯುತ್ತಿರುವ ಹೋರಾಟದಲ್ಲಿ ಒಂದು ಸಮಾಧಾನದ ಸಂಗತಿ ಮತ್ತು ಇನ್ನೊಂದು ಅಷ್ಟೇನು ಆಶಾದಾಯಕವಲ್ಲದ ಸಂಗತಿಯಿದೆ. ಸಮಾಧಾನದ ಸಂಗತಿಯೆಂದರೆ ಕಾವೇರಿ ವಿವಾದದಲ್ಲಿ ಕರ್ನಾಟಕಕ್ಕಾಗಿರುವ ಅನ್ಯಾಯದ ವಿರುದ್ಧದ ಆಕ್ರೋಶ ಕರ್ನಾಟಕದಲ್ಲೇ ವಾಸಿಸುವ ಆದರೆ ತಮಿಳು ಮಾತಾಡುವ ತಮಿಳರ ಮೇಲೆ ತಿರುಗಲಿಲ್ಲ. ನಿರಾಶಾದಾಯಕ ಸಂಗತಿಯೆಂದರೆ ಕೇಂದ್ರದಿಂದಾಗಿರುವ ಅನ್ಯಾಯದ ವಿರುದ್ಧ ಮೊದಲು ನಡೆದಷ್ಟು ತೀವ್ರವಾದ ಹೋರಾಟ ನಡೆಯದಿರುವುದು ಮತ್ತು ಕ್ರಮೇಣ ಹೋರಾಟ ಎನ್ನುವುದು ಜಾತ್ರೆಯ ಸ್ವರೂಪ ಪಡೆದುಕೊಂಡು ಹೋರಾಟದ ಸ್ವರೂಪ ಕ್ಷೀಣವಾಗುತ್ತಿರುವುದು. ಸರ್ಕಾರ ಮತ್ತು ಅದನ್ನು ಹಿಡಿದಿರುವ ಪಕ್ಷಗಳು ಕಾವೇರಿ ಚಳವಳಿಯನ್ನು ತಮ್ಮ ದಿವ್ಯ ಮೌನದಿಂದ ಅದನ್ನು ಸಹಜ ಸಾವಿನೆಡೆಗೆ ದೂಡುತ್ತಿರುವುದು. ಇದು ಗೊತ್ತಿದ್ದರೂ ಚಳವಳಿಗಳು ಸರ್ಕಾರದ ವಿರುದ್ಧ ತಿರುಗದೆ ಸ್ವಗತದಲ್ಲೇ ಮುಳುಗಿಹೋಗಿರುವುದು..!

ಇದರ ನಡುವೆ ಕಳೆದ ಒಂದು ವಾರದಿಂದ ಮತ್ತೊಂದು ಹಳೆಯ ಕಾಯಿಲೆ ಮರುಕಳಿಸುವ ಎಲ್ಲಾ ಲಕ್ಷಣಗಳು ಕಾಣುತ್ತಿವೆ. ಒಂದೆಡೆ ಕನ್ನಡದ ಹೆಸರನ್ನೇ ಇಟ್ಟುಕೊಂಡಿರುವ ದಿನಪತ್ರಿಕೆಯೊಂದು ಸೆನ್ಸೇಷನಲ್ ಸುದ್ದಿಯ ಮೂಲಕವೇ ಮಾರುಕಟ್ಟೆ ಪಡೆಯಬೇಕೆಂಬ ಹಠತೊಟ್ಟು ಈ ಚಳವಳಿಗೆ ಸಾಧ್ಯವಾದಷ್ಟೂ ತಮಿಳು ವಿರೋಧಿ ಸ್ವರೂಪ ಕೊಡಲು ಅಹರ್ನಿಶಿ ಪ್ರಯತ್ನಿಸುತ್ತಿರುವುದು. ಅದಕ್ಕೆ ತಾಜಾ ಉದಾಹರಣೆ ಮೊನ್ನೆ ರೈಲ್ವೇ ಟಿಕೆಟಿನ ಮೇಲೆ ಕನ್ನಡದ ಹೆಸರು ಮಾಯವಾಗಿರುವ ಕುರಿತಾದ ವರದಿ! ಕೇಂದ್ರದ ಹಿಂದಿ ಮತ್ತು ಇಂಗ್ಲಿಷ್ ಹೇರಿಕಾ ನೀತಿಗಳ ಭಾಗವಾಗಿ ಈವರೆಗೆ ರೈಲ್ವೇ ಟಿಕೆಟಿನಲ್ಲಿ ಇರುತ್ತಿದ್ದ ಕನ್ನಡ ಮಾಯವಾಗಿದೆ. ಬರಿ ಇಂಗ್ಲಿಷ್ ಮತ್ತು ಹಿಂದಿ ಉಳಿದಿದೆ. ಆದರೆ ತಮಿಳು ನಾಡಿನಲ್ಲಿ ಮಾತ್ರ ತಮಿಳು ಭಾಷೆಯೂ ಟಿಕೆಟ್ ಮೇಲಿರುತ್ತದೆ. ಇದು ಅನ್ಯಾಯ ಮತ್ತು ಕೇಂದ್ರ ತೋರಿಸುತ್ತಿರುವ ತಾರತಮ್ಯ ಇದರ ವಿರುದ್ಧ ಹೋರಾಡಬೇಕು ಸರಿ. ಆದರೆ ಗುರಿ ಯಾರು? ಕೇಂದ್ರ ಸರ್ಕಾರದ ಏಕಾಧಿಪತ್ಯ ತಾನೆ? ಆದರೆ ಈ ಪತ್ರಿಕೆ ಈ ವಿಷಯವನ್ನು ಕೇಂದ್ರದ ತಾರತಮ್ಯ ಎನ್ನುವುದಕ್ಕಿಂತ ತಮಿಳರ ಗೆಲುವು ಎಂಬಂತೆ ತೋರಿಸಿ ಪರೋಕ್ಷವಾಗಿ ಹೋರಾಟವನ್ನು ತಮಿಳರ ವಿರುದ್ಧ ತಿರುಗಿಸುವಂತೆ ಯತ್ನಿಸುತ್ತಿದೆ.

ಅದೇರೀತಿ ಕನ್ನಡ ಹೋರಾಟಗಾರರಲ್ಲಿ ಒಂದು ಬಣ — ಕರ್ನಾಟಕದ ರಕ್ಷಣೆಯ ಗುತ್ತಿಗೆಯನ್ನು ತಾನು ಮಾತ್ರ ಹೊತ್ತಿರುವೆ ಎನ್ನುವ ಬಣ — ನಿಜ ಕಸುವಿಲ್ಲದೆ ಸೊರಗುತ್ತಿರುವ ಕಾವೇರಿ ಚಳವಳಿಗೆ ಮತ್ತೆ ತಮಿಳು ವಿರೋಧಿ ಸ್ವರೂಪ ಕೊಡುವ ಪ್ರಯತ್ನವನ್ನು ಅಲ್ಲಲ್ಲಿ ಮಾಡುತ್ತಿದೆ. ಇದಿನ್ನೂ ಸಣ್ಣ ಮತ್ತು ಅಪ್ರಧಾನವಾದ ಅಂಶವಾಗಿಯೇ ಇದೆ. ಆದರೆ ಇದರ ಹಿಂದಿರುವ ತರ್ಕ ಮಾತ್ರ ಇದು ಕಾವೇರಿ ಚಳವಳಿಯೆಂಬ ಕರ್ನಾಟಕದವರೆಲ್ಲರ ಪ್ರಜಾತಾಂತ್ರಿಕ ಹೋರಾಟಕ್ಕೆ ಮಾಡಬಹುದಾದ ಅಪಾಯ ಅಗಾಧವಾದದ್ದು. ತಮಿಳು ಭಾಷೆ ಮಾತಾಡಿದ ಮಾತ್ರಕ್ಕೆ, ತಮಿಳು ಭಾಷಾ ಚಿತ್ರಗಳನ್ನು ನೋಡಿದ ಮಾತ್ರಕ್ಕೆ ತಮಿಳು ಚಾನೆಲ್‌ಗಳನ್ನು ನೋಡಿದ ಮಾತ್ರಕ್ಕೆ ಅವರು ತಮಿಳ್ನಾಡಿನ ಪರವಾಗಿರುತ್ತಾರೆ ಎಂದು ಭಾವಿಸುವುದು ಕೇವಲ ಸಂಕುಚಿತವಾದ ವಾದ ಮಾತ್ರವಲ್ಲ, ಅದು ಫ್ಯಾಸಿಸ್ಟ್ ವಾದ. ಭಾರತದಲ್ಲಿರುವ ಮುಸ್ಲಿಮರು ಅವರ ಧರ್ಮ ಇಸ್ಲಾಂ ಆಗಿರುವುದರಿಂದ ಪಾಕಿಸ್ತಾನದ ಪರವಾಗಿರುತ್ತಾರೆ. ಆದ್ದರಿಂದ ಭಾರತೀಯರಾಗಿರಬೇಕೆಂದರೆ ತಮ್ಮ ಧರ್ಮವನ್ನೆಲ್ಲಾ ಬಿಟ್ಟು ಹಿಂದೂ ದೇವರನ್ನೇ ತಮ್ಮ ದೇವರನ್ನಾಗಿಸಿಕೊಳ್ಳಬೇಕೆಂಬ ವಾದದಂತೆ ಕರ್ನಾಟಕದ ಪರವಾಗಿದ್ದರೆ ಕನ್ನಡ ಚಿತ್ರ/ಚಾನಲ್ ಮಾತ್ರ ನೋಡಬೇಕೆಂಬ ವಾದವೂ ಫ್ಯಾಸಿಸ್ಟ್ ವಾದವೇ ಆಗಿದೆ. ಆದರೆ ಕನ್ನಡ ಚಳವಳಿ ಅಂತರ್ಯದಲ್ಲಿ ಶೋಷಣೆಯ ವಿರುದ್ಧ ನಡೆದಿರುವ ಚಳವಳಿಯೇ ಆದ್ದರಿಂದ ಅದು ಪ್ರಜಾತಾಂತ್ರಿಕ ಮೌಲ್ಯಗಳಿಗಾಗಿ ನಡೆಯುವ ಹೋರಾಟವಾಗಬೇಕಿದೆ. ಒಂದು ಪ್ರಜಾತಂತ್ರ ಮೌಲ್ಯಕ್ಕಾಗಿ ಚಳವಳಿ ತಾನೇ ಅಪ್ರಜಾತಾಂತ್ರಿಕವಾಗಬಾರದು. ಸೆನ್ಸೇಷನಲ್ ಪತ್ರಿಕೋದ್ಯಮ ಮತ್ತು ದುರಭಿಮಾನಿ ಸಿದ್ಧಾಂತ ಎರಡೂ ಕರ್ನಾಟಕಕ್ಕೆ ಬೇಡವಾದ ವಿಷಯಗಳು.

No Comments



"ಬೆಲೆ ಏರಿಕೆಯೇ ಕಾಂಗ್ರೆಸ್ ಸೋಲಿಗೆ ಕಾರಣ."

-ಸೋನಿಯಾ ಗಾಂಧಿ



"ಕಾವೇರಿ ವಿವಾದ ಬಗೆಹರಿಯಬೇಕೆಂದರೆ ದೇವೇ ಗೌಡರು ಉಪವಾಸ ಕೂರಲಿ."

-ಎಚ್. ಎನ್. ನಂಜೇ

"ದೇವೇಗೌಡರು ಸೋನಿಯಾರನ್ನು ಭೇಟಿ ಮಾಡಿದ್ದು ಸತ್ಯ."

- ಆರ್. ಎಲ್. ಜಾ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ಕಾವೇರಿ ನೀರಿಗಾಗಿ ವಿಜಯ್ ಮಲ್ಯರವರು ಮಹಾತ್ಮಗಾಂಧಿ ಪ್ರತಿಮೆಯಿಂದ ರಾಜಭವನದವರೆಗೆ ಮೆರವ ನಡೆಸಲಿದ್ದಾರೆ."

- ಪತ್ರಿಕಾ ವ

"ನಿಗಮ ಮಂಡಳಿಗೆ ಬಜೆಟ್ ಮಂಡನೆಯ ನಂ ನೇಮಕ ಮಾಡಲಾಗುವುದು."


- ವೈ. ಎಸ್. ವಿ.

ವಾರದ ಘೋಷಣೆ

ಕಾವೇರಿ ತೀರ್ಪನ್ನು ಅನುಷ್ಠಾನಗೊಳಿಸಲು ಸಾಧ್ಯ ಇಲ್ಲ.

- ಇತ್ತೀಚೆಗೆ ನಡೆದ ಸಮ್ಮೇಳನದ ಮೂಡಿ ಬಂದ ಅಭಿಪ್ರಾ

ವಾರದ ಅವಿವೇಕ



ಸಂಸತ್ತಿನಲ್ಲಿ ಕಾವೇರಿ ಬಗ್ಗೆ ಚರ್ಚಿಸಲು ಅವಕಾಶ ಕೊಟ್ಟ ರಕ್ತಪಾತವಾಗುತ್ತದೆ. ಅವರು ಬೀದಿಗಿಳಿಯುತ್ತಾರೆ. 91ರಲ್ಲಿ ಕರ್ನಾಟಕದಲ್ಲಿ 25 ಜನ ರಕ್ತಪಾತದಲ್ಲಿ ಸತ್ತಿದ್ದರು. ಆದ್ದರಿಂದ ಕಾವೇರಿ ವಿಷಯವನ್ನು ಚರ್ಚೆಗೇ ಕೈಗೆತ್ತಿಕೊಳ್ಳಬಾರದು

- ಟಿ. ಆರ್. ಬಾ

ಕೇಂದ್ರ ಮಂತ್ರಿ, ಸಂಸತ್ತಿನ

ವಾರದ ವಿವೇಕ



ನಾನು ಹಿಟ್ ನಿರ್ದೇಶಕನಾಗಿ ವುದು ಮತ್ತು ನನ್ನ ಅಲ್ಪ ಸ್ವಲ್ಪ ಯಶಸ್ಸು ಇರುವುದು ಹಳಸಲು ಚಿಂತಕರು ಮಾಡುವ ಸಿನಿಮಾ ಸೋಲಿನಲ್ಲಿ.

-ಯೋಗರಾಜ ಭಟ್

'ಮುಂಗಾರು ಮಳೆ' ಚಿತ್ರದ ನಿರ್ದೇ

ವಾರದ ಎಚ್ಚರಿಕೆ



ಚಿದಾನಂದಮೂರ್ತಿಯಂತಹ ಸಾಹಿತಿಗಳು ಕೆಲವು ವಿಚಾರಗಳಲ್ಲಿ ಸಲ್ಲದ ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸಬೇಕು

-ಮಹದೇವ ಪ್ರಸಾದ

ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗ

ಕೊನೆ ಮಾತು:

ಇನ್ನೇನು ಯಡಿಯೂರಪ್ಪನವರು ಎರಡನೇ ಬಜೆ ಮಂಡಿಸಲಿದ್ದಾರೆ. ಕಳೆದ ನಾಲ್ಕು ತಿಂಗಳಿಂದ ನೀಡುತ್ತಿ ಹಲವಾರು ಬಣ್ಣ ಬಣ್ಣದ ಭರವಸೆಗಳೆಲ್ಲಾ ಬಜೆಟ್ ಮುನ್ನವೇ ಹುಸಿಯಾಗುತ್ತಿವೆ. ಮೊನ್ನೆ ರಾಮಚಂದ್ರಗೌಡ ಲಾಟರಿ ಮನ್ನಾ ಇಲ್ಲ ಎಂದರು. ಯಡಿಯೂರಪ್ಪ ಸಾ ಮತ್ತು ಸಾರಾಯಿ ಮನ್ನಾ ಇಲ್ಲ ಎಂದರು. ಬಜೆಟ್ ಮುನ್ನವೇ ಕೊಟ್ಟ ಭರವಸೆಗಳಿಗೆ ಇಷ್ಟು ದ್ರೋ ಬಗೆದರೆ ಇನ್ನು ಬಜೆಟ್ಟನಲ್ಲಿ!!!!!

ಎಲ್ಲವನ್ನೂ ಹೇಳುವ ಸಮಯ ಬಂದಾಗ....

ಒಂದು ರೀತಿಯಲ್ಲಿ ಅದು ಫ್ಯಾಮಿಲಿ ಗೆಟ್ ಟುಗೆದರ್‌ನಂತಿತ್ತು. ನಾವು ಗೋವಿಂದಪ್ಪ ರಸ್ತೆಯಲ್ಲಿ ವಾಸಿಸುತ್ತಿದ್ದಾಗ, ಆಗ ನಮ್ಮ ಮನೆಗೆ ದಿನನಿತ್ಯ ಬರುತ್ತಿದ್ದ ಕಿ.ರಂ. ನಾಗರಾಜರವರು ನಮ್ಮನ್ನೆಲ್ಲ ಎತ್ತಿಕೊಂಡು ಆಟವಾಡಿಸುತ್ತಿದ್ದರು. ಇನ್ನು ಕೆ. ಮರುಳಸಿದ್ಧಪ್ಪನವರ ಮುಂದೆ ನನ್ನ ತಂಗಿ ಬೇಬಿ (ಕವಿತಾ) ರೂಲರ್ ಹಿಡಿದು 'ಎಬಿಸಿಡಿ' ಹೇಳಿಸುತ್ತಿದ್ದಳು. ಹೆಣ್ಣುಮಕ್ಕಳಿಲ್ಲದ ಹಿರಿಯ ಲೇಖಕಿ ಸಾರಾ ಅಬೂಬಕರ್‌ರವರಿಗೆ ನಾನು ಮಗಳಿದ್ದಂತೆ. ಮತ್ತು ಅಪ್ಪ ಸಹ ಗೌರವಿಸುತ್ತಿದ್ದ ಹಿರಿಯ ಬರಹಗಾರ ಡಾ. ಜಿ. ರಾಮಕೃಷ್ಣ.... ಇವರೆಲ್ಲರೊಂದಿಗೆ ಮಾರ್ಚ್ 8ರಂದು ನಾವು ಏರ್ಪಡಿಸಿದ್ದ 'ಲಂಕೇಶ್-72' ಕಾರ್ಯಕ್ರಮದಲ್ಲಿ ನಮ್ಮ ಸಂಸ್ಥೆಯ ಒಂದು ಆಧಾರಸ್ತಂಭವಾಗಿರುವ ಬಳಿದಾಳೆ ಈಶ ಮತ್ತು ನಮ್ಮ ಬಳಗದ ಆಪ್ತ ಮಿತ್ರರಾಗಿರುವ ಡಾ. ಎಂ.ಬಿ. ರಾಮಮೂರ್ತಿ ಇದ್ದರು.

ಇವರಲ್ಲದೆ ನಮ್ಮ ಪ್ರೀತಿಯ ಎಚ್.ಎಲ್. ಕೇಶವಮೂರ್ತಿ, ತಂಗಿ ಬೇಬಿ, ದತ್ತು ಸಹೋದರರಾದ ಅಜ್ಜಂಪುರ ವೆಂಕಟೇಶ್, ಯೋಗೀಶ್ ಸೂರಪ್ಪ, ಎಂ.ಸಿ. ನಾಗರಾಜ್, ನಮ್ಮವರೇ ಆದ ರಾಜು, ಶಿವಸುಂದರ್, ಸತೀಶ್, ಅರುಣ್, ನಾಗೇಶ್, ಪ್ರಸಾದ್, ವಾಸು, ದೀಪು, ಯುವರಾಜ್...... ಪಟ್ಟಿ ಉದ್ದವಾಗಿ ಕಲಾಕ್ಷೇತ್ರದಲ್ಲಿರುವ ಸೀಟುಗಳ ಸಂಖ್ಯೆಯಷ್ಟೇ ದೊಡ್ಡದಾಗುತ್ತದೆ. ಆದಕ್ಕೆ ಮೊದಲೇ ಸಿಂಪಲ್ ಆಗಿ ಹೇಳಿದ್ದು.... ಅದೊಂದು ಫ್ಯಾಮಿಲಿ ಗೆಟ್ ಟುಗೆದರ್‌ನಂತಿತ್ತು ಎಂದು!



ಅಂದಹಾಗೆ ನನ್ನ ಪ್ರೀತಿಯ ಅಪ್ಪ, ನಿಮ್ಮ ನೆಚ್ಚಿನ ಮೇಷ್ಟ್ರ ಹೆಸರಲ್ಲಿ ಯಾವುದೇ ಕಾರ್ಯಕ್ರಮ ನಡೆದರೂ ಅದು ಯಶಸ್ವಿಯಾಗುತ್ತದೆ ಎಂಬುದನ್ನು 'ಲಂಕೇಶ್ 72' ಕಾರ್ಯಕ್ರಮ ಮತ್ತೊಮ್ಮೆ ಸಾಬೀತುಪಡಿಸಿತು.

ನಮ್ಮ ಕಾರ್ಯಕ್ರಮ ಇದ್ದುದು ಗುರುವಾರ ಸಂಜೆ ನಾಲ್ಕಕ್ಕೆ. ಜನರಿನ್ನೂ ತಮ್ಮ ಆಫೀಸಿನಲ್ಲಿ ಕೆಲಸ ಮಾಡುತ್ತಿರುವ ಸಮಯ ಅದು. ಆದರೂ ಅದೆಷ್ಟೋ ಜನ 3.30ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ಹಾಜರಿದ್ದರು. ಅವರಲ್ಲಿ ಬಹಳಷ್ಟು ಜನ ದೂರದ ಊರುಗಳಿಂದ ಬಂದಿದ್ದರು. ಕಾರ್ಯಕ್ರಮ ಶುರುವಾದ ಹದಿನೈದು ನಿಮಿಷಗಳಲ್ಲಿ ಕಲಾಕ್ಷೇತ್ರ ತುಂಬಿತ್ತು.

ಅತಿಥಿಯಾಗಿ ಬರಬೇಕಿದ್ದ ಯು.ಆರ್. ಅನಂತಮೂರ್ತಿಯವರು ತಮ್ಮ ಬೇರೆ ಕಾರ್ಯಕ್ರಮ ಮುಗಿಸಿಕೊಂಡು ಬಂದು ಸಭಿಕರಾಗಿ ಕುಳಿತು ನಮ್ಮೆಲ್ಲರ ಸಂತೋಷವನ್ನು ಹೆಚ್ಚಿಸಿದರು.


ಪ್ರಾಸ್ತಾವಿಕವಾಗಿ ಮೊದಲು ಮಾತನಾಡಿದ ನಾನು ಅಪ್ಪನ 72ನೇ ಹುಟ್ಟುಹಬ್ಬದ ಮತ್ತು 'ಲಂಕೇಶ್' ವಾರಪತ್ರಿಕೆಯ ಎರಡನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಾವೆಲ್ಲರೂ ಎದುರಿಸುತ್ತಿರುವ ಸವಾಲುಗಳು ಮತ್ತು ಅವುಗಳಿಗೆ ಹುಡುಕಿಕೊಳ್ಳಬೇಕಿರುವ ಉತ್ತರಗಳ ಅವಶ್ಯಕತೆ ಬಗ್ಗೆ ಮಾತನಾಡಿದೆ.

ಕಳೆದ ಏಳು ವರ್ಷಗಳಿಂದ "ಲಂಕೇಶರು ಇದ್ದಿದ್ದರೆ?" ಎಂಬ ಪ್ರಶ್ನೆ ನಮ್ಮೆಲ್ಲರನ್ನೂ ಕಾಡಿದೆ. ಆದರೆ ಅಪ್ಪ ಎಷ್ಟೊಂದು ಜನರ ಮೇಲೆ ಪ್ರಭಾವ ಬೀರಿದ್ದಾರೆಂದರೆ ಅವರೆಲ್ಲರಲ್ಲೂ ಲಂಕೇಶ್ ಒಂದಲ್ಲಾ ಒಂದು ರೀತಿಯಲ್ಲಿ ಜೀವಂತವಾಗಿದ್ದಾರೆ. ಅಷ್ಟೇ ಅಲ್ಲ, ಅಪ್ಪ ಇವತ್ತಿಗೂ ಜೀವಂತವಾಗಿದ್ದಾರೆ ಎಂಬುದಕ್ಕೆ ಅವರ ಹೊಸ 'ನೀಲು ಕಾವ್ಯ' ಪುಸ್ತಕವೇ ಸಾಕ್ಷಿ. ಬದುಕಿನೊಂದಿಗೆ, ಜಗತ್ತಿನೊಂದಿಗೆ, ಇಲ್ಲಿನ ಜನ, ಪ್ರೀತಿ, ಪಕ್ಷಿ, ಪ್ರಾಣಿ, ... ಎಲ್ಲರೊಂದಿಗೆ ತೀಕ್ಷ್ಣವಾಗಿ ಸಂವಾದಿಸಿದ, ಸಂಘರ್ಷ ನಡೆಸಿದ ಅಪ್ಪ ಒಂದು ರೀತಿಯಲ್ಲಿ ನೀಲು ಕಾವ್ಯಗಳ ಮೂಲಕ ಜೀವನದ ದಾರ್ಶನಿಕ ಕೂಡ.... ಹೀಗೆ ಸಾಗಿ ಕೊನೆಗೆ ಅಪ್ಪನ ಆಶಯಗಳನ್ನು ಎತ್ತಿಹಿಡಿದು ಮತ್ತು ಅವರಂತೆ ಭ್ರಷ್ಟಾಚಾರ, ಜಾತೀಯತೆ ಮತ್ತು ಕೋಮುವಾದದ ವಿರುದ್ಧದ ನಮ್ಮ ಹೋರಾಟವನ್ನು ಮುಂದುವರೆಸುತ್ತೇವೆ ಎಂದು ಹಲವು ಮಾತುಗಳನ್ನು ಹೇಳಿ ಕುಳಿತೆ.


ನಂತರ ಮಾತನಾಡಿದ ಬಳಿದಾಳೆ ಈಶ ಹೇಗೆ ಅವರ ಸಂಪಾದಕತ್ವದ 'ಗೈಡ್' ಮಾಸಿಕ ಒಂದು ತಲೆಮಾರನ್ನು ರೂಪಿಸಲು, ಅವರಲ್ಲಿ ಲಂಕೇಶರಿಗೆ ಪ್ರಿಯವಾಗಿದ್ದ ಆಶಯಗಳನ್ನು ಬಿತ್ತಲು ಯತ್ನಿಸುತ್ತಿದೆ ಎಂದು ವಿವರಿಸುತ್ತಾ, ಇವತ್ತಿನ ಯುವಜನತೆಯ ಅಸಹಾಯಕತೆ, ಅವರ ಸುತ್ತಲೂ ನಮ್ಮ ಪ್ರಭುತ್ವ ನಿರ್ಮಿಸಿರುವ ಸಂಕಷ್ಟದ ಪರಿಸ್ಥಿತಿಯನ್ನು ಟೀಕಿಸಿದರು.

ಅಪ್ಪ ಬಹಳ ಮೆಚ್ಚಿದ್ದ ಮತ್ತು ಪ್ರೋತ್ಸಾಹಿಸಿದ್ದ ಲೇಖಕಿ ಸಾರಾ ಅಬೂಬಕರ್ ಕಾರ್ಯಕ್ರಮದ ಮುಖ್ಯ ಅತಿಥಿ. ಲಂಕೇಶರ ಬಗೆಗಿನ ತಮ್ಮ ನೆನಪುಗಳನ್ನು ಮೆಲುಕು ಹಾಕಿ, ಇವತ್ತು ಮುಸ್ಲಿಂ ಸಮುದಾಯದ ಮುಂದಿರುವ ಸಮಸ್ಯೆ ಮತ್ತು ಸವಾಲುಗಳ ಬಗ್ಗೆ ಮಾತನಾಡಿದರು. ಅವರು ನನ್ನ ಬಗ್ಗೆ 'ಹೆಣ್ಣು ಹುಣ್ಣಲ್ಲ ಎಂದು ತೋರಿಸಿಕೊಟ್ಟ ಗೌರಿಯಂತಹ ಹೆಣ್ಣುಮಕ್ಕಳು ಇರಲವ್ವಾ ಮನೆತುಂಬ. ನನಗೆ ಹೆಣ್ಣುಮಕ್ಕಳಿಲ್ಲ, ನೀನೇ ನನ್ನ ಮಗಳು' ಎಂದಾಗ.... ನೀವು ಈಗಾಗಲೇ ಊಹಿಸಿರಬೇಕು! ನನ್ನ ಕಣ್ಣಲ್ಲಿ ನೀರು.

ಕಂಡಹಾಗೆ



ಆ ನಂತರ 'ನೀಲು ಕಾವ್ಯ' ಪುಸ್ತಕವನ್ನು ಬಿಡುಗಡೆ ಮಾಡಿದ ಕಿ.ರಂ. ನಾಗರಾಜರವರು ನೀಲು ಕಾವ್ಯಗಳ ಮೂಲಕ ಲಂಕೇಶರ ಕಾವ್ಯಾಸಕ್ತಿ, ಅವರ ಆಲೋಚನೆಯ ವಿಸ್ತಾರ, ಈ ಕಾವ್ಯಗಳ ಪರಿಣಾಮಕಾರಿತನದ ಬಗ್ಗೆ ತುಂಬ ಚೆನ್ನಾಗಿ ಮಾತನಾಡಿದರು. ಹಾಗೆಯೇ ನಮ್ಮ ಡಾ. ಎಂ.ಬಿ. ರಾಮಮೂರ್ತಿ ಅನುವಾದಿಸಿರುವ ಖುಷ್ವಂತ್‌ಸಿಂಗ್‌ರವರ 'ಟ್ರೈನ್ ಟು ಪಾಕಿಸ್ತಾನ್' ಪುಸ್ತಕವನ್ನು ಬಿಡುಗಡೆ ಮಾಡಿದ ಡಾ. ಕೆ. ಮರುಳಸಿದ್ಧಪ್ಪನವರು ಭಾರತದಲ್ಲಿ ಇವತ್ತು ತಾಂಡವವಾಡುತ್ತಿರುವ ಹಿಂದೂತ್ವ ಎಂಬ ಕೋಮುವಾದವನ್ನು ತರಾಟೆಗೆ ತೆಗೆದುಕೊಂಡರು.



ನಮ್ಮ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಹಿರಿಯ ಚಿಂತಕ ಮತ್ತು ಬರಹಗಾರ ಡಾ. ಜಿ. ರಾಮಕೃಷ್ಣರವರ ಭಾಷಣ ಅಂದಿನ ಹೈಲೈಟ್. ಕರ್ನಾಟಕದ ಪ್ರಸ್ತುತ ರಾಜಕಾರಣವನ್ನು ವಿಶ್ಲೇಷಿಸುತ್ತಾ ರಾಮಕೃಷ್ಣರವರು ಕರಾವಳಿ ಪ್ರದೇಶದಲ್ಲಿ ಇವತ್ತು ಹೇಗೆ ಸಂಘಪರಿವಾರದ ಮತ್ತು ಪೊಲೀಸರ ದೌರ್ಜನ್ಯ ಹೆಚ್ಚಾಗಿದೆ ಎಂಬುದನ್ನು ವಿವರಿಸಿದರು. ಮಾತ್ರವಲ್ಲ, ಇಂತಹ ಸಂದರ್ಭದಲ್ಲಿ ಪತ್ರಕರ್ತ ಸೀತಾರಾಮ್ ಅವರನ್ನು ತಮ್ಮ ಇಲಾಖೆಯವರೇ ಬಂಧಿಸಿ, ಹಿಂಸೆ ನೀಡುತ್ತಿದ್ದರೆ 'ಸೋಷಲಿಸ್ಟ್' ಎನಿಸಿಕೊಂಡಿರುವ ಗೃಹಮಂತ್ರಿ ಎಂ.ಪಿ. ಪ್ರಕಾಶ್ ತೆಪ್ಪಗಿರುವುದನ್ನು ಖಂಡಿಸಿದರು. ರಾಮಕೃಷ್ಣರವರು ಲಂಕೇಶರನ್ನು ನೆನಪಿಸಿಕೊಳ್ಳುತ್ತಾ ಹೇಳಿದ ಮಾತುಗಳು ಹೃದಯಸ್ಪರ್ಶಿಯಾಗಿದ್ದವು.

ಪತ್ರಿಕೆ ಮತ್ತು ಪ್ರಕಾಶನದ ನಮ್ಮ ಈ ಕಾರ್ಯಕ್ರಮ ನಿಗದಿತ ವೇಳೆಗೆ ಮುಗಿದ ನಂತರ 'ಲಂಕೇಶ್ ಚಿತ್ರ ಪ್ರಶಸ್ತಿ' ಕಾರ್ಯಕ್ರಮವಿತ್ತು. ಕಳೆದ ವಾರ ಬರೆದಂತೆ ಈ ಸಾಲಿನ 'ಲಂಕೇಶ್ ಚಿತ್ರ ಪ್ರಶಸ್ತಿ'ಯನ್ನು ಮರಾಠಿ ಸಿನಿಮಾ 'ಮಾತಿ ಮಾಯ್' ಚಿತ್ರದ ನಿರ್ದೇಶಕಿ ಚಿತ್ರಾ ಪಾಳೇಕರ್‌ರವರಿಗೆ ನೀಡಲಾಯಿತು. ಸಧ್ಯ ಪಾಳೇಕರ್‌ರವರು ಅಮೆರಿಕದ ಚಿತ್ರೋತ್ಸವವೊಂದರಲ್ಲಿ ಭಾಗವಹಿಸುತ್ತಿರುವುದರಿಂದ ಅವರ ಪರವಾಗಿ ನಮ್ಮ ಸ್ನೇಹಿತೆ ಅರುಂಧತಿ ನಾಗ್ ಪ್ರಶಸ್ತಿ ಸ್ವೀಕರಿಸಿದರು. ಅದನ್ನು ಪ್ರದಾನ ಮಾಡಿದ್ದು ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ.

'ಮಾತಿ ಮಾಯ್' ಚಿತ್ರ ಜನರ ಮೇಲೆ ಅದೆಂತಹ ಪ್ರಭಾವ ಬೀರಿತೆಂದರೆ, ಅದೆಷ್ಟೋ ಜನ ಅದನ್ನು ವೀಕ್ಷಿಸುತ್ತಾ ಕಣ್ಣೀರಿಟ್ಟರು. ಚಿತ್ರ ಪ್ರದರ್ಶನ ಮುಗಿದ ನಂತರ ಹಲವರು 'ಇಷ್ಟೊಂದು ಒಳ್ಳೆಯ ಚಿತ್ರ ತೋರಿಸಿದ್ದಕ್ಕೆ ಧನ್ಯವಾದಗಳು' ಎಂದು ಹೇಳಿದರೆ, ಬಹಳಷ್ಟು ಜನ 'ಇದರ ಸಿ.ಡಿ.ಯನ್ನು ಕೊಡುತ್ತೀರಾ? ನಾವು ನಮ್ಮ ಬಳಗದವರಿಗೆ ಇದನ್ನು ತೋರಿಸುತ್ತೇವೆ' ಎಂದು ಕೇಳಿದರು.

ಚಿತ್ರ ಪ್ರದರ್ಶನ ನಡೆಯುತ್ತಿದ್ದಾಗ ಪುಟ್ಟ ಇಶಾಳೊಂದಿಗೆ ನಾನು ರವೀಂದ್ರ ಕಲಾಕ್ಷೇತ್ರದ ಮೆಟ್ಟಿಲುಗಳ ಮೇಲೆ ಸ್ವಲ್ಪಹೊತ್ತು ಕುಳಿತಿದ್ದೆ. ಆಗ ಆವಳಿಗೆ "ನಿನಗೆ ಗೊತ್ತಾ ಇಶಾ? ಇದೇ ಮೆಟ್ಟಿಲುಗಳ ಮೇಲೆ ಹಿಂದೊಮ್ಮೆ ನಿನ್ನ ತಾತ ಲಂಕೇಶ್ ಕೂಡ ಕೂತಿತ್ತು. ಇಲ್ಲಿ ನಾಟಕ ಆಡಿಸಿತ್ತು, ಮಾತಾಡಿತ್ತು. ನಾನು-ನೀನು ಕೂತಿರುವಂತೆಯೇ ತಾತ ಕೂಡ ಕೂತು ಹರಟೆ ಹೊಡೆದಿತ್ತು" ಅಂದೆ.

"ಯಾಕೆ?" ಅಂತ ಕೇಳಿದಳು ಇಶಾ. ಆಕೆಗೆ ಎಲ್ಲವನ್ನೂ ಹೇಳಲು ಇನ್ನೂ ಸಮಯವಿದೆ. ಆದರೆ ನಿಮ್ಮೊಂದಿಗೆ ಎಲ್ಲವನ್ನೂ ಹೇಳಬೇಕಾದ ಸಂಯವಲ್ಲವೆ ಇದು....

-ಗೌರಿ ಲಂಕೇಶ್

150 ಕೋಟಿ ರೂ. ಗಣಿ ಲಂಚ ಹಗರಣದ ತನಿಖೆ ನಡೆಸಬೇಕಿದ್ದ ನಿವೃತ್ತ ನ್ಯಾಯಮೂರ್ತಿ ಯು.ಎಲ್. ಭಟ್ ಆಯೋಗವು ತಂತಾನೇ ನಿಷ್ಕ್ರಿಯಗೊಳ್ಳುವಂತೆ ಕುಮಾರಸ್ವಾಮಿ ಸರ್ಕಾರ ಷಡ್ಯಂತ್ರ ನಡೆಸಿ ಯಶಸ್ವಿಯಾಗಿದೆ.


"ಗಣಿ ಲಂಚ ಪ್ರಕರಣದ ಬಗ್ಗೆ ಸಿಬಿಐ ತನಿಖೆ ಬೇಕಿಲ್ಲ, ನಾವೇ ಆಯೋಗ ನೇಮಿಸುತ್ತೇವೆ, ಯಾರು ಬೇಕಾದವರೂ ಸಾಕ್ಷಿ ಆಧಾರಗಳಿದ್ದರೆ ನೀಡಬಹುದು" ಎಂದು ಅವತ್ತು ಸತ್ಯಹರಿಶ್ಚಂದ್ರನಂತೆ ಮಾತನಾಡಿದ್ದ ದೇವೇಗೌಡ, ಕುಮಾರಸ್ವಾಮಿ ಪಟಾಲಂನ ನಿಜ ಬಣ್ಣ ಕೊನೆಗೂ ಬಯಲಾಗಿದೆ.

ಈ ಏಕಸದಸ್ಯ ಆಯೋಗದ ನಿವೃತ್ತ ನ್ಯಾ. ಭಟ್‌ರವರೇ ಬೇಸರದಿಂದ ಈಗ ರಾಜೀನಾಮೆ ನೀಡಿ ಹೊರಬಂದಿದ್ದಾರೆ. ಈ ಇಡೀ ಘಟನಾವಳಿಗಳ ಸರಮಾಲೆಯನ್ನು ಅಂದರೆ 150 ಕೋಟಿ ರೂ. ಲಂಚ ನುಂಗಿದ್ದು, ಜನಾರ್ದನ ರೆಡ್ಡಿ ಗಲಾಟೆ, ಭಟ್ ಆಯೋಗದ ನೇಮಕ ಹಾಗೂ ಈಗ ಆಯೋಗವನ್ನೇ ಸರ್ಕಾರ ರದ್ದು ಮಾಡಿರುವುದನ್ನು ಗಮನಿಸಿದರೆ ಸಾಕು, ಮೇಲ್ನೋಟಕ್ಕೆ ಇದು ನಷ್ಟಬಾಲ್‌ಗಳ ಸರ್ಕಾರ ಎಂಬುದು ಗೊತ್ತಾಗುತ್ತದೆ.

ಇದರ ಪ್ರಮುಖ ರೂವಾರಿಗಳೆಂದರೆ ದೇವೇಗೌಡ, ಕುಮಾರಸ್ವಾಮಿ ಹಾಗೂ ಗೃಹ ಸಚಿವ ಹಾಗೂ ಗೌಡರ ಕುಟುಂಬದ ಗುಲಾಮ ಎಂ.ಪಿ. ಪ್ರಕಾಶ್. ಇವರೆಲ್ಲರೂ ನೇರವಾಗಿ ಅಥವಾ ಪರೋಕ್ಷವಾಗಿ ಅಕ್ರಮ ಅದಿರು ದಂಧೆ ಹಾಗೂ ಲಂಚ ಪ್ರಕರಣಕ್ಕೆ ಸಂಬಂಧಿಸಿದವರೇ ಆಗಿದ್ದಾರೆ. ಈಗ ಭಟ್ ಆಯೋಗ ಬೇಕಿಲ್ಲ, ಲೋಕಾಯುಕ್ತರಿಗೆ ಈ ಪ್ರಕರಣದ ತನಿಖೆ ವಹಿಸುತ್ತೇವೆ ಎನ್ನುತ್ತಿದೆ ಸರ್ಕಾರ. ಆಶ್ಚರ್ಯ ಏನೆಂದರೆ ಕಳೆದ ವರ್ಷದ ಜನವರಿಯಲ್ಲೇ **illegal mining and illegal transport of iron ore** ಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಲೋಕಾಯುಕ್ತರಿಗೆ ವಹಿಸಲಾಗಿತ್ತು. ಅದರ ಬೆನ್ನಹಿಂದೆಯೇ ಏಕಸದಸ್ಯರಿದ್ದ ಭಟ್ ಆಯೋಗವನ್ನು ನೇಮಿಸಲಾಯಿತು. ಇದರರ್ಥ ಕುಮಾರಸ್ವಾಮಿಗೆ ಅಷ್ಟು ನೈತಿಕ ಧೈರ್ಯವಿತ್ತು ಎಂದಲ್ಲ, ಬದಲಾಗಿ ಲೋಕಾಯುಕ್ತರು ಮಾಹಿತಿ ನೀಡುವಂತೆ ಕೇಳಿದಾಗ 'ಭಟ್ ಆಯೋಗಕ್ಕೆ ಕೊಟ್ಟಿದ್ದೇವೆ' ಎಂತಲೂ, ಭಟ್ ಆಯೋಗವು ಮಾಹಿತಿ ಕೇಳಿದರೆ 'ಕಡತ ಲೋಕಾಯುಕ್ತರ ಬಳಿ ಇದೆ'ಯೆಂತಲೂ ನಾಟಕ ಮಾಡುತ್ತ ಬಂದಿತ್ತು ಹಾಲಿ ಕೋ-ಜಾ ಸರ್ಕಾರ.




ಸಂತೋಷ್ ಹೆಗ್ಡೆ





ನ್ಯಾಯಮೂರ್ತಿ ಯು.ಎಲ್. ಭಟ್

ಭಟ್ ಆಯೋಗ ರದ್ದು



ಗೌಡ, ಪ್ರಕಾಶ್ ಪಿತೂರಿ






ಕಾಂಗ್ರೆಸ್ ಮೇಲೆ ಗೂಬೆ

ಭಟ್ ಆಯೋಗ ನೇಮಿಸುವಾಗಲೇ ಗೌಡರ ಕುಟುಂಬ ಈ ಆಯೋಗದ ಕಾರ್ಯವ್ಯಾಪ್ತಿ, ಅವಧಿ ಹಾಗೂ ಮುಂದೆ ಅದನ್ನು ಹೇಗೆ ನಿರರ್ಥಕಗೊಳಿಸಬೇಕೆಂದು ಪಕ್ಕಾ ಪ್ಲಾನ್ ಮಾಡಿಕೊಂಡಿತ್ತು, ಅದರಂತೆ 2006ರ ಜುಲೈನಲ್ಲಿ ಭಟ್ ಆಯೋಗ ನೇಮಿಸಿ ಎರಡು ತಿಂಗಳೊಳಗೆ ಮಧ್ಯಂತರ ವರದಿ ನೀಡುವಂತೆಯೂ ನಂತರದ ನಾಲ್ಕು ತಿಂಗಳೊಳಗೆ ಪೂರ್ಣ ವರದಿ ನೀಡಬೇಕೆಂತಲೂ ಕಾಲಾವಧಿ ನಿಗದಿ ಮಾಡಲಾಗಿತ್ತು, ಮಧ್ಯಂತರ ವರದಿಯಲ್ಲಿ ಎಸ್.ಎಂ. ಕೃಷ್ಣರ ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ವರದಿ ಇರುವಂತೆಯೇ ಆಯೋಗದ ಕಾರ್ಯ ಕಲಾಪವನ್ನು ಫಿಕ್ಸ್ ಮಾಡಲಾಗಿತ್ತು. ಆದರೆ ನಿವೃತ್ತ ನ್ಯಾ. ಭಟ್ ಸರ್ಕಾರದ ಮೂಗಿನ ನೇರಕ್ಕೆ ಆಯೋಗದ ಕಾರ್ಯಕಲಾಪ ನಡೆಸಲು ಒಪ್ಪಲಿಲ್ಲ, 150 ಕೋಟಿ ರೂ. ಗಣಿ ಲಂಚದ ಪೂರ್ಣ ವಿವರಗಳನ್ನು ಮೊದಲೇ ನೀಡುವಂತೆ ಆಗ್ರಹ ಪಡಿಸಿದ್ದರು. ಸರ್ಕಾರಕ್ಕೆ ಇದು ನುಂಗಲಾರದ ಬಿಸಿತುಪ್ಪವಾಗಿ ಹೋಯಿತು.

ಕಾಸರಗೋಡಿನವರಾದ ಯು.ಎಲ್. ಭಟ್ ಮಧ್ಯಪ್ರದೇಶ ಹಾಗೂ ಅಸ್ಸಾಂ ರಾಜ್ಯಗಳ ಹೈಕೋರ್ಟ್ ಮುಖ್ಯ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿ ಪ್ರಾಮಾಣಿಕ ಹಾಗೂ ದಕ್ಷರೆಂದು ಕೀರ್ತಿ ಪಡೆದಿದ್ದವರು. ಅಂತಹ ಪ್ರಾಮಾಣಿಕರನ್ನೇ ಕುಮಾರಸ್ವಾಮಿ ಸರ್ಕಾರ ಏಕಸದಸ್ಯ ಆಯೋಗಕ್ಕೆ ನೇಮಿಸಿದ ಹಿನ್ನೆಲೆ ಏನೆಂಬುದು ಈಗ ಕುತೂಹಲಕಾರಿ ವಿಚಾರವೇ. ಏಕೆಂದರೆ ಭಟ್ ಆಯೋಗ ಸರ್ಕಾರದ ಕೈಗೊಂಬೆಯಂತಿರಲು ಆರಂಭದಲ್ಲೇ ನಿರಾಕರಿಸಿ ತನ್ನದೇ ಸ್ವತಂತ್ರ, ನ್ಯಾಯವಿಮೋಚನೆಯ ಹಾದಿ ಹಿಡಿಯಲಿದೆ ಎಂಬ ಸುಳಿವು ಸರ್ಕಾರಕ್ಕೆ ಸಿಕ್ಕಿಬಿಟ್ಟಿತ್ತು. ಆಗಲೇ ಭಟ್ ಆಯೋಗಕ್ಕೆ ಗಣಿ ಲಂಚಕೋರ ಸರ್ಕಾರದ ಕಿರುಕುಳ ಶುರುವಾಗಿದ್ದು.

ಆಯೋಗ ನೇಮಕಗೊಂಡ ತಿಂಗಳಾದರೂ ಭಟ್‌ರವರಿಗೆ ಒಂದು ಸುಸಜ್ಜಿತ ಕಚೇರಿಯನ್ನೇ ನೀಡದೆ ಸತಾಯಿಸಲಾಯಿತು. ನಂತರ ಕಚೇರಿ ನೀಡಿದರೂ ಕಾರ್ಯದರ್ಶಿ ಹಾಗೂ ಸಿಬ್ಬಂದಿ ನೀಡಲು ಎರಡು ತಿಂಗಳಾದವು. ಅಷ್ಟರಲ್ಲಿ ಮಧ್ಯಂತರ ವರದಿ ನೀಡಲು ಆಯೋಗಕ್ಕೆ ನೀಡಿದ್ದ ಕಾಲಮಿತಿ ಆಗಿಹೋಗಿತ್ತು. ಈ ನಡುವೆ ಅರಣ್ಯ ಮಂತ್ರಿ ಚನ್ನಿಗಪ್ಪ ಹಾಗೂ ಗೃಹಮಂತ್ರಿ ಎಂ.ಪಿ. ಪ್ರಕಾಶ್ ಆಯೋಗದ ತನಿಖೆಯು ಎಸ್.ಎಂ. ಕೃಷ್ಣ ಕಾಲದ ಕಾಂಗ್ರೆಸ್ ಆಡಳಿತದ ಅವಧಿಯತ್ತ ಮಾತ್ರ ಗಮನ ಹರಿಸುವಂತೆ ಮಾಡಲು ಆ ಅವಧಿಯ ಗಣಿ ಕಡತಗಳನ್ನಷ್ಟೆ ಒದಗಿಸಿ ಸಾಕಷ್ಟು ವಶೀಲಿಬಾಜಿ ನಡೆಸಲು ಯತ್ನಿಸಿದರೆಂದು ಕೇಳಿಬಂದಿದೆ. ಆದರೆ ಆಯೋಗ ಯಾರ ಮಾತಿಗೂ ಬೆಲೆ ನೀಡಲಿಲ್ಲ, ಯಾವ ಪ್ರಭಾವಕ್ಕೂ ಮಣಿಯಲಿಲ್ಲ.

ಖದೀಮ ಬಡೇರಿಯಾನ ಭಯ



ಭಟ್ ಆಯೋಗದ ಕಾರ್ಯವೈಖರಿ ನಿಜಕ್ಕೂ ಉಸಿರು ಕಟ್ಟಿಸಿದಂತೆ ಸರ್ಕಾರಕ್ಕೆ ಭಾಸವಾಗಿದ್ದು ಒಂದು ವಿಚಾರದಲ್ಲಿ.

ಆಯೋಗಕ್ಕೆ ಸರ್ಕಾರ ನೀಡುವ ಪ್ರತಿ ಮಾಹಿತಿಯೊಂದಿಗೂ ಸಂಬಂಧಿಸಿದ ಅಧಿಕಾರಿಯ ಪ್ರಮಾಣಪತ್ರ (Affidavit) ಇರಲೇಬೇಕೆಂದು ಆದೇಶಿಸಿತ್ತು. ಇದರಿಂದ ಭೀತಿಗೊಳಗಾಗಿದ್ದು ಗಣಿ ಇಲಾಖೆಯ ಹಾಲಿ ನಿರ್ದೇಶಕ ಗೋವಿಂದರಾಮ ಬಡೇರಿಯಾ.

ಈ ಹಿಂದೆ ಬಾಗಲಕೋಟೆ ಜಿಲ್ಲಾಧಿಕಾರಿಯಾಗಿ ಭ್ರಷ್ಟನೆಂಬ ಕುಖ್ಯಾತಿ ಪಡೆದಿದ್ದ ಬಡೇರಿಯಾ ಗಣಿ ಹಗರಣದಲ್ಲೂ ಸಾಕಷ್ಟು ಅಪರಾತಪರಾ ನಡೆಸುತ್ತಿದ್ದಾನೆ. ಅವನಿಗೆ ತಾನೆಲ್ಲಿ ಸಿಕ್ಕಿಬೀಳುತ್ತೇನೊ ಎಂಬ ಭೀತಿ. ಹಾಗಾಗಿ ತಾನು ಏನೇ ಮಾಹಿತಿ ಕೊಟ್ಟರೂ ಅಫಿಡವಿಟ್‌ನೊಂದಿಗೆ ಕೊಡಲಾಗುವುದಿಲ್ಲ ಎಂದು ತಪ್ಪಿಸಿಕೊಂಡು ಬಿಟ್ಟ. ಅಷ್ಟೇ ಅಲ್ಲ, ಭಟ್ ಆಯೋಗದ ತನಿಖೆಯ ಸ್ವರೂಪ ಹಾಗೂ ಆಯೋಗ ಕೇಳುತ್ತಿದ್ದ ಮಾಹಿತಿಗಳ ವಿವರಗಳನ್ನೆಲ್ಲಾ ಸಚಿವ ಚನ್ನಿಗಪ್ಪನಿಗೆ ರಹಸ್ಯವಾಗಿ ರವಾನಿಸುತ್ತಿದ್ದ.

ಬಡೇರಿಯಾನ ಭೀತಿ ಅರ್ಥಾತ್ ಚನ್ನಿಗಪ್ಪ, ಎಂ.ಪಿ. ಪ್ರಕಾಶ್ ಹಾಗೂ ಕುಮಾರಸ್ವಾಮಿಗಿದ್ದ ಭೀತಿ ಏನೆಂದರೆ ಆಯೋಗಕ್ಕೆ ಒಂದು ಸಲ ಅಫಿಡವಿಟ್‌ನೊಂದಿಗೆ ಏನೇ ವಿವರ ನೀಡಿದರೂ, ನಂತರ ಅದನ್ನು ಬದಲಾಯಿಸಲು ಅವಕಾಶ ಸಿಗುವುದಿಲ್ಲ, ಅಷ್ಟೇ ಅಲ್ಲ, ಕಡತ ದಾಖಲೆಗಳನ್ನು ತಿದ್ದುವುದು ಅಸಾಧ್ಯವಾಗಿ ಬಿಡುತ್ತದೆ.

ಬಹಳ ಮುಖ್ಯವಾಗಿ ಈಗ ಗಣಿ ಇಲಾಖೆಯಲ್ಲಿರು[...] ಕಡತಗಳನ್ನಷ್ಟೇ ಪರಿಶೀಲಿಸಿದರೂ ಗೌಡರ ಪುತ್ರ ಸಂತಾ[...] ಹಾಗೂ ಚನ್ನಿಗಪ್ಪ ನಡೆಸಿರುವ ಅಕ್ರಮಗಳು ಬಯಲಾಗ[...]

ಬಿಳಿದಾಳೆ ಈಶ

ತ್ತವೆ. ಬಳ್ಳಾರಿಯ ಗಣಿ ಡಾನ್‌ಗಳಾದ ಬೆಸ್ಟ್ ಸ್ಕೂಲ[...] ನಾಗಪ್ಪ, ಮಾಜಿ ಶಾಸಕ ಒಡ್ಡರ ನಾಗಪ್ಪನ ಉತ್ತರಾಧಿಕಾ[...] ಎಂದು ಹೇಳಿಕೊಂಡಿದ್ದ ಜಯರಾಂ, ಈಗಿನ ಕುರು[...]ಗೋಡು ಶಾಸಕ ಸೂರ್ಯನಾರಾಯಣ ರೆಡ್ಡಿ ಮುಂತಾದ[...]ವರೆಲ್ಲಾ ಜೈಲಿಗೆ ಹೋಗಬೇಕಾಗುತ್ತದೆ. ಮಿನರಲ್[...] ಸೇಲ್ಸ್ ಪ್ರೈ ಲಿ. ಕಂಪನಿ ವಿರುದ್ಧ ಈ ಜಯರಾಮ[...] ಹಾಗೂ ಸಚಿವ ಎಂ.ಪಿ. ಪ್ರಕಾಶರ ಪುತ್ರರತ್ನ ರ[...] ನಡೆಸಿದ ಗೂಂಡಾಗಿರಿಗಳೂ ತನಿಖೆಗೊಳಪಡಬೇಕಾಗು[...]ತ್ತಿತ್ತು.

ಗೌಡರ ಕುಟುಂಬದ ಶಾಖಾಂಬರಿ ಎಂಟರ್‌ಪ್ರೈಸಸ್[...] ಕೋಟ್ಯಂತರ ರೂ.ಗಳ ಅದಿರು ಟ್ರೇಡಿಂಗ್ ಅವ್ಯವಹಾ[...]ಗಳು, ಮುಗ್ಧ ಮಹಿಳೆ ಅನಿತಾ ಕುಮಾರಸ್ವಾಮಿಯ ಚಾಲಾಕಿತನಗಳೆಲ್ಲವೂ ಬಯಲಾಗುತ್ತಿದ್ದವು.

ಇಷ್ಟೆಲ್ಲಾ ಅನಾಹುತಗಳಾಗುತ್ತವೆಂದು ಗೊತ್ತಾದ ಮೇಲೂ ಗಣಿಕಳ್ಳರು[...] ತನಿಖೆ ನಡೆಯಲು ಬಿಟ್ಟಾರೆಯೇ?

ಹಾಗಾಗಿ ಅವಧಿ ತೀರಿತೆಂದೂ, ಸಾರ್ವಜನಿಕರ್‍ಯಾರೂ ಈ ಹಗರಣದ ಬಗ್ಗೆ ಆಸಕ್ತಿ ತೋರಿಸಿಲ್ಲವೆಂತಲೂ ಆರೋಪಿ[...] ಈಗ ಭಟ್ ಆಯೋಗವೇ ಕೊನೆಯುಸಿರೆಳೆಯುವಂತೆ ಕುಮಾರಸ್ವಾಮಿ ನೋಡಿಕೊಂಡಿದ್ದಾರೆ. 2007ರ ಜನವ[...] 22ಕ್ಕೆ ಆಯೋಗದ ಅವಧಿ ಮುಗಿಯುವಂತೆ ಮೊದಲೇ[...] ನಿಗಧಿಯಾಗಿತ್ತಾದರೂ ತಮಗೆ ಇನ್ನೂ 6 ತಿಂಗ[...] ಕಾಲಾವಕಾಶ ನೀಡುವಂತೆ ಭಟ್ ಸರ್ಕಾರವನ್ನ[...] ಕೋರಿದ್ದರು. ಅಂಥ ಒಕ್ಕಣೆಯ ಪತ್ರವನ್ನು 2006[...] ಡಿಸೆಂಬರ್‌ನಲ್ಲೇ ಭಟ್ ಬರೆದಿದ್ದರು. ಆದರೆ ಸರ್ಕಾ[...] ಅವಧಿ ವಿಸ್ತರಿಸುವ ಮಾತಿರಲಿ, ಭಟ್‌ರವರಿಗೆ ಉತ್ತರಿಸು[...] ಸೌಜನ್ಯವನ್ನು ತೋರಿಸದೆ ಭಟ್‌ರ ಘನತೆಗೆ ಕುಂದುಂಟು[...] ಮಾಡಿ ಬಿಟ್ಟಿದೆ. ಈಗ 'ಲೋಕಾಯುಕ್ತರೇ ತನಿಖೆ ನಡೆಸಲಿ[...] ಎನ್ನುತ್ತಿದೆ ಸರ್ಕಾರ. ನಾಳೆ ಲೋಕಾಯುಕ್ತರಿಗೆ ಯಾ[...] ಮಾಹಿತಿಯನ್ನೂ ನೀಡದೆ ತನಿಖೆ ಸ್ಥಗಿತವಾಗುವಂ[...] ನೋಡಿಕೊಂಡರೂ ಆಶ್ಚರ್ಯವಿಲ್ಲ.

ಗೌಡರ ಕುಟುಂಬ ನ್ಯಾಯಾಂಗ ತನಿಖೆ ಎಂದರ[...] ಚಾಮುಂಡೇಶ್ವರಿ ಎಲೆಕ್ಷನ್ ರೀತಿ, ರೆಸಾರ್ಟ್ ರಾಜ[...]ಕೀಯದ ತರಹದ ಎಂದುಕೊಂಡಂತಿದೆ. ಅವರು ಒಂದು[...] ಭಟ್ ಆಯೋಗವನ್ನು ನಿಷ್ಕ್ರಿಯಗೊಳಿಸಿದರೂ ಅವ[...] ಭ್ರಷ್ಟಾಚಾರಗಳ ನೆರಳು ಅವರ ಬೆಂಬಿಡಲಾರದು. ಇದೇ[...] ಮಾರ್ಚ್ 13ಕ್ಕೆ ಸುಪ್ರೀಂಕೋರ್ಟ್‌ನಲ್ಲಿ 150 ಕೋಟಿ[...] ಗಣಿ ಲಂಚದ ಕೇಸ್ ವಿಚಾರಣೆಗೆ ಬರುತ್ತಿದೆ. ಕೋರ್ಟ್[...] ಸಿಬಿಐ ತನಿಖೆಗೆ ಆದೇಶಿಸಿದರೆ ರೋಲ್‌ಕಾಲ್ ವೀರ[...] ಚನ್ನಿಗಪ್ಪ, ಭ್ರಷ್ಟ ಎಂ.ಪಿ. ಪ್ರಕಾಶ್ ಹಾಗೂ ಲಂಚಕೋರ[...] ಮುಖ್ಯಮಂತ್ರಿ ಕುಮಾರಸ್ವಾಮಿ ಪಾಲಿಗೆ ಅವು ಅವರ[...] ಜೀವನದ ಅತ್ಯಂತ ಕೆಟ್ಟ ದಿನಗಳಾಗಲಿವೆ.

ಇವರಿಗೆಲ್ಲಾ ಶಿಕ್ಷೆಯಾದರೆ ಅದೇ ಕನ್ನಡಿಗರ ಪಾಲಿನ[...] ಶುಭ ದಿನಗಳು. ಆ ದಿನ ಬೇಗ ಬರಲಿ ಎಂದು[...] ಆಶಿಸೋಣ. ●

ಕ್ಷಮಿಸಿ ಇದು ತಮಾಷೆಗಾಗಿ

ಸುಮಾರಸ್ವಾಮಿಗೆ ಹಾದರದ ಸ್ವಾಗತ


"ನಮ್ಮ ಜನಪ್ರಿಯ ಮುಖ್ಯಮಂತ್ರಿ ಸುಮಾರಸ್ವಾಮಿ ಅವರು ಬಾಗಲಕೋಟೆ ಜಿಲ್ಲೆಗೆ ನಾಲ್ಕು ಸಾರಿ ಬಂದಿದ್ದಾರೆ, ನಮ್ ಜಿಲ್ಲೆಗೆ ಬರೋರ ಅಧಿಕಾರ ಹೋಗುತ್ತೆ ಅಂತಾ ಯಾವನೋ ಕವಡಿ ಭವಿಷ್ಯಾ ಹೇಳಿದ್ದ ಅಂತಾ ಇಲ್ಲಿಗೆ ಯಾರೂ ಬರ್‍ತಿರಲಿಲ್ಲ..." ಹೀಗಂತ ಒಬ್ಬ ಕ್ಯಾಬಿನೆಟ್ ಮಂತ್ರಿ ಪಬ್ಲಿಕ್ ಮೀಟಿಂಗ್‌ನಲ್ಲಿ ಹೇಳಿದ್ರೆ ನಿಮಗೇನನ್ನಿಸುತ್ತೆ?

ಮೂಢನಂಬಿಕೆ ಬಗ್ಗೆಯಲ್ಲ ನಾವ್ ಹೇಳ್ತಿರೋದು ಎಸ್.ಎಂ. ಕೃಷ್ಣ ಬಾಗಲಕೋಟೆಗೆ ಬಂದು ಹೋದ ಮೇಲೆ ಅಧಿಕಾರ ಕಳೆದುಕೊಂಡರೆಂಬ ಪೆದ್ದು ನಂಬಿಕೆ ಈಗಲೂ ಕೆಲ ರಾಜಕಾರಣಿಗಳಿಗಿದೆ. ಅದು ಬಿಡಿ ಬೇರೆ ವಿಷಯ. ಆದರೆ ಅಸಲಿ ವಿಚಾರ ಮುಖ್ಯಮಂತ್ರಿ, ಎಚ್.ಡಿ. ಕುಮಾರಸ್ವಾಮಿನ 'ಸುಮಾರಸ್ವಾಮಿ' ಎನ್ನುತ್ತಿರುವ ಮಂತ್ರಿಯದ್ದು.

ಈ ಮಹಾನುಭಾವ ಮೊನ್ನೆ ಇನ್ನೊಂದು ಸಭೆಯಲ್ಲೂ ಹೀಗೇ ಭಾಷಣ ಕುಟ್ಟುತ್ತಿದ್ದ: "ಪಟ್ಟದಕಲ್‌ನ ಚಾಲುಕ್ಯ ಉತ್ಸವಕ್ಕೂ ಸುಮಾರಸ್ವಾಮಿ ಬಂದಿದ್ರು, ಈಗ ಈ ಸಮಾರಂಭಕ್ಕೂ ಬಂದಿದ್ದಾರೆ" ಎಂದು ಹೇಳುತ್ತಾ "ನಮ್ಮ ಜನಪ್ರಿಯ ಸಿಎಂ ಸುಮಾರಸ್ವಾಮಿಯವರಿಗೆ ಹಾದರದ ಸುಸ್ವಾಗತ" ಎಂದುಬಿಟ್ಟರು. ಅವತ್ತಿನದು ಬಾಗಲಕೋಟೆಯಲ್ಲಿ ರಾಜ್ಯ ಚಲನಚಿತ್ರ ಪ್ರಶಸ್ತಿ ವಿತರಣೆ ಸಮಾರಂಭ. ನಟಿ ರಾಧಿಕಾ ಮನೆ ಕಾಂಪೌಂಡ್ ಹಾರಿ ಸಿಎಂ ಓಡಿಹೋದ ಘಟನೆ ಇನ್ನೂ ನಡೆದಿರಲಿಲ್ಲ, ಆದರೂ ನಮ್ಮ ಸಚಿವರು ಸುಮಾರಸ್ವಾಮಿಗೆ ಹಾದರದ ಸ್ವಾಗತ ಬಯಸಿ ಅದ್ಭುತ ಭವಿಷ್ಯ ನುಡಿದುಬಿಟ್ಟಿದ್ದರು.

ಅಂದಹಾಗೆ ಕುಮಾರಸ್ವಾಮಿ ಹೆಸರನ್ನು ಹೋದಲ್ಲೆಲ್ಲಾ ಸುಮಾರಸ್ವಾಮಿ ಎಂತಲೇ ಹೇಳುತ್ತಿರುವ ಗಮಾರಸ್ವಾಮಿ ಮಂತ್ರಿ ಯಾರು ಗೊತ್ತಾ? ಬಿಜೆಪಿಯ ಗೋವಿಂದ ಕಾರಜೋಳ. ಆದರೆ ಈತ ಎಲ್ಲರಿಗೂ ಹಾದರದ ಸ್ವಾಗತವನ್ನೇ ಬಯಸುವುದೇಕೋ?!





ಎಸ್.ಎಲ್. ಭೈರಪ್ಪನವರ ದ್ವೇಷದ ಅನಾವರಣ ಸತ್ಯದ ವಿಕ್ಷೇಪ

ಇದು ಭೈರಪ್ಪನವರು ಕಲ್ಪನೆ ಮತ್ತು ಇತಿಹಾಸವನ್ನು ಬೆರೆಸುವ ರೀತಿ. ಯಾವುದಕ್ಕೆ ಸತ್ಯದ ಮತ್ತು ಇತಿಹಾಸದ ಪುರಾವೆಯಿಲ್ಲವೋ ಅವನ್ನು ಸ್ವಗತವಾಗಿಸಿ ಮತ್ತೊಂದು ಸಂದರ್ಭದಲ್ಲಿ ಅದನ್ನು ಅರೆಸತ್ಯದೊಂದಿಗೆ ಬೆರೆಸುವ ಕುತಂತ್ರವಿದು. ಅಥವಾ ಅದನ್ನು ಪ್ರತಿಪಾದಿಸುವ ಹಿಂದೂತ್ವವಾದಿ ಇತಿಹಾಸಕಾರರು ತೋರುವ ಪುರಾವೆಯನ್ನು ಮಾತ್ರ ಎತ್ತಿಹಿಡಿಯುವುದು ಮತ್ತು ಅದಕ್ಕೆ ಪ್ರತಿಯಾಗಿ ಇತರ ಇತಿಹಾಸಕಾರರು ತೋರುವ ಸತ್ಯವನ್ನು ಆವರಣಗೊಳಿಸಿಬಿಡುವುದು ಅಥವಾ ವಿಕ್ಷೇಪಿಸಿಬಿಡುವುದು..!!

ವಾಸ್ತವವಾಗಿ ಭೈರಪ್ಪನವರ 'ಆವರಣ' ಒಂದು [ಕಾ]ದಂಬರಿಯೂ ಅಲ್ಲ, ಒಂದು ಸಾಹಿತ್ಯ ಕೃತಿಯೂ [ಅಲ್ಲ]. ಏಕೆಂದರೆ ಸಾಹಿತ್ಯಕ್ಕೆ ಕೆಲವು ಆದರ್ಶಗಳಿವೆ. [ಕಾ]ದಂಬರಿ ಪ್ರಕಾರವು ಸಿದ್ಧಾಂತ ರಹಿತವಾಗಿ ಇರಲು [ಸಾಧ್ಯ]ವಿಲ್ಲವಾದರೂ ಅದು ಮೂಲಭೂತವಾಗಿ ಮನುಷ್ಯ [ಸಂ]ಬಂಧಗಳ ಅನ್ವೇಷಣೆಯಾಗಿದೆ. ಮನುಷ್ಯ ಸಂಬಂಧ[ಗಳು] ಭಾವನಾತ್ಮಕವಾದರೂ ಅದರ ಏರುಪೇರುಗಳ [ಹಿಂ]ದಲ್ಲಿ ಅಧಿಕಾರ ಸಂಬಂಧಗಳು ಅಡಗಿರುತ್ತವಾದ್ದರಿಂದ [ಅಂ]ತರ್ಗಾಮಿನಿಯಾಗಿ ಕಾದಂಬರಿಕಾರನ ಸಿದ್ಧಾಂತ ಹರಿ[ಯು]ತ್ತದೆ. ಆದರೆ ಅಂತಿಮವಾಗಿ ಒಂದು ಶ್ರೇಷ್ಠ [ಕಾ]ದಂಬರಿ ಓದುಗನ ಭಾವನಾತ್ಮಕ ಮತ್ತು ಆಧ್ಯಾತ್ಮಿಕ [ಪ್ರ]ಪಂಚವನ್ನು ಇನ್ನೊಂದು ಹೆಜ್ಜೆ ಮೇಲಕ್ಕೆ [ಕೊ]ಂಡೊಯ್ಯುತ್ತದೆ. ಭೈರಪ್ಪನವರು ಆ ಉದ್ದೇಶವಿಲ್ಲದೆ [ಬರೆ]ದ 'ಗೃಹಭಂಗ' ಕಾದಂಬರಿ ಕಾದಂಬರಿಕಾರನ

ಹೀಗಾಗಿಯೇ ಭೈರಪ್ಪನವರ ಈ 'ಆವರಣ' ಸಂಘ ಪರಿವಾರದ ಒಂದು ಅಗ್ಗದ ಪ್ರಚಾರ ಸಾಹಿತ್ಯ ಮಾತ್ರ ವಾಗಿದೆ. ಕಾದಂಬರಿಯ ಮುನ್ನುಡಿಯಲ್ಲಿ ಭೈರಪ್ಪನವರು ತಾವು ಏಕೆ ಈ ಪುಸ್ತಕಕ್ಕೆ ಆವರಣ ಎಂದು ಹೆಸರಿಟ್ಟೆ ಎಂದು ವಿವರಿಸುತ್ತಾ "ಸತ್ಯವನ್ನು ಮರೆಮಾಚುವ ಕಾರ್ಯಕ್ಕೆ ಆವರಣವೆಂದು ಅಸತ್ಯವನ್ನು ಬಿಂಬಿಸುವ ಕಾರ್ಯಕ್ಕೆ ವಿಕ್ಷೇಪವೆಂದೂ ಹೆಸರು. ವ್ಯಕ್ತಿಯ ಮಟ್ಟದಲ್ಲಿ ನಡೆಯುವ ಈ ಕ್ರಿಯೆಯನ್ನು ಅವಿದ್ಯೆಯೆಂದೂ ಸಮೂಹ ಅಥವಾ ಜಗತ್ತಿನ ಮಟ್ಟದಲ್ಲಿ ನಡೆಯುವ ಕ್ರಿಯೆಯನ್ನು ಮಾಯೆ ಎಂದು ಕರೆಯುತ್ತಾರೆ." ಭೈರಪ್ಪನವರ ಪ್ರಕಾರ ಆವರಣ ಕಾದಂಬರಿಯ ಕಾಲಘಟ್ಟವಾದ ಮುಸ್ಲಿಮರು ಈ ದೇಶವನ್ನು ಆಳಿದ ಕಾಲಘಟ್ಟದ ಸತ್ಯವನ್ನು ಪ್ರಗತಿಪರರು ಮತ್ತು ಹುಸಿ ಸೆಕ್ಯುಲಾರ್ ವಾದಿಗಳು ಮುಚ್ಚಿಬಿಟ್ಟಿದ್ದಾರೆ. ಅದನ್ನು ಅನಾವರಣಗೊಳಿಸುವುದೇ

ಶೈಲಿಯನ್ನು ದುಡಿಸಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ.

ಈ ಪುಸ್ತಕವನ್ನು ಓದಿ ಕೆಳಗಿಟ್ಟ ಮೇಲೆ ಒಬ್ಬ ಆರೆಸ್ಸೆಸ್ಸಿಗನ ಮನಸ್ಸಿನಲ್ಲಿ ಇನ್ನೂ ಹೆಚ್ಚು ಮುಸ್ಲಿಂ ದ್ವೇಷ ಮೂಡುತ್ತದೆ. ಪ್ರಜ್ಞಾವಂತ ಓದುಗನ ಮನಸ್ಸಿನಲ್ಲಿ ಭೈರಪ್ಪನವರ ಕೀಳುತಂತ್ರದ ಬಗ್ಗೆ ಅಸಹ್ಯ ಮೂಡುತ್ತದೆ. ಇವೆರಡೂ ಅಲ್ಲದ ಓದುಗನಿಗೆ ಕಾದಂಬರಿ ತಂತ್ರದಲ್ಲಿ ಬಳಸಲಾಗಿರುವ ಹುಸಿ ವೈಚಾರಿಕತೆ ಮತ್ತು ಕೋಟ್ ಮಾಡಲಾಗಿರುವ ಸಂಘಪರಿವಾರದ ವಿಕೃತಪ್ರಕಾರದ ಇತಿಹಾಸ ಪಠ್ಯಗಳು ಭೈರಪ್ಪನವರು ಹೇಳುತ್ತಿರುವ ಕಥೆ ಕಲ್ಪನೆಯಲ್ಲ ಸತ್ಯ ಎಂಬ ಭಾವನೆಯನ್ನೂ ಬೀರುವ ಅಪಾಯವಿದೆ. ಆದರೆ ಅದಕ್ಕೆ ಭೈರಪ್ಪನವರು ಒದಗಿಸುವ ಐತಿಹಾಸಿಕ ಪುರಾವೆಗಳಿಗಿಂತ (ಅವು ಯಾವುವೂ ಪುರಾವೆಗಳೆಂದು ಸಾಬೀತೇ ಆಗಿಲ್ಲ ಎಂಬುದು ಬೇರೆ ಮಾತು) ಹಿಂದೂ ಸಮಾಜೋತ್ಸವ ಇನ್ನಿತರ ಹೆಸರಲ್ಲಿ

ಬರುತ್ತ ಇದ್ದೇ ಇರುತ್ತದೆ. ಇದು ಅವರಪ್ಪ ಹಿರಿಕೊಂಡ ನಂತರ ಹಳ್ಳಿಗೆ ವಾಪಸ್ ಹೋಗಿ ನೆಲೆ ನಿಂತ ಮೇಲೆ ಇನ್ನೂ ಹೆಚ್ಚಾಗುತ್ತದೆ. ಅಲ್ಲಿ ಅವರಪ್ಪ ದೇಶ ವಿದೇಶದಿಂದ ಇಸ್ಲಾಂ ಬಗ್ಗೆ, ಭಾರತದಲ್ಲಿ ಮುಸ್ಲಿಮರ ಆಳ್ವಿಕೆಯ ಬಗ್ಗೆ ತರಿಸಿಟ್ಟುಕೊಂಡ ಪುಸ್ತಕಗಳ ಗ್ರಂಥಾಲಯವೇ ಇರುತ್ತದೆ. (ಆದರೆ ಆಶ್ಚರ್ಯವೆಂದರೆ ಈ ಗಾಂಧಿವಾದಿಯ ಗ್ರಂಥ ಭಂಡಾರದಲ್ಲಿ ಒಬ್ಬ ಗಾಂಧಿವಾದಿ ಇತಿಹಾಸಕಾರರ ಪುಸ್ತಕವೂ ಇರದಿರುವುದು..!). ಅದನ್ನು ದರ್ಗಟ್ಟಲೆ ಓದುತ್ತಾ ಹೋಗುವ ರಜಿಯಾ ಮತ್ತೆ ಲಕ್ಷ್ಮಿ, ಮಾತ್ರವಲ್ಲ ಆರೆಸ್ಸೆಸ್‌ನ ಲಕ್ಷ್ಮಿಯಾಗಿಬಿಡುತ್ತಾಳೆ. ತನ್ನ ಗಂಡನಿಂದ ತಲಾಖ್‌ಗೆ ಗುರಿಯಾದರೂ ಹೆದರದೆ ಅಧ್ಯಯನ ಮುಂದುವರೆಸಿ ಪುಸ್ತಕ ಬರೆದು ಸರ್ಕಾರದ ಕೆಂಗಣ್ಣಿಗೂ ಗುರಿಯಾಗುತ್ತಾಳೆ.

ಇಷ್ಟು ಇದರ ಕಥೆ. ಇನ್ನು ಉಳಿದ ಪುಟಗಳೆಲ್ಲಾ ಪ್ರಬಂಧಗಳ ರೂಪದಲ್ಲಿರುವ ಅಥವಾ ಭಾಷಣಗಳ ರೂಪದಲ್ಲಿರುವ ವಾಗ್ವಾದಗಳು ಅಥವಾ ಲಕ್ಷ್ಮಿಯ ಸ್ವಗತಗಳು... ಹಿಂದೂತ್ವವಾದಿ ಇತಿಹಾಸಕಾರರ ಪುಸ್ತಕದ ಮಾತುಗಳು. ಇದರ ಜೊತೆಜೊತೆಗೆ ಕಾದಂಬರಿಯಲ್ಲಿ ಲಕ್ಷ್ಮಿ ಬರೆಯುವ ಔರಂಗಜೇಬನ ಕಾಲದಲ್ಲಿ ಒಬ್ಬ ಹಿಂದೂ ಯುವರಾಜನ ಮೇಲೆ ನಡೆದ ಅತ್ಯಾಚಾರದ ಉಪಕಥನವೂ ಇದೆ. ಈ ಕಥನವು ಸಮಕಾಲೀನವಾಗಿ ಲಕ್ಷ್ಮಿ ನಡೆಸುವ ಸತ್ಯಾನ್ವೇಷಣೆಯ ಭಾಗವಾಗಿ ಬಂದುಬಿಡುವುದರಿಂದ ಈ ಕಥನವೂ ಇತಿಹಾಸದ ತುಣುಕೆಂದೇ ತೋರಿಸುವ ಕುತಂತ್ರವನ್ನು ಭೈರಪ್ಪನವರು ನೇಯ್ದಿದ್ದಾರೆ. ಆ ಯುವರಾಜ ಮುಸ್ಲಿಮರ ವಿರುದ್ಧದ ಸಮರದಲ್ಲಿ ಶಿವಾಜಿಯನ್ನು ಸೇರುತ್ತಾನೆ ಮತ್ತು ಆ ಕಾದಂಬರಿ ಪ್ರಕಟ ಮಾಡಿದ್ದಕ್ಕೆ ಲಕ್ಷ್ಮಿ ಸರ್ಕಾರದ ಕೆಂಗಣ್ಣಿಗೆ ಗುರಿಯಾಗುತ್ತಾಳೆ. ಕಾದಂಬರಿ ನಿಷೇಧಕ್ಕೊಳಗಾಗುತ್ತದೆ. (ಭೈರಪ್ಪನವರು ತಮ ಪುಸ್ತಕಕ್ಕೆ ಇವೆಲ್ಲ ಆಗಬೇಕೆಂದು ಆಶಿಸುತ್ತಿದ್ದಾರೆ. ಆ ಮೂಲಕ ಹಿಂದೂತ್ವದ ಕಾರಣಕ್ಕೆ ಹುತಾತ್ಮರಾಗುವ ಆಶಯವನ್ನು ಅವರು ಹೊಂದಿರಬಹುದು.) ಇನ್ನುಳಿದ ಪಳಿದ ಕಥೆ ಅಂಥ ಏನಾದರೂ ಇದ್ದರೆ ಅದು ಶಾಸ್ತ್ರಿಯೆಂಬ ಮಾರ್ಕ್ಸ್‌ವಾದಿ ಪ್ರೊಫೆಸರೊಬ್ಬನ ಲಂಪಟತನವನ್ನು ತೋರಿಸಲು ಖರ್ಚಾಗುತ್ತದೆ.

ಶಿವಸುಂದರ್

ಹಾಗೆ ನೋಡಿದಲ್ಲಿ 270 ಪುಟಗಳಲ್ಲಿ 200ಕ್ಕೂ ಹೆಚ್ಚು ಪುಟಗಳಲ್ಲಿ ಇರುವುದು ಕಥೆಯಲ್ಲ, ಅಲ್ಲಿರುವುದು ಉನ್ಮತ್ತ ಹಿಂದೂತ್ವವಾದಿಯ ಭಾಷಣ, ಸ್ವಗತ, ವಾದ... ಇದೇ ಕಾದಂಬರಿ ಪ್ರಕಾರವಾಗಿ ಅದರ ವೈಫಲ್ಯವನ್ನು ಸೂಚಿಸುತ್ತದೆ. ಹೀಗಾಗಿ ಸಂಘಪರಿವಾರದ ದ್ವೇಷದ ಸಿದ್ಧಾಂತವನ್ನು ಒಪ್ಪದವರು ಈ ಪುಸ್ತಕವನ್ನು ಓದಿ ಮುಗಿಸಲು ಅತ್ಯಂತ ತಾಳ್ಮೆ ಬೇಕಾಗುತ್ತದೆ. ಮತ್ತು ಇದನ್ನು ಸಂಘಪರಿವಾರದ ಸಿದ್ಧಾಂತದಿಂದ ಹೊರತುಪಡಿಸಿ ಕೇವಲ ಒಂದು ಕಾದಂಬರಿಯಾಗಿ ವಿಮರ್ಶಿಸಲೂ ಸಾಧ್ಯವಿಲ್ಲ, ಏಕೆಂದರೆ ಈ ಪುಸ್ತಕ ಸಂಘಪರಿವಾರದ ಒಂದು ಪ್ರಚಾರಸಾಹಿತ್ಯ ಅಷ್ಟೆ. ಹೀಗಾಗಿ ಒಂದು ಪ್ರಚಾರ ಸಾಹಿತ್ಯವನ್ನು ಅದರ ಸತ್ಯಾಸತ್ಯತೆಯನ್ನು ಒರೆಗಲ್ಲಿಗೆ ಹಚ್ಚಿ ತಾನೆ ವಿಮರ್ಶಿಸಬೇಕು?

ಆದರೆ ಮುಸ್ಲಿಂ ದೊರೆಗಳ ಆಳ್ವಿಕೆ ಬಗ್ಗೆ, ಟಿಪ್ಪು ಸುಲ್ತಾನರ ಆಳ್ವಿಕೆ ಬಗ್ಗೆ, ಸಂಘಪರಿವಾರದ ವಾದಗಳೇನು ಮತ್ತು ಅವೆಷ್ಟು ಸತ್ಯಕ್ಕೆ ದೂರವಾದ ಪೂರ್ವಾಗ್ರಹಗಳಿಂದ ಹುಟ್ಟಿದೆ ಎಂಬುದು ಈಗಾಗಲೇ ಬಹುಚರ್ಚಿತವಾಗಿರುವ ವಿಷಯ. ಹೀಗಾಗಿ ಮತ್ತೆ ಅದನ್ನು ಚರ್ಚಿಸುವ ಅಗತ್ಯವಿಲ್ಲವಾದರೂ ಈ ಪುಸ್ತಕದಲ್ಲಿ ಭೈರಪ್ಪನವರು ಎಂತಹ ಉನ್ಮತ್ತ ಮತ್ತು ದ್ವೇಷಪೂರಿತ ಮತ್ತು ವಿದ್ವತ್ತೇ ಇಲ್ಲದ ಹಸಿಹಸಿ ವಾದಗಳನ್ನು ಮಾಡಿದ್ದಾರೆ ಎಂಬುದಕ್ಕೆ ಕೆಲವು ಸ್ಯಾಂಪಲ್ಲುಗಳನ್ನು ನೋಡಬಹುದು:


"ಮೊಗಲ್ ಬಾದ್‌ಶಾ ಜಹಂಗೀರ್, ಅವನ ಮಗ ಷಹಜಹಾನ್ ಇವರೆಲ್ಲರೂ ಹಿಂದೂ ತಾಯಂದಿರ ಹೊಟ್ಟೆಯಲ್ಲಿ ಹುಟ್ಟಿದವರು. ಅಧಿಕಾರಕ್ಕೆ ಬಂದ ಮೇಲೆ ದೇವಸ್ಥಾನಗಳನ್ನು ಒಡೆಸಿದವರು. ಒಡೆಯಬೇಕು ಅಂಥ ಅವರ ಧರ್ಮವೇ ಹೇಳುವಾಗ ಅವರು ಅದರಂತೆ ನಡೆಯಲೇಬೇಕಲ್ಲವೇ? "ಆ ಧರ್ಮ ಇವತ್ತಿಗೂ ಬದಲಾಗಿಲ್ಲ, ಪ್ರಾಯದ ಉದ್ವೇಗದಲ್ಲಿ ಇದು ನಿನಗೆ ಅರ್ಥವಾಗೊಲ್ಲ.." (ಪು.19. ಗಾಂಧಿವಾದಿ ಅಪ್ಪ ಮಗಳು ಮುಸ್ಲಿಮನನ್ನು ಮದುವೆ ಆಗುತ್ತೇನೆಂದಾಗ ಕೊಡುವ ಉಪದೇಶ!)

"ರಾತ್ರಿ, ಜೊತೆಯಲ್ಲಿ ಮಲಗಿದಾಗ ಈ ಆಹಾರದ ವ್ಯತ್ಯಾಸವು ನಮ್ಮಿಬ್ಬರ ನಡುವೆ ಏಕಭಾವವನ್ನು ಕದಡ...

[ದ್ವೇ]ಷವನ್ನು ಮೀರಿ ಸ್ವಲ್ಪಮಟ್ಟಿಗೆ ಆ ಕೆಲಸವನ್ನು [ಮಾ]ಡುತ್ತದೆ. ಆದರೆ ಒಂದು ಕಾದಂಬರಿಯ ಉದ್ದೇಶವೇ [ಅ]ದು ದ್ವೇಷದ ಸಿದ್ಧಾಂತದ ಪ್ರಚಾರವಾದಾಗ ಮತ್ತು [ಅದ]ರ ಪ್ರತಿ ಪಾತ್ರ, ಪ್ರತಿ ಪದ, ಪ್ರತಿ ಘಟನೆ ಅತ್ಯಂತ [ಪ]ಕ್ಷೀಯವಾಗಿ ಒಂದು ಜನಾಂಗದ ಮೇಲೆ ದ್ವೇಷ [ಹರಡು]ಸುವುದಕ್ಕೆ ರಚಿತವಾದಾಗ ಅದನ್ನು ಕಾದಂಬರಿ [ಪ್ರಕಾ]ರಕ್ಕೆ ಸೇರಿಸುವುದು ಕಷ್ಟ. ಏಕೆಂದರೆ ಇಲ್ಲಿ ಕಾದಂಬರಿ [ಪ್ರಕಾ]ರ ನಿಮಿತ್ತ.... ಮಿಕ್ಕಿದ್ದೆಲ್ಲಾ ಹುರುಳಿಲ್ಲದ ಪ್ರಚಾರ.

ಈ ಪುಸ್ತಕ ಇತಿಹಾಸದ ವಸ್ತುವನ್ನು ಹೊಂದಿದೆ. [ಅಷ್ಟೇ] ಮಾತ್ರವಲ್ಲ, ಇತಿಹಾಸದ ಸತ್ಯಾಸತ್ಯತೆಯ ಬಗ್ಗೆ [ತಥಾ]ಕಥಿತ ಸತ್ಯಾಸತ್ಯತೆಗಳನ್ನು ಆಧರಿಸಿ ಪುಸ್ತಕದುದ್ದಕ್ಕೂ [ವಾ]ದಗಳಿವೆ. ಹಾಗೂ ಬಹಳ ಸುಲಭವಾಗಿ ಎದು[ರಾಳಿ]ಯ ಅಂದರೆ ಸಂಘಪರಿವಾರದ್ದಲ್ಲದ ವಾದ ಸೋತು[ಹೋ]ಗುತ್ತದೆ. ಅಂದ ಮಾತ್ರಕ್ಕೆ ಈ ಪುಸ್ತಕವನ್ನು [ಒಂ]ದು ಇತಿಹಾಸ ಕಥನವೆಂಬಂತೆ ವಿಶ್ಲೇಷಿಸಲೂ [ಸಾಧ್ಯ]ವಿಲ್ಲ, ಏಕೆಂದರೆ ಆ ಬಗೆಯ ಗಂಭೀರ ವಿಶ್ಲೇಷಣೆ[ಯಲ್ಲಿ]ಯೂ ಎರಡು ಬಗೆಯ ವಾದಗಳಲ್ಲಿ ಇರುವ [...] ನಿಷ್ಪಕ್ಷಪಾತೀಯ ಮಾನದಂಡಗಳನ್ನು ಚರ್ಚಿಸಬೇಕಾಗುತ್ತದೆ. ಆದರೆ ಇಲ್ಲಿ ಪ್ರತಿವಾದ ಮತ್ತು ಪ್ರತಿವಾದಿಗಳೆಲ್ಲಾ [ವ್ಯಕ್ತಿ]ಗಳೆಂದೇ ಚಿತ್ರಿತವಾಗುತ್ತವೆ. ಇದರಲ್ಲಿ ಚಿತ್ರಿತ[ವಾಗು]ವ ಐತಿಹಾಸಿಕ ಸಂಗತಿಗಳೇ ಪರಮಸತ್ಯ ಎಂದು [ಪ್ರತಿಪಾ]ದಿಸಲು ಕಾದಂಬರಿಕಾರರು ಪುಸ್ತಕದ ಅಂತ್ಯದಲ್ಲಿ [ತಾವು] ಪರಿಶೀಲಿಸಿರುವ ಐತಿಹಾಸಿಕ 50 ಉದ್ಗ್ರಂಥಗಳ [ಪಟ್ಟಿ]ಯನ್ನೇ ಕೊಡುತ್ತಾರೆ. ಆದರೆ ಅವೆಲ್ಲವೂ ಸಂಘ [ಪರಿವಾ]ರದ ಮತ್ತು ಅದರ ಸುತ್ತಮುತ್ತಲಲ್ಲಿರುವ [ಇತಿಹಾ]ಸಕಾರರ ಪುಸ್ತಕಗಳೇ ವಿನಃ ಶಾಸ್ತ್ರಕ್ಕೂ ಸಂಘ [ಪರಿವಾ]ರದವಲ್ಲದವರ ಒಂದು ಪುಸ್ತಕವೂ ಇಲ್ಲ, ಮತ್ತು [...]ದಲ್ಲಿ ಎಲ್ಲಿಯೂ ಇತರರು ಕೇಳುತ್ತಿರುವ ಮತ್ತು [ಸಂಘಪ]ರಿವಾರವು ಉತ್ತರಿಸಲಾಗದ ಐತಿಹಾಸಿಕತೆಯನ್ನು [...] ಕೇವಲ ನಂಬಿಕೆಗಳಿಗೇ ಜೋತು ಬೀಳುತ್ತಿರುವ [...]ವನ್ನೇ ಮುಂದಿಡಲಾಗುತ್ತದೆ. ಹೀಗಾಗಿ ಪುಸ್ತಕದ [...]ಪ್ರತಿಭೆ ಒಬ್ಬ ಉನ್ನತ ಪ್ರೊಫೆಸರ್ ಚರ್ಚಾಪಟು [...] ಹೆಚ್ಚಿನ ಸಂಖ್ಯೆಯಾಗಿಲ್ಲ, ಹೀಗಾಗಿ ಪುಸ್ತಕವನ್ನು, [...] ಹೇಳುತ್ತಿರುವ ಐತಿಹಾಸಿಕತೆಯನ್ನು, ಗಮನ[ದಲ್ಲಿಟ್ಟು]ಕೊಂಡು ಒಂದು ಇತಿಹಾಸ ಕಥನವಾಗಿಯೂ [...] ವಿಶ್ಲೇಷಿಸಲು ಆಗುವುದಿಲ್ಲ.

ಈ ಕಾದಂಬರಿಯ ಧ್ಯೇಯ. ಅಂದರೆ ಮುಸ್ಲಿಮರು ಮತ್ತು ಅವರ ಮರ್ಮವಾದ ಇಸ್ಲಾಂ ಮೂಲಭೂತವಾಗಿ ಮಾನವ ವಿರೋಧಿಯಾದುದು ಮತ್ತು ಅದು ಮೂಲಭೂತವಾಗಿ ಪರಮಾರ್ಥಮುಖಿಯಾಗಿಯೂ ಜನಪರವಾಗಿಯೂ ಇದ್ದ ಹಿಂದೂ ಧರ್ಮದ ಮೇಲೆ, ಹಿಂದೂ ಧರ್ಮೀಯರ ಮೇಲೆ ದಾಳಿ ಮಾಡಿ ಕಡು ಭೀಕರ ಅತ್ಯಾಚಾರ ಮಾಡಿತು. ಆದರೆ ಇಂದಿನ ರಾಜಕಾರಣಿಗಳು ಈ ಇತಿಹಾಸವನ್ನು ತಮ್ಮ ಓಟು ರಾಜಕೀಯಕ್ಕಾಗಿ ಮರೆಮಾಚುತ್ತಿದ್ದಾರೆ. ಇದು ಈ ಪುಸ್ತಕದಲ್ಲಿ ಅವರು ಪ್ರತಿಪಾದಿಸುವ ಸತ್ಯ. ಅಷ್ಟು ಮಾತ್ರವಲ್ಲ, ಭೈರಪ್ಪನವರು ತಮ್ಮ ಈ ದ್ವೇಷಪೂರಿತ ಕಥನಕ್ಕೆ ಪೊಳ್ಳು ಆದರ್ಶದ ಮುಖವಾಡವನ್ನು ತೊಡಿಸುತ್ತಾರೆ. "ಮುಸ್ಲಿಂ ಸಮಾಜಕ್ಕೆ ತಿದ್ದಿಕೊಳ್ಳುವ ಅವಕಾಶವನ್ನೇ ಕೊಡುತ್ತಿಲ್ಲ. ತಿದ್ದಿಕೊಳ್ಳುವ ಮೊದಲು ತಪ್ಪಿನ ಅರಿವಾಗಬೇಕಲ್ಲವೇ? ಇತಿಹಾಸದ ಸತ್ಯ ದರ್ಶನವಾಗದೆ ತಿದ್ದಿಕೊಳ್ಳುವುದೆಂತು?" (ಪು. 247) ಎಂದು ಹಿಂದೂತ್ವವಾದಿಗಳು ತೋಡಿರುವ ಪಾತಳಿಯಲ್ಲಿ ಮುಸ್ಲಿಮರನ್ನು ದೂಡಿ ಮತ್ತೆ ತಾವೇ ಅವರನ್ನು ಚಾರಿತ್ರಿಕ ಪಾತಳಿಯಿಂದ ಮೇಲೆತ್ತುವುದಕ್ಕಾಗಿಯೇ ಅವರ ಮೇಲೆ ದಾಳಿ ಮಾಡುತ್ತಿದ್ದೇವೆಂಬ ಅತ್ಯಂತ ಕುಟಿಲವಾದ ಬ್ರಾಹ್ಮಣಿಕೆಯ ತಂತ್ರವನ್ನು ಪ್ರಯೋಗಿಸುತ್ತಾರೆ. ತಮ್ಮ ಅಂತರಾಳದಲ್ಲಿರುವ ಈ ಜನಾಂಗೀಯ ದ್ವೇಷದ ಅನಾವರಣವನ್ನು ಮತ್ತು ಸತ್ಯದ ವಿಕ್ಷೇಪವನ್ನು ಸತ್ಯದ ಅನಾವರಣ ಎಂದು ಪ್ರತಿಪಾದಿಸಲು ಭೈರಪ್ಪನವರು ಅತ್ಯಂತ ಚಾಣಾಕ್ಷತನದಿಂದ ಸಂಘಪರಿವಾರದ ಸಿದ್ಧಾಂತವನ್ನು ಕಾದಂಬರಿಯ ಎರಕದಲ್ಲಿ ಹೊಯ್ಯುವ ಪ್ರಯತ್ನ ನಡೆಸಿದ್ದಾರೆ. ಅದಕ್ಕಾಗಿ ತಮಗೆ ಸಿದ್ಧಿಸಿರುವ ಕಾದಂಬರಿ



ಸಂಘಪರಿವಾರ ಮುಸ್ಲಿಂ ಸಮುದಾಯದ ಬಗ್ಗೆ ಸೃಷ್ಟಿಸಿರುವ ಪೂರ್ವಾಗ್ರಹ ಮತ್ತು ದ್ವೇಷಗಳೆ ಕಾರಣ.

ಇಂತಹ ಸಂದರ್ಭದಲ್ಲಿ ಸಾಹಿತ್ಯದ ಈ "ಹೊಸ ಪ್ರಚಾರ ಪ್ರಕಾರದಲ್ಲಿ" ಭೈರಪ್ಪನವರು ಅನುಸರಿಸಿರುವ ಹುಸಿ ಕಾದಂಬರಿ ತಂತ್ರ ಪುರಾಣವನ್ನೇ ಇತಿಹಾಸವೆಂದು ಪ್ರತಿಪಾದಿಸುವ ಸಂಘಪರಿವಾರದ ಕುತಂತ್ರದಂತೆ ಇದೆ. ಭೈರಪ್ಪನವರು ಎಷ್ಟೇ ಸಮರ್ಥ ಕಾದಂಬರಿಕಾರರಾಗಿದ್ದರೂ ಇಲ್ಲಿ ಅವರ ಉದ್ದೇಶವೇ ದ್ವೇಷದ ಸಿದ್ಧಾಂತದ ಪ್ರತಿಪಾದನೆಯಾಗಿರುವುದರಿಂದ ಪುಸ್ತಕದುದ್ದಕ್ಕೂ ಪೆನ್ನಿಗಿಂತಲೂ ಹೆಚ್ಚು ಲಾಠಿಯನ್ನೇ ಬಳಸಿದ್ದಾರೆ. ಹೀಗಾಗಿ ಇಲ್ಲಿ ಬರುವ ಪಾತ್ರಗಳೆಲ್ಲಾ ಕಾರ್ಡ್‌ಬೋರ್ಡ್ ಪಾತ್ರಗಳೆ. ಅತ್ಯಂತ ಗಟ್ಟಿ ಪಾತ್ರವಾಗಿರುವ ರಜಿಯಾ ಅಲಿಯಾಸ್ ಲಕ್ಷ್ಮಿ ಸಹ ನೈಜತೆಯಿಲ್ಲದ ಭಾವಾವೇಶದಿಂದ ಉದ್ದಕ್ಕೂ ಭಾಷಣ ಮಾಡುತ್ತಿರುತ್ತಾಳೆ. ಆದ್ದರಿಂದಲೇ 270 ಪುಟಗಳಷ್ಟಿರುವ ಈ ಕಾದಂಬರಿಯ ಕಥೆ ಕೆಲವು ಸಾಲುಗಳಿಗಿಂತ ಹೆಚ್ಚೇನೂ ಹೇಳಲಿಕ್ಕಿಲ್ಲ.

ಲಕ್ಷ್ಮಿ ಎಂಬ ಒಕ್ಕಲಿಗ ಕುಟುಂಬದ ಗಾಂಧಿವಾದಿ ತಂದೆಯ ಮಗಳು ಪುಣೆಯಲ್ಲಿ ಸಿನಿಮಾ ಕಲೆಯ ಬಗ್ಗೆ ಅಧ್ಯಯನ ಮಾಡುತ್ತಾ ಅಮೀರ ಎಂಬ ಮುಸ್ಲಿಂ ಒಬ್ಬನಲ್ಲಿ ಅನುರಕ್ತಳಾಗಿ ಮದುವೆ ಆಗುತ್ತಾಳೆ. ಗಾಂಧೀವಾದಿ ತಂದೆ ಸಹಾ ಅದಕ್ಕೆ ವಿರೋಧ ವ್ಯಕ್ತಪಡಿಸುತ್ತಾನೆ. ಆದರೆ ಅವರಿಬ್ಬರಿಗೂ ಗುರುವಾಗಿದ್ದ ಒಬ್ಬ ಆಷಾಢಭೂತಿ, ವಿಷಯಲಂಪಟ ಮಾರ್ಕ್ಸ್‌ವಾದಿ ಪ್ರೊಫೆಸರ್ ಶಾಸ್ತ್ರಿ ಇವರಿಬ್ಬರಿಗೂ ಪ್ರೋತ್ಸಾಹಿಸಿ ಮದುವೆ ಮಾಡಿಸುತ್ತಾನೆ ಮತ್ತು ಅಮೀರನ ಮನೆಯವರ ಒತ್ತಾಯದ ಮೇರೆಗೆ ಲಕ್ಷ್ಮಿ ಮತಾಂತರಗೊಳ್ಳುವುದು ಸರಿಯೆಂದು ಸಮರ್ಥಿಸುತ್ತಾನೆ. ಹೀಗೆ ಲಕ್ಷ್ಮಿ ರಜಿಯಾ ಆದರೂ ಅವಳೊಳಗೆ ಇದನ್ನು ಒಪ್ಪದ

(18ನೇ ಪುಟಕ್ಕೆ)

ರಕ್ಷಿತನ ಪುಸ್ತನೂ ತೋರತರೆ ನೋಡಿವಿರು!

ಬಯಲು ಸೀಮೆಯ ಕಟ್ಟೆ ಪುರಾಣ

ಓಂದೆರಡು ತರಗೆಲೆಗೆ ಸುಣ್ಣಹಚ್ಚಿ ಮಡಿಚ ಬಾಯಿಗಿಟ್ಟುಕೊಂಡ ಜುಮ್ಮಿ, ಕಾಳಮಾವನನ್ನು ಕುರಿತು,

"ಎಷ್ಟಾಯ್ತು ಮಾವ ರಾಗೀ?" ಎಂದಳು.

"ಹದುನೆಂಟು ಪಲ್ಲಾಯ್ತು ಕಂದೈ. ಕದಿಗಾಲದಲ್ಲಿ ಒಂದೀಟು ಮಳೆಯಾಗಿದ್ರೆ ಮುವ್ವತ್ತರ ಮ್ಯಾಲಾಗದು" ಎಂದ.

"ರಾಗಿಯು ಪಟ್ಟಿಗೆ ತುಂಬತಿರೊ ಕಣಜಕ್ಕೆ ತುಂಬತಿರೊ?"

"ನಾನು ಆ ಕಾಲದಿಂದ ಕಣಜಕ್ಕೆ ಆಲವೆ ತುಂಬದು. ಸರಿಯಾಗಿರೊ ಕಣಜವೇ ಆದೆ."

"ಮನೆಲಿ ಅಂತ ಕಣಜ ಇದ್ದುವೆ ವಲ್ದಲ್ಲಿ ಹಗೇವು ಇದ್ದವಂತಲ್ಲಾ, ನಿಜವೆ ಮಾವ?"

"ನಿಜ ಅಂತ ಕೇಳ್ತೀಯ. ಈಗಲೂ ಹಗೇವು ಬೀಳ್ತಲೇ ಅವೆ. ಅಂದ್ರೆ ಆಗಿನ ಜನ ಇನ್ನೇಟು ರಾಗಿ ಬ್ಯಳಿತಿದ್ರು ಲೆಕ್ಕ ಹಾಕು."

"ಆಯ್ಯೋ ಆ ಪೂಜಾರಯ್ಯನ ವಲ್ದಲೊಂದು ಹಗೇವು ಬಿದ್ದದೆ. ಏಟುದ್ದ ಅದೆ ಅಂತೀ?" ಎಂದ ಸೀರ.

"ಅದ್ಯಾಕ್ ಮಾವ ವಲ್ದಲ್ಲಿ ಆಟೊಂತರ ಹಗೇ ಎದ್ರೊ?"

"ಆಗಿನ ಕಾಲವೆ ಅಂಗಿತ್ತು ಕಂದೈ. ಬೇಕಾದಂಗೆ ಬ್ಯಳಿಯೋರು. ಮನಿಗೆ ಏಟು ತುಂಬಕಬೇಕೊ ಆಟ ತುಂಬಿಕಳರು. ಉಳದದ್ದು ಅಲ್ಲೇ ಕಣದ್ವಲದಲ್ಲಿರೊ ಹಗೇವಿಗೆ ತುಂಬ ಮ್ಯಾಲೊಂದು ಚಪ್ಪಡಿ ಹಾಸಿ ಮಣ್ಣ ಯಳದುಬುಡೋರು."

"ಅದ್ಯಾಕಂಗೆ ಮಾಡೋರು? ಮನೆಲೆ ತುಂಬಿಕಳಕ್ಕೇ ನಾಗಿತ್ತೂ?"

"ಆಗ ಪಾಳೈಗಾರ್ರ ಕಾಲ. ಊರುಮ್ಯಾಲೆ ಊರು ದಾಳಿ ಮಾಡಿಬುಡವು. ದಾಳಿ ಮಾಡಿದಾಗ ಬ್ಯಳದಿರೊ ರಾಗಿ ಬತ್ತ ಕಾಳು ಕದ್ದಿನ್ಯಲ್ಲ ಕ್ವಳ್ಳೆ ಹ್ವಡಕಂಡೋಗರು. ಅದ್ಕೆ ಹೆದ್ರಿಕಂಡಿವುರು ವಲದಲ್ಲೇ ದಾಸ್ತಾನು ಮಾಡಿ ಬದಿಕಳರು."

"ಓಹೊಹೊ ಅದ್ಕೇ ಅನ್ನು."

"ಊ ಈಗಿನಂಗೆ ಪೋಲಿಟೇಶನ್ನ ಇಲ್ಲ, ಯಾವಳು ಇಲ್ಲ. ಆಗ ಸಗತಿದ್ದೋನಿಗೆ ಕಾಲ. ಅಂಗಾಗಿ ಇಂತವ್ಯಲ್ಲ ಇದ್ದೊ."

"ಹೆಚ್ಚುಕಮ್ಮಿ ಮನಿಗೊಂದು ಯರಡು ಹಗೇವಿದ್ದೊ ಅಂದ್ರೆ ಆಗ ಎಷ್ಟು ಬ್ಯಳಿತಿದ್ರು ಲೆಕ್ಕ ಹಾಕಲೆ" ಎಂದ ಸೀರ.

"ಬ್ಯಳಿಯೋರು ಅಂದ್ರೆ, ಮಳಿಗಾಲ ಅಂಗೆ ನ್ಯಡುಸ್ತಿತ್ತು, ಬ್ಯಳಿಯೋರು ಮದುವೆ ತಿಥಿ ಆದ್ರೆ ಬೇಕಾದಂಗೆ ಹ್ಯಗ್ಗಾಳವಾಗಿ ಮಾಡೋರು ಕಣೆ. ಏಟು ಜನ ಬಂದ್ರು ಅನ್ನ ಹಾಕೋರು."

"ಮದುವೆ ಅಂದೇಟಗೆ ಗೆಪ್ತಿಗೆ ಬತ್ತು, ಆ ಇವುಳು ಮದಿವಾದಳಂತಲ್ಲಾ ನೀನೋಗಿರಲಿಲವೇನ್ಲ?" ಎಂದಳು ಜುಮ್ಮಿ.

"ಯಾವಳು ಮದಿವಾದ್ಲ?"

"ರಸಿಕಿತ ಅಂತ ಕಂದ್ಯ. ಜೋಗಿ ಅಂತ ಸಿನುಮ ತಗದ್ನಲ್ಲ ಅವುನ್ನ ಮದಿವಾದಲಂತೆ."

"ನಿನಿಗ್ಯಂಗೆ ಗೊತ್ತಾಯ್ತು ಆ ಮದುವೆ?"

"ಟಿವಿಲ್ಯಲ್ಲ ತೋರಿದರಂತೆ ಕಂದ್ಯ. ಹೆಣ್ಣು ಸಿಂಗಾರ ಮಾಡದರಿಂದ ಹಿಡಿದು ಕೈಗ್ಯಲ್ಲ ಬಣ್ಣ ಬಳಕಳದನ್ಯಲ್ಲ ತೋರಿದರಂತೆ. ಮಂಡೇವು ಮದ್ದೂರು ಕಡಿಯೋರ್ಯಲ್ಲ ಹೋಗಿದ್ರಂತೆ."

"ನೋಡು ಮಾವ ಆ ಟಿವಿ ಬಡ್ಡೆತ್ತವುಕೆ ಇನ್ನೇನಾಗ್ಯದೆ ಅಂತ ಹೇಳನ. ಯಾವಳೊ ಮದಿವಾಗೋಳು ಸಿಕ್ಕಿ ಸಿಕ್ಕಿತ್ತಕ್ಕೆ ಬಣ್ಣ ಬಳಕಳದ್ನು ತೋರ್ಯವಂತಲ್ಲಾ ಈ ಸೂಳೆಮಕ್ಕಳು ಇನ್ನು ಏನೇನು ತೋರಬಲ್ರು?"

"ಪುಸ್ತನು ತೋರತರೇನೊ ನೋಡಿವಿರು" ಎಂದು ಸೀರ ನಕ್ಕ.

"ಈ ನನ ಮಕ್ಕಳು ಅವುಕಾಸ ಕೊಟ್ರೆ ಅದ್ನು ತೋರತರೆ. ಪೂರ ತೋರದೆಯಿದ್ರು ಆ ಪ್ರೇಮ ರಕ್ಷಿತನ್ನ ಮುಟ್ಟದು, ಭುಜದ ಮ್ಯಾಲೆ ಕೈಯಾಕದು, ಬಲಗೈಲಿ ರವುಕೆ ಗುಂಡಿಬಿಚ್ಚತ ಯಡಗೈಲಿ ಕಣಕಾಲಿಂದ ಸೀರೆಯ ಮ್ಯಾಕಮುಂದಾಗಿ ಸರಗುಸೋವರಿಗೂ ತೋರತರೆ" ಎಂದು ಉಗ್ರಿ ನಕ್ಕ.

"ಆಹಹ ಈ ನನಮಗ ಪುಸ್ತ ಮಾಡಿಕಂಡಿರೋನಂಗೆ ಹೇಳತನೆ. ಅದ್ನಲ್ಲ ತೋರತರೇನ್ಲ?" ಎಂದಳು ಜುಮ್ಮಿ.

"ನೋಡೇ, ಈ ಟಿವಿ ನನಮಕ್ಕಳಿಗೆ ಪರಮಿಷನ್ ಕೊಡ್ಲಿ ವಳ್ಳೆದೊಂದು ಬ್ಲೂಫಿಲಂ ತಗುದು ತೋರಲಿಲ್ಲ ಅಂದ್ರೆ ಕೇಳು."

"ಬುಲೂ ಫಿಲಮ್ಮು ಅಂದ್ರೇನ್ಲ?"

"ಅದ ನೀನ್ನಬ್ಬಳೆ ಇದ್ದಾಗ ಕೇಳು. ಈಗೇಳಿ ಕಾಳಮಾವುನ ಕೈಲಿ ಬೈಸಿಗಳೋರ್ಯಾರು, ಸುಮ್ಮನಿರು."

"ಕಾಳಮಾವನಿಗೆ ಗೊತ್ತಿಲ್ದೆಯಿರದು ಯಾವುದದ್ಲ? ಹೇಳ್ಳ ಅತ್ಲಗೆ."

"ಅದೇನು ಅಂತದಲ್ಲ ಕಣೆ, ನೀನು ಇಲ್ಲಿಗಂಟ ಮಾಡಿಕಂಡು ಬಂದಿರದೆಯಾ."

"ನಾನೇನು ಮಾಡಕ್ಕೋಗಿದ್ದನ್ಲ?"


"ನೀನು ಗಂಡನ ಜ್ವತೆ ಮನಿಗಿಲವೇನೆ. ಅದ್ನೆ ಈ ನನ ಮಕ್ಕಳು ಸಿನುಮ ತಗದುಬುಡ್ತರೆ. ಕ್ಯಾಸೆಟ್ ಮಾಡಿ ಮಾರಿ ಬೇಕಾದಂಗೆ ದುಡ್ಡು ಮಾಡ್ತರೆ."

"ಅಲ್ಲಾ ಕಂದೈ ಗಂಡಹೆಡತಿ ಮಾಡದ್ನು ಫೋಟಾ ತಗದು ಮಾರಿ ದುಡ್ಡು ಮಾಡ್ತರೆ ಅಂದ್ರೆ ಅವುರಿನ್ನಂತ ಗತಿಗೆಟ್ಟ ನನ್ನ ಮಕ್ಕಳು ಕಾಲ ಇನ್ನೆಷ್ಟು ಕೆಟ್ಟದೆ ಅಂತ" ಎಂದ ಕಾಳಮಾವ.

"ಕಾಲ ಕೆಟ್ಟಿಲ್ಲ ದ್ವಡಪ್ಪ ಕೆಟ್ಟು ಕ್ಯರ ಹಿಡದೋಗ್ಯದೆ" ಎಂದುಕೊಂಡು ವಾಟಿಸ್ಸೆ ಬಂದ.

"ಬ್ಲೂಫಿಲಂ ನೋಡಿರೊ ಗಿರಾಕಿ ಬಂದ. ಅವುನ್ನೆ ಕೇಳಿ" ಎಂದ ಉಗ್ರಿ.

"ಇದ್ಯಾಕ್ರಪ್ಪ ಯಲ್ಲಾ ಸಬ್‌ಜೆಕ್ಟನೂ ಬುಟ್ಟು ಬ್ಲೂಫಿಲಂ ಸಬ್‌ಜೆಕ್ಟ್ ತಗಂಡಿದ್ದಿರಲ್ಲಾ, ಅದೂ ನಮ್ ಕಾಳ ದ್ವಡಪ್ಪ ಇರುವಾಗ. ವಾಟೀಸ್ ದಿ ಮ್ಯಾಟರ್?"



"ಏನುವಿಲ್ಲ ಕಂದೈ ಅವುಳ್ಯಾರೊ ರಸಿಕಿತ ಅನ್ನೋಳು ಮದಿವಾದಳಂತೆ."

"ಹೌದು ನನ್ನ ಕ್ಲೋಸ್ ಫ್ರೆಂಡ್ ಪ್ರೇಮುನ್ನ ಮದಿವಾದ್ಲು."

"ಪ್ರೇಮ ನಿನ್ನ ಫ್ರೆಂಡೆ?"

"ಓಲ್ಡಫ್ರೆಂಡು, ಈಗ ಕಾಂಟ್ಯಾಕ್ಟಿಲ್ಲ, ಮುಂದಕೇಳು."

"ಈ ಟಿವಿಯವು ಅವುರ ಮದುವೆ ಸಾಸ್ತ್ರನ್ಯಲ್ಲ ತೋರಿದರಂತೆ, ಅದ್ಕೆ ಈ ಉಗ್ರಿ ಪುಸ್ತನೂ ತೋರತರೆ ಅಂತ ಹೇಳಿ ಅದ್ಯಂತದೊ ಬ್ಲೂಫಿಲಮ್ಮು ತಗದು ಮಾರತರೆ ಅಂದ. ಮುಂದಕೆ ನೀನೇಳು."

"ನೋಡಕ್ಕ ಈ ಟಿವಿಯೋರು ಆ ಪೇಪರ್‌ನೋರು ಯಲ್ಲಾ ಕೆಟ್ಟು ಕ್ಯರ ಹಿಡದವುರೆ. ಆ ಟಿವಿ ಬಡ್ಡೆತ್ತವು ಕಾವೇರಿ ಚಳವಳಿ ಬುಟ್ಟು ಇನ್ನೇನೇನೊ ತೋರತ ಕುಂತವೆ. ಈ ಪೇಪರ್ ಲೋಫರ್ಸ್ ಕ್ರಿಕೆಟ್ ಮ್ಯಾಲೆ ಪುಟಗಟ್ಲೆ ಬರಿತ ಕುಂತವುರೆ. ಇಂತ ಜನಕ್ಕೆ ಸದರ ಕೊಟ್ರೆ ಪ್ರೇಂರಕ್ಷಿತನ ಮದುವೆ ಪುಸ್ತನೂ ತಗದು ಮಾರತರೆ ಕಣಕ್ಕ."

"ಮಂಡ್ಯದಲ್ಲೇ ಕೆಲುವುರು ಚಳವಳೀ ಬುಟ್ಟು ಮದಿವಿಗೆ ಹೋಗಿದ್ರಂತೆ. ಇನ್ನ ಪೇಪರ್‌ನವುದ್ಯಾವ ಲೆಕ್ಕನೊ?"

"ಮಿಸ್ಟರ್ ಉಗ್ರಿ, ಚಳವಳಿಯ ನಿಂತಿರೊ ಜಾಗದಿಂದ ಮತ್ತೆ ಕಂಟನ್ಯೂ. ಮಾಡಬವುದು. ಆದ್ರೆ ಮದುವೆ ತಪ್ಪಿಸಿಗಂಡ್ರೆ ತಿರಗ ಹೋಗಕ್ಯಾಗದಿಲ್ಲ ಅಂತ ಹೋದೋರು ಹೇಳತ ಕುಂತವುರೆ. ಇದಕೇನೇಳ್ತೀ?"

"ಏನು ಹೇಳಂಗಿಲ್ಲ, ಜನ್ಯಲ್ಲ ದಿಕ್ಕುತಪ್ಪಿದ ನಾಯಿಗಳಂಗಾಗ್ಯವುರೆ ಅಷ್ಟೆಯ."

"ಎಜ್ಝಾಕ್ಟ್ಲಿ ಕರಟ್. ಅದ್ಕೆ ಯಾರ್ಯಾರ್ನೊ ಕಡಿತ ಕುಂತವುರೆ. ಮನ್ನೆದಿನ ಆ ಟಿವಿ 9 ಚಾನಲ್ ಮೇಲೆ ಜಗಳಕ್ಕೆ ಬಿದ್ದ ಜನಗಳು ಆ ಬೆಂಗಳೂರು ನಾಯಿಗಳು ಒಂದೇ ತರ ಕಾಣತಿದ್ರೊ ಕಣೊ ನನಿಗೆ."

"ಅದ್ಯಾಕ್ಲ ಬೆಂಗಳೂರ ನಾಯಿ ಜನ ಕಡಿತವೆ?"

"ದಟೀಸ್ ವೆರಿ ಸಿಂಪಲ್ಲು ಕಣಕ್ಕ, ನಮ್ಮೂರಿನ ಹಿಸ್ಟರಿಲಿ ಯಾವ ನಾಯಿನೂ ಮನುಸುರ ಕಡದೇಯಿಲ್ಲ, ಯಾಕೇಳು?"

"ಯಾಕೆ ಅಂದ್ರೆ ನೀನೇ ಹೇಳ್ಳ?"

"ಯಾಕೆ ಅಂದ್ರೆ ಯಲ್ಲಾ ನಾಯಿಗಳಿಗೂ ಊರ ಜನಗಳ ಪರಿಚಯ ಇತ್ತು, ಜನಗಳಿಗೂ ನಾಯಿಗಳ ಪರಿಚಯ ಇತ್ತು, ಇದೇ ನಮ್ಮ ಊರು ಮುಂದೆ ಎಷ್ಟು ನಾಯಾರ ಇರ್ಲಿ, ಈ ಉಗ್ರಿನೆ ಹೇಳನು ಯಾವ ನಾಯಿ, ಯಾರ ಮನೆದು, ಆ ಹೆಣ್ಣುನಾಯಿ ಎಷ್ಟು ಸತಿ, ಎಷ್ಟು ಮರಿ ಹಾಕಿತ್ತು, ಈಗ ಅವ್ಯಲ್ಲ ಎಲ್ಯವೆ ಅಂತ ಕರಾರುವಕ್ಕಾಗಿ ಹೇಳನು."

"ನಿಜ ಕಣೆ. ನಾನು ಸಣ್ಣುಡಗನಲ್ಲಿ ಹೋಯ್ತಾಯಿದ್ರೆ ನಾಯಿ ನಿಂತ ಜಾಗದಲ್ಲೇ ಗೌರವ ಕೊಡವು ಇಲ್ಲ ಅಂದ್ರೆ ಬಾಲ ಕ್ಯಳಿಕಾಕಿ ಗಲ್ಲಿ ಬದ್ದು ಹೋಗವು."

"ತಿಳಕಂಡೇನಕ್ಕ ಉಗ್ರಿ ಡಾಗಿಷ್ಟ್ರಿಯಾ. ಈ ಬೆಂಗಳೂರಲ್ಲಿ ನಾಯಿಗಳಿಗೆ ಯಾರ ಪರಿಚಯವೂ ಇಲ್ಲ, ಹೇಳೋರೂ ಇಲ್ಲ ಕೇಳೋರೂ ಇಲ್ಲ, ಅಂಗಾಗಿ ಖಾಸಿಯಾಗಿ ಯಾರ್ಯಾರ್ನೊ ಕಡಿತ ಅವೆ. ಅದ್ಕೆ ಇವತ್ತು ನಾಯಿಗಳನ್ಯಲ್ಲ ಹಿಡುದು ದೂರ ಸಾಗುಸ್ತಾ ಅವುರೆ. ಇದೇ ತರ ಮುಂದೆ ಸ್ಲಂ ಜನಗಳನ್ನ ಸಾಗಸಬಹುದು. ಅದ್ನೂ ನಾವು ಇಷ್ಟರಲ್ಲೇ ನೋಡಬವುದು" ಎಂದ ವಾಟಿಸ್ಸೆ.

"ನೋಡದೇನು ಈಗಾಗ್ಲೆ ನ್ಯಡಿತ ಅದೆ ಕಣೊ."

" !?"

-ಬಿ. ಚಂದ್ರೇಗೌಡ

ಪೈಗಂಬರರ ಒಳ್ಳೆ ಬುದ್ಧಿಯೂ ಚೆಡ್ಡಿಗಳ ಚೇಳು ಬುದ್ಧಿಯೂ

ಒಂದು ಪತ್ರ

ಪ್ರೀತಿಯ ಗೌರಿಯವರೇ,

ನಾನು ನಿಮ್ಮ ಅಭಿಮಾನಿ. ನಿಮ್ಮ ತಂದೆಯವರಿಂದ ಬಳುವಳಿಯಾಗಿ ಬಂದಿರುವ ನಿಮ್ಮ ಜಾತ್ಯತೀತ ನಿಲುವು, ಬಡವರ ಮತ್ತು ಶೋಷಿತರ ಪರವಾಗಿ ನೀವು ಮಾಡುವ ಹೋರಾಟ, ಮೂಢನಂಬಿಕೆ ಮತ್ತು ಕಂದಾಚಾರಗಳ ಬಗೆಗಿನ ನಿಮ್ಮ ನಿಲುವು-ಇವೆಲ್ಲವನ್ನೂ ನಿಮ್ಮ ಲೇಖನಿಯಲ್ಲೂ, ನಿಮ್ಮ ಕೃತಿಯಲ್ಲೂ ಸದಾ ನೋಡುತ್ತಿರುತ್ತೇವೆ. ಇಂದಿನ ಮುಗ್ಧ ಯುವಕರಲ್ಲೂ ಸಹ ಜಾತಿಯ ವಿಷ ಬೀಜವನ್ನು ಬಿತ್ತಿ ಪರಸ್ಪರ ಹೊಡೆದಾಡಿಸುವ ಚೆಡ್ಡಿಗಳ ಬಗೆಯಂತೂ ತಮ್ಮಷ್ಟು ನಿರ್ದಾಕ್ಷಿಣ್ಯವಾಗಿ ಬರೆಯುವವರು ಮತ್ತು ಹೋರಾಡುವವರು ಕಾಣಸಿಗುವುದು ವಿರಳ.

ಮುಸಲ್ಮಾನರನ್ನು ಅವಾಚ್ಯವಾಗಿ ಬೈಯಲೆಂದೇ ಚಿಕ್ಕಮಗಳೂರಿನಲ್ಲಿ ಚೆಡ್ಡಿಗಳು ನಡೆಸುವ ಶೋಭಾಯಾತ್ರೆಯನ್ನು ಪ್ರತಿಭಟಿಸಿ ತಾವು ಜೈಲಿಗೆ ಹೋಗಿದ್ದು, ಸಕ್ಕಲೀಯರು ಶಸ್ತ್ರಾಸ್ತ್ರವನ್ನು ಕೈಗೆತ್ತಿಕೊಳ್ಳಬೇಕಾದಂತಹ ಅನಿವಾರ್ಯತೆಯನ್ನು ಸೃಷ್ಟಿಸಿದ ಪಟ್ಟಭದ್ರರ ಶೋಷಣೆಯ ವಿರುದ್ಧದ ತಮ್ಮ ಹೋರಾಟ, ಚೆಡ್ಡಿಗಳು ಎಷ್ಟೇ ಪ್ರತಿರೋಧ ಒಡ್ಡಿದರೂ ಹೆದರದೆ ಶಿವಮೊಗ್ಗದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ತಾವು ಮಾಡಿದ ಭಾಷಣ, ಇವೆಲ್ಲವೂ ನನ್ನಂತಹ ಅಸಂಖ್ಯಾತ ಕನ್ನಡಿಗರಲ್ಲಿ ನಿಮಗೆ ವಿಶೇಷ ಸ್ಥಾನಮಾನವನ್ನು ನೀಡುವಂತೆ ಮಾಡಿದೆ.

ಇನ್ನು ಪತ್ರಿಕಾರಂಗದ ವಿಚಾರಕ್ಕೆ ಬಂದಾಗ-ನಿಮ್ಮ ತಂದೆಯವರು ಪ್ರಾರಂಭ ಮಾಡಿದ 'ಲಂಕೇಶ್ ಪತ್ರಿಕೆ'ಯ ಮೊದಲ ಆವೃತ್ತಿಯಿಂದ ಹಿಡಿದು ಈ ವಾರದ ನಿಮ್ಮ ಆವೃತ್ತಿಯ ತನಕ ಒಂದೇ ಒಂದು ಪ್ರತಿಯನ್ನೂ ತಪ್ಪಿಸಿಕೊಳ್ಳದೆ ಓದುತ್ತಿರುವವನು ನಾನು.

ವಿಷಯಕ್ಕೆ ಬರುತ್ತೇನೆ-

ನಿಮ್ಮ ಈ ವಾರದ ಸಂಚಿಕೆಯಲ್ಲಿ 'ಬ್ಯಾರಿ ಸಮ್ಮೇಳನಕ್ಕೊಬ್ಬ ಕಟುಕ' ಎಂಬ ಶಿರೋನಾಮೆಯಡಿಯಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಬ್ಯಾರಿ ಸಾಹಿತ್ಯ ಸಮ್ಮೇಳನಕ್ಕೆ ಸಿ.ಟಿ. ರವಿಯವರನ್ನು ಕರೆದಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದೀರಿ. ಅವರನ್ನು ಕರೆಯಲಿಕ್ಕೆ ಕಾರಣಗಳು ಮೂರು.

1. ನಾವು ಈ ಸಮ್ಮೇಳನಕ್ಕೆ ಬೇರೆ, ಬೇರೆ ಧರ್ಮಗಳ ಹಲವಾರು ಮುಖಂಡರನ್ನು ಕರೆದಿದ್ದು, ಇವರು ನಮ್ಮ ಕ್ಷೇತ್ರದ ಶಾಸಕರೂ ಆಗಿರುವುದರಿಂದ ಇವರನ್ನು ಕರೆಯೋಣ ಎಂದು ನಮ್ಮ ಒಕ್ಕೂಟದ ಸಭೆಯಲ್ಲಿ ಮಾಡಿದ ತೀರ್ಮಾನ.

2. ಅಲ್ಪಸಂಖ್ಯಾತರಾದ ನಮ್ಮ ಭಾಷೆ, ಸಂಸ್ಕೃತಿ ಮತ್ತು ಸೌಹಾರ್ದತೆಯ ಪರಿಚಯ ಅವರಿಗೂ ಆಗಲಿ ಅನ್ನುವ ಸದುದ್ದೇಶದಿಂದ.

3. ಮುಹಮ್ಮದ್ ಪೈಗಂಬರ್‌ರವರು ಒಮ್ಮೆ, ಒಂದು ನೀರಿನ ತೊಟ್ಟಿಯಲ್ಲಿ ಬಿದ್ದು ಒದ್ದಾಡುತ್ತಿದ್ದ ಒಂದು ಚೇಳನ್ನು ನೋಡಿ ಅದರ ಪ್ರಾಣ ಉಳಿಸುವ ಉದ್ದೇಶದಿಂದ ಆ ತೊಟ್ಟಿಗೆ ಕೈಹಾಕಿ ಚೇಳನ್ನು ಎತ್ತುತ್ತಾರೆ. ಆದರೆ ಈ ಚೇಳು ಪೈಗಂಬರ್‌ರವರ ಕೈಗೆ ಕಡಿದು ಮತ್ತೆ ನೀರಿಗೆ ಬೀಳುತ್ತದೆ. ಪೈಗಂಬರ್‌ರವರು ಮತ್ತೆ ಎತ್ತುತ್ತಾರೆ. ಅದು ಮತ್ತೆ ಕಚ್ಚುತ್ತದೆ. ಹೀಗೆ 2-3 ಸಲ ಆದಾಗ ಜೊತೆಯಲ್ಲಿದ್ದವರು "ಅಂತಹ ಚೇಳನ್ನು ಉಳಿಸಲು ಯಾಕೆ ಪ್ರಯತ್ನಿಸುತ್ತಿದ್ದೀರಿ" ಎಂದು ಕೇಳಿದಾಗ ಪೈಗಂಬರ್‌ರವರು ಹೇಳುತ್ತಾರೆ "ಅದು ತನ್ನ ಕೆಟ್ಟತನವನ್ನು ಬಿಟ್ಟಿಲ್ಲ ಎಂದು ನಾನು ನನ್ನ ಒಳ್ಳೆತನವನ್ನು ಬಿಡಲೇ?" ಎಂದು- ಈ ಕಾರಣಕ್ಕಾಗಿ.

ಈಗ ನೀವೇ ಹೇಳಿ ನಾವು ಮಾಡಿದ್ದು ತಪ್ಪೇ? ಮತ್ತೂ ನಿಮಗೆ ತಪ್ಪೆಂತ ಅನ್ನಿಸಿದರೆ ಆ ತಪ್ಪಿಗಾಗಿ ನಾನು ಕ್ಷಮೆ ಕೇಳುತ್ತೇನೆ.


-ವಿಶ್ವಾಸವಿರಲಿ,

ಕೆ. ಮಹಮದ್, ಅಧ್ಯಕ್ಷರು
ಚಿಕ್ಕಮಗಳೂರು ಜಿಲ್ಲಾ ಬ್ಯಾರಿಗಳ ಒಕ್ಕೂಟ

ನಕ್ಷತ್ರಗಳ ಧ್ವಜದಡಿ...

ಆತ ಕೊಳಚೆ ಪ್ರದೇಶದಿಂದ ತನ್ನ ಪುಟ್ಟ ಸಂಸಾರ ಕರೆದುಕೊಂಡು ಅಲ್ಲಿಗೆ ಬಂದ. ಮೂರು ಚಿಕ್ಕ ಮಕ್ಕಳು ಮತ್ತು ಹೆಂಡತಿ. ಮರುದಿನ ಕೆಲಸಕ್ಕೆ ಹೋದ. ಪೊಲೀಸ್ ಕೆಲಸ ಆತನದು. ಅವನನ್ನು ನೋಡಿದವರು ಪೊಲೀಸ್ ಸ್ಟೇಷನ್‌ಗೆ ಫೋನ್ ಮಾಡಿದರು. "ಯಾವನೋ ಒಬ್ಬ ಪೊಲೀಸ್ ವೇಷದಲ್ಲಿ ಗುಪ್ತ ತಿರುಗ್ತಾ ಇದ್ದಾನೆ; ಕೂಡಲೆ ಬಂದು ಅರೆಸ್ಟ್ ಮಾಡಿ!" ಊರ ಹೆಸರು ಷಿಕಾಗೋ; ಷಿಕಾಗೋ ನಗರದ ಒಂದು ಭಾಗ.

ಯಾರೂ ದಸ್ತಗಿರಿ ಮಾಡಲಿಲ್ಲ, ಯಾಕೆಂದರೆ ಆತ ನಿಜಕ್ಕೂ ಪೊಲೀಸ್‌ಮನ್. ಆತನ ಒಂದೇ ಒಂದು ಅಪರಾಧ ಕಪ್ಪು ಮನುಷ್ಯನಾಗಿ, ನೀಗ್ರೋ ಆಗಿ ಹುಟ್ಟಿದ್ದು. ದಿನಕ್ಕೊಮ್ಮೆಯಾದರೂ ಮುಖಭಂಗ. ಕರಿಯ, ನಿಗ್ಗರ್ ಅನ್ನುವವರು, ರಕ್ಷಣೆಗೆ ಫೋನ್ ಮಾಡಿದಾಗ ಅವನು ಹೋದರೆ "ನೀನು ಬೇಡ-ಬಿಳಿ ಪೊಲೀಸ್ ಕಳಿಸು" ಅನ್ನುವುದು, ಆತನ ಮೇಲಧಿಕಾರಿಯೇ ಎಲ್ಲರೆದುರಿಗೆ ಸಾರ್ವಜನಿಕರಿಗೆ, "ನೋಡಿ ಈ ಕರಿಯನಿಂದ ಅರೆಸ್ಟಾಗಿ ನೀನು ಅಳಬೇಕಾಗುತ್ತೆ" ಅನ್ನುವುದು; ಒಂದಲ್ಲ, ಎರಡಲ್ಲ. ಆದರೆ ಈತ ಸೌಮ್ಯ ಸ್ವಭಾವದ, ಸದಾ ಪುಸ್ತಕದಲ್ಲಿ ಮುಳುಗಿರಲು ಇಷ್ಟಪಡುವ, ತನ್ನ ಕರ್ತವ್ಯವನ್ನು ದಕ್ಷವಾಗಿ ಮಾಡಿ ಹೆಸರು ಪಡೆಯಬೇಕೆಂದು ಶ್ರಮಿಸುವ ಮನುಷ್ಯ. ಆರಡಿ ಎತ್ತರದ ನೋಡಲು ಚೆಂದವಾದ ಮನುಷ್ಯ ಹೆಸರು ವೆಸ್ಲಿ ಸ್ಕಾಟ್.




ಈತನಂತೆಯೇ ಇನ್ನೊಬ್ಬ ನೀಗ್ರೋ. ಹೆಸರು ಡೊನಾಲ್ಡ್ ಸ್ಲೆಡ್. ಈತ ಹೊಸ ಬಡಾವಣೆಗೆ ಬಂದರೆ ಕಾರು ಸುಡಲಾಯಿತು. ನಿತ್ಯ ಬಯ್ಯಲಾಯಿತು. ಕಿಟಕಿಗೆ ಕಲ್ಲೆಸೆಯಲಾಯಿತು. ಈತನ ಸಂಬಂಧಿಯೊಬ್ಬನನ್ನು ಕಾರುಬಿಟ್ಟು ಉರುಳಿಸಿ ಬಯ್ಯಲಾಯಿತು.

ಇದು ಅಮೆರಿಕ. ಪೂರ್ತಿ ಅಮೆರಿಕ ಹೀಗಿಲ್ಲ, ಆದರೆ ಇಂಥದೂ ನಡೆಯುತ್ತದೆ. ಪೂರ್ಣ ಸಾಕ್ಷರತೆ, ಪೂರ್ಣ ಶಿಕ್ಷಣ ಪಡೆದ ಅಮೆರಿಕ. ಕಳೆದ ಎಂಟು ವರ್ಷದಿಂದ ಈ ವರ್ಣಭೇದ ಶೇ. 40 ರಷ್ಟು ಹೆಚ್ಚಾಗಿದೆ ಅನ್ನುವವರಿದ್ದಾರೆ.

ಇದು ಕೇವಲ ಅನಾರೋಗ್ಯದ ಮನಃಸ್ಥಿತಿಯಲ್ಲ, ಇದಕ್ಕೆ ಆರ್ಥಿಕ ಮುಖ ಕೂಡ ಇದೆ. ಪೂರ್ತಿ ಬಿಳಿಯರಿರುವ ಬಡಾವಣೆಯಲ್ಲಿನ ನಿವೇಶನ, ಮನೆಗಳಿಗೆ ಬೆಲೆ ಹೆಚ್ಚು; ಮಿಶ್ರಣಗೊಂಡ ಜನರಿರುವ ಬಡಾವಣೆಗಳನ್ನು ಗಿರಾಕಿಗಳು ಇಷ್ಟಪಡುವುದಿಲ್ಲ.

ನನ್ನೆದುರು ವೆಸ್ಲಿ ಸ್ಕಾಟ್ ಚಿತ್ರವಿದೆ. ತನ್ನ ಪೊಲೀಸ್ ಕಾರ್ ಪಕ್ಕದಲ್ಲಿ ನಿಂತು ಫೋಟೋ ತೆಗೆಸಿಕೊಂಡಿದ್ದಾನೆ. ಹಾಗೆಯೇ ಫ್ಲಾರೆನ್ಸ್ ಗ್ರಿಫಿತ್ ಜಾಯ್ನರ್ ಫೋಟೋ ಇದೆ. ಕಪ್ಪು ಹುಡುಗಿ. ಈಕೆ ಒಲಿಂಪಿಕ್ಸ್‌ನಲ್ಲಿ ಮೂರು ಪದಕ ಗೆದ್ದ ಮೇಲೆ ಅಮೆರಿಕಾ ಧ್ವಜ ಹಿಡಿದುಕೊಂಡು ಹೆಮ್ಮೆಯಿಂದ ನಡೆಯುತ್ತಿದ್ದಾಳೆ. ಇವೆರಡು ಫೋಟೋಗಳನ್ನು ನೋಡುತ್ತಲೇ ಇದ್ದೇನೆ. ಐವತ್ತು ನಕ್ಷತ್ರಗಳ ಅಮೆರಿಕನ್ ಧ್ವಜ ಹಿಡಿದ ಈ ಹೆಮ್ಮೆ, ಆನಂದ ತುಂಬಿದ ಜಾಯ್ನರ್ ಆಳದಲ್ಲಿ ಎಷ್ಟು ಬೇಸರ, ಅವಮಾನ ಮಡುಗಟ್ಟಿರಬಹುದು? ಅಮೆರಿಕಾ ಈಕೆಯ ಬಗ್ಗೆ ಎಷ್ಟು ಹೆಮ್ಮೆ, ಎಷ್ಟು ಅಸೂಯೆ ಇಟ್ಟುಕೊಂಡಿರಬಹುದು?




ಅಕ್ಟೋಬರ್ 23, 1988

ಇಲ್ಲಿ ಸಲ್ಲುವರು

ಮನುಷ್ಯ ನಿಜಕ್ಕೂ ಅಸ್ಪೃಶ್ಯತೆ, ವರ್ಣಭೇದ ಇತ್ಯಾದಿಯಿಂದ ಮುಕ್ತನಾಗಬೇಕಾದರೆ ಕೇವಲ ಅಕ್ಷರತೆ, ಶಿಕ್ಷಣ ಸಾಲದು ಅನ್ನಿಸುತ್ತದೆ. ಪೂರ್ಣ ಸಾಕ್ಷರತೆಯ ಅಮೆರಿಕಾದಂತೆಯೇ ಬಹುಪಾಲು ಸಾಕ್ಷರತೆಯ ಲೆಬನಾನ್‌ನಲ್ಲಿ ಮುಸ್ಲಿಮರು, ಕ್ರಿಶ್ಚಿಯನ್ನರು, ಯಹೂದ್ಯರು ಕಿತ್ತಾಡುತ್ತಲೇ ಇದ್ದಾರೆ. ಜಾತಿ ಜಗಳದಲ್ಲಿ ತೊಡಗಿ ರಕ್ತ ಹರಿಸುತ್ತಿದ್ದಾರೆ. ಈ ರೀತಿಯ ಸಣ್ಣತನ ಹೋಗಬೇಕಾದರೆ ಚಿಕ್ಕಂದಿನಲ್ಲಿಯೇ ವೈಚಾರಿಕತೆಯ, ಉದಾರವಾದಿತ್ವದ ಶಿಕ್ಷಣ ಅಗತ್ಯವಿರಬಹುದು; ಜಾತಿ ಕುರಿತ ಪಾಠಗಳು ಕಡಿಮೆ ಇರುವುದು ಸಹಾಯಕ ಆಗಬಹುದು; ಆರ್ಥಿಕ ಸಮಾನತೆ ನೆರವಾಗಬಹುದು.


ನಿಮಗೊಂದು ಅಚ್ಚರಿಯ ವಿಷಯ ಹೇಳುತ್ತೇನೆ. ಪಾಕಿಸ್ತಾನದಲ್ಲಿ ತುಂಬ ಕಡಿಮೆ ಜನ ಹಿಂದೂಗಳು, ಕ್ರಿಶ್ಚಿಯನ್ನರು ಇರುವುದು ನಿಮಗೆ ಗೊತ್ತಿರಬಹುದು. ಮುಸ್ಲಿಮರ ಕ್ರೌರ್ಯವನ್ನು ಕಲ್ಪಿಸಿಕೊಂಡ ಹಿಂದೂಗಳು ಭಾರತಕ್ಕೆ ಓಡಿಬಂದರು; ಕೆಲವರು ಅಲ್ಲೇ ಉಳಿದರು. ಅಲ್ಲಿ ಇವತ್ತಿನವರೆಗೆ ಹಿಂದೂಗಳ ವಿರುದ್ಧ (ಇಲ್ಲಿಯ ಪ್ರಮಾಣದಲ್ಲಿ) ಹಿಂಸೆ ಆಗಿಲ್ಲ; ಅಪಮಾನ ಆಗಿಲ್ಲ. ಅದಕ್ಕಿಂತ ಮುಖ್ಯ ಇವತ್ತು ಭಾರತದಿಂದ ಪಾಕಿಸ್ತಾನಕ್ಕೆ ಪ್ರವಾಸಿಗನಾಗಿ ಮುಸ್ಲಿಮನೊಬ್ಬ ಹೋದರೆ ಆದರ, ಅನಾದರವಿಲ್ಲದೆ ನಿರ್ಲಕ್ಷಿಸುತ್ತಾರೆ; ಆದರೆ ಹಿಂದೂ ಹೋದರೆ ವಿಶೇಷ ಆದರ, ಪ್ರೀತಿ ತೋರುತ್ತಾರೆ. ಇದನ್ನು ಒಬ್ಬ ಮುಸ್ಲಿಂ, ಒಬ್ಬ ಹಿಂದೂ ಪ್ರವಾಸಿಗಳು ನನಗೆ ಹೇಳಿದ್ದು. ಇನ್ನೊಂದು ಅನಿರೀಕ್ಷಿತ ಅಂಶವಿದೆ. ಪಾಕಿಸ್ತಾನದಲ್ಲಿ ಪಠಾಣ್ ಮುಸ್ಲಿಮರ ಉದ್ಧಟತನ ಹೆಚ್ಚು; ಸುಮಾರು ಇಪ್ಪತ್ತು ಪಠಾಣ್ ಕುಟುಂಬಗಳು ಆಯಕಟ್ಟಿನ ಸ್ಥಾನ ಆಕ್ರಮಿಸಿ ಪಾಕಿಸ್ತಾನವನ್ನು ಆಳುತ್ತಿವೆ. ಈಗ ಏನಾಗಿದೆ ಅಂದರೆ, ಪಾಕಿಸ್ತಾನದ ಸೈನ್ಯದ ಗಣ್ಯರೆಲ್ಲ ಕೆಳವರ್ಗಕ್ಕೆ ಸೇರಿದ, ಭಾರತೀಯ ಕರುಳುಬಳ್ಳಿಯುಳ್ಳ ಸೈನಿಕರು. ಅವರಿಗೆ ಪಠಾಣರ ಬಗ್ಗೆ ಸಿಟ್ಟಿರುವಂತೆಯೇ ಭಾರತದ ತಮ್ಮಂಥ ಜನರ ಬಗ್ಗೆ ವಿಶ್ವಾಸ.



ಇದು ಏನು ಸೂಚಿಸುತ್ತದೆ ಗೊತ್ತೆ? ಭಾರತದಲ್ಲಿ ಹಿಂದೂ ಮುಸ್ಲಿಂ ಮನಸ್ತಾಪ ಮತ್ತು ಪರಸ್ಪರ ಸಂಶಯ ಇಲ್ಲವಾಗುವಂತೆ ಮಾಡುವುದು ಸುಲಭ. ಭಾರತದ ನಾಯಕರು ಪಾಕಿಸ್ತಾನದ ಸಾಮಾನ್ಯ ಜನರನ್ನು ಉದ್ದೇಶಿಸಿ ಸಹಜವಾಗಿ, ಪ್ರಾಮಾಣಿಕವಾಗಿ ಮಾತಾಡುವುದನ್ನು ಕಲಿಯಬೇಕು; ಅಲ್ಲಿಯ ನಾಯಕತ್ವ ಕೆಳಸ್ತರದಿಂದ ಬರುವಂತೆ ಪ್ರೋತ್ಸಾಹಿಸಬೇಕು; ನಮ್ಮ ಅವರ ಸಮಸ್ಯೆಗಳೆಲ್ಲ ಒಂದೇ ಮೂಲದಿಂದ ಉಂಟಾದವೆಂಬುದನ್ನು ಮನದಟ್ಟು ಮಾಡಿಕೊಡಬೇಕು.

ಇಡೀ ಯುರೋಪ್ ಒಂದೇ ರಾಷ್ಟ್ರವಾಗುವತ್ತ ಸಿದ್ಧವಾಗುತ್ತಿರುವಾಗ ಈ ಉಪಖಂಡ ಒಂದೇ ಎಂದು ಚಿಂತಿಸುವವರು ಕೂಡ ಇಲ್ಲದಿರುವುದು ಇಲ್ಲಿಯ ಮುಖ್ಯ ಸಮಸ್ಯೆ.

ಆಂಟಿಯರು ತುಂಬ ತುಂಟಿಯರು, ಹುಡ್ಗೀಯರು?



ಅನಿಲ್ ಕುಮಾರ್ ಕೋಟೆ, ದೇವದುರ್ಗ
ಸರ್ಕಾರವೇ ಕೋಜಾ ಆಗಿರುವಾಗ ಲಕ್ಷ್ಮಣರೇಖೆ ಎಳೆದವರ್‍ಯಾರು?
* ಸನ್‌ಸ್ಟ್ರೋಕ್ ದೊಣ್ಣೆ ಹಿಡಿದವರು.

ಪಿ.ಎನ್. ಶ್ರೀವತ್ಸ, ಬೆಂಗಳೂರು
ನಾರಾಯಣಮೂರ್ತಿ ಮತ್ತು ಗಿರೀಶ್ ಕಾರ್ನಾಡ್ ಇಬ್ಬರೂ ಸ್ವಲ್ಪ ಒಂದೇ ತರ ಮಾತಾಡಲು ಕಾರಣ?
* ಇಬ್ಬರೂ ಕಾವೇರಿ ನೀರು ಕುಡಿದಿಲ್ಲವಂತೆ.

ರತೀಶ್, ಬೆಂಗಳೂರು
ಬ್ರಾಹ್ಮಣರ ಮನೆಯಲ್ಲೇ ತಿಗಣೆ, ಜಿಗಟ, ಹೇನು ಹೆಚ್ಚು ಏಕೆ?
* ಶೂದ್ರರು ಬಂದು ಹತ್ತಿಸಿ ಹೋಗಿದ್ದು.



ಅ.ರಾ. ಮಂಜುನಾಥ, ಗದಗ
ತುಂಡು ಬಟ್ಟೆಗಿರೋ ಗ್ಲಾಮರ್ ಮೈ ತುಂಬ್ಕೊ ಬಟ್ಟೆಗ್ಯಾಕಿಲ್ಲ?
* ಇದೆ, ಗ್ಲಾಮರ್ ಕಣ್ಣಿಂದ ನೋಡು.

ಕಾಳೀಹುಂಡಿ ಶಿವಕುಮಾರ್, ಮೈಸೂರು
ಹುಡುಗಿಯರು ಮೊಬೈಲ್‌ನಲ್ಲೇ ಕಣ್ಣಾಮುಚ್ಚಾಲೆಯಾಟ ಆಡುತ್ತಿರುತ್ತಾರಲ್ಲಾ?
* ತುಂಟಾಟ ಆಡಲು ಆಗಲ್ಲ ಅದಕ್ಕೆ.

ಬಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು
ಮಾನಸ್ಯಾಮಿಯ ನಂತರ ರೇವಣ್ಣ ಸಿಎಂ ಎಂಬುದು ನನ್ನ ಅನಿಸಿಕೆ. ತಾವೇನು ಹೇಳುತ್ತೀರಾ?
* ಯಾವುದಕ್ಕೂ ಡಿಸಿಎಂ ಎಡೂರಪ್ಪನನ್ನ ಒಂದು ಮಾತು ಕೇಳಿ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ವಯಸ್ಸಿಗೆ ಬಂದ ಹುಡುಗನಿಗೆ ಚಿಗುರು ಮೀಸೆ ಬರುತ್ತೆ, ವಯಸ್ಸಿಗೆ ಬಂದ ಹುಡುಗಿಗೆ?
* ಮೀಸೆ ಕಾಣಿಸುತ್ತೆ.

ಕೆ. ಶ್ರೀನಿವಾಸ್, ಮಂಡ್ಯ
ಕಾವೇರಿ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗುವುದು ಯಾವಾಗ?
* ಅಲ್ಲಿ ರೈತರು ಇಲ್ಲಿ ರೈತರು ಕೂತು ಮಾತನಾಡಿದಾಗ.

ನಂದಿನಿ ಮಂಜುನಾಥ, ಮಧುಗಿರಿ
ಕಾವೇರಿ ನೀರಲ್ಲೂ ರಾಜಕೀಯಾನಾ? ಈ MLA, MPಗಳು ಎಂತಾ ಜನಾ?
* ಕಂತ್ರಿ ಜನ.

ಪಂಕಜ, ಬೆಂಗಳೂರು
ನಾಯಿಗೂ, ನರನಿಗೂ ಇರುವ ವ್ಯತ್ಯಾಸ?
* ನಾಯಿ ಇನ್ನು ಮನುಷ್ಯನ ಬಗ್ಗೆ ನಂಬಿಕೆ ಕಳೆದುಕೊಂಡಿಲ್ಲ.

ಎಂ. ಮುಕ್ರಂಪಾಷ, ಕೊಳ್ಳೇಗಾಲ
ಇತ್ತೀಚೆಗೆ ರಾಧಿಕಾಗೆ ಸಿನಿಮಾದಲ್ಲಿ ಬೇಡಿಕೆ ಇಲ್ವಂತೆ?
* ಆಕೆ ಮನೆಗೆ ಹೋದ ಕುಮಾರಸ್ವಾಮಿ ಇನ್ನೂ ಈಚೆ ಬಂದಿಲ್ಲವಂತೆ.

ಎಂ. ಶಿವಸ್ವಾಮಿ, ಬೆಂಗಳೂರು
ನಮ್ಮ ರಾಜಕೀಯ ನಾಯಕರು ಹೆಚ್ಚಾಗಿ ತಮಿಳುನಾಡಿನ ದೇವರಿಗೆ ಮೊರೆ ಹೋಗುತ್ತಾರಲ್ಲ ಯಾಕೆ?
* ಕಾವೇರಿ ದ್ರೋಹಿಗಳ ಪಾಪವನ್ನು ತಮಿಳು ದೇವರು ತೊಳೆಯುತ್ತವಂತೆ.

ಎಂ.ಎಸ್. ಮಂಜರ್, ಬಂದಳ್ಳಿ
ಕಾವೇರಿ ನೀರು ರಾಜಕೀಯದ ಕೊಳೆಯಿಂದ ಯಾವಾಗ ಶುದ್ಧವಾಗುವುದು?
* ಕನ್ನಂಬಾಡಿ ನಿರಂತರ ತುಂಬಿ ಹರಿದಾಗ.

ಎಂ. ಶ್ರೀಧರ, ಮಿರ್ಜಾನ
"ಕಳ್ಳರಿದ್ದಾರೆ ಎಚ್ಚರಿಕೆ" ಎನ್ನುವ ಬೋರ್ಡಿನಲ್ಲಿ ಪೊಲೀಸರ ಭಾವಚಿತ್ರವನ್ನೂ ಹಾಕಿರುತ್ತಾರಲ್ಲಾ?
* ಅದು ತರಬೇತುದಾರರ ಫೋಟೋ.

ಅಂಬುಜಾ, ಸುರಪೂರ
'ಮಿಡಿ'ಗೂ 'ನಾಡಿ'ಗೂ ಎಂಥಾ ಅನುಬಂಧ?
* ಜನ್ಮಜನ್ಮದ ಅನುಬಂಧವಂತೂ ಅಲ್ಲ.

ಎಸ್. ಶಶಿಧರ, ದಾವಣಗೆರೆ
ನಿಮ್ಮೂರು ಉಗ್ರರಿಗೂ-ಉಗ್ರ ನಾಯಿಗಳಿಗೂ ಬಹಳ ಉದಾರವಾಗಿ ಆಶ್ರಯ ನೀಡುತ್ತಿದೆಯಲ್ಲ?
* ಕೋ-ಜಾ ಸರ್ಕಾರದ ಕಡುಭ್ರಷ್ಟರ ಆಶ್ರಯದಲ್ಲಿ ಇವೆಲ್ಲ ಸಹಜ.

ಅ.ರೆಡ್ಡಿ, ಬೆಂಗಳೂರು
ಅಂದು ಬಾಲಕ ನಾಯಿಮರಿ ನಾಯಿಮರಿ ತಿಂಡಿ ಬೇಕೆ ಎನ್ನುತ್ತಿದ್ದನು, ಇಂದು?
* ನಾಯಿಗಳು ನೀನೇ ಬೇಕು ಮರಿ ಎನ್ನುತ್ತಿವೆ.

ಅಬ್ದುಲ್ ರಜಾಕ್, ದೇವದುರ್ಗ
ಆಂಟಿಯರು ತುಂಬ ತುಂಟಿಯರು, ಹುಡ್ಗೀಯರು?
* ತುಂಟರನ್ನು ಆಮಾರಿಸುವ ಬೆಡಗಿಯರು.

ಬಹುಮಾನಿತ ಪ್ರಶ್ನೆ

ಧೀ ತುಂಟಿ!

ಗಂಡ ಹಲವಾರು ಹೆಂಗಸರ ಹತ್ತಿರ ಚಾನಗಡಿ ನಡೆಸುತ್ತಿರುವುದು ಗೊತ್ತಾಗಿ ಕಮಲವ್ವ ಆತನನ್ನು ಮನೆಯಿಂದ ಓಡಿಸಿದಳು. ಆತ ಬಂದಾಗ ಬಾಗಿಲು ತೆಗೆಯಲು ನಿರಾಕರಿಸಿದಳು. ಆದರೆ ಆವಳ ಮನಸ್ಸು ಕರಗಿದ ಮೇಲೆ ತಮ್ಮ ಮನೆತನದ ಜಗದ್ಗುರುವನ್ನು ಸಂಧಿಸಿ, "ಬುದ್ಧಿ ನೊಂದುಕೋತಾ ಇದಾರೆ. ಒಳಗೆ ಬಿಡಲಾ?" ಅಂದಳು.

"ಅದು ಸರಿಯವ್ವ" ಅಂದರು ಸ್ವಾಮೀಜಿ ಆಕೆಯ ಮುಂಗುರುಳು ನೇವರಿಸಿ ಕೆನ್ನೆಗೆ ಸಾಗುತ್ತ "ಬಿಟ್ಟುಕೋಬಹುದು, ಆದರೆ ಆತ ಅಷ್ಟು ಹಾದರ ಮಾಡಬೇಕಾದ್ರೆ ಅವನಿಗೆ ಬುದ್ಧಿ ಕಲಿಸಲಿಕ್ಕಾದರೂ ನೀನು ಒಂಚೂರು ಮಾಡಬೇಡವಾ?"



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ರಕ್ಷಿತಾ-ಪ್ರೇಮ್ ಮದುವೆ ಒಂದು ರಾಷ್ಟ್ರೀಯ ಸುದ್ದೀನಾ?

ಮಾರ್ಚ್ 7ರ ಸಂಚಿಕೆಯ ನಮ್ಮ ಪ್ರಶ್ನೆ: ಕಾವೇರಿ ಸಮಸ್ಯೆಗೆ ವಾಸ್ತು ದೋಷ ಕಾರಣವಂತೆ. ನೀವೇನಂತೀರಿ?
ನಿಮ್ಮ ಉತ್ತರ: ಎಲ್ಲಾ ಸಮಸ್ಯೆಗಳಿಗೂ, ದೋಷ ಹುಡುಕುವವರ ಮನೋದೋಷ.
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಸ್. ರಾಜನಾಥ್, ಅಳ್ಳಾವರ ಕೊಪ್ಪಳ

ಗೋಹತ್ಯೆಗೆ ಪ್ರತಿಕಾರ ನಾಯಿಹತ್ಯೆ?



ಹಾವು ಕಚ್ಚಿ ಸತ್ತ ಪುರಾಣದ ಪರೀಕ್ಷಿತನ ಸಾವಿಗೆ ಇಡೀ ಸರ್ಪ ಸಂಕುಲವನ್ನೇ ನಿರ್ನಾಮ ಮಾಡಲು ಹೊರಟು ಸರ್ಪಯಾಗವನ್ನು ಕೈಗೊಂಡ ಜನಮೇಜಯನಿಗೂ ಈಗ ಇಡೀ ಶ್ವಾನಸಂಕುಲವನ್ನೇ ನಿರ್ನಾಮ ಮಾಡಲು ಹೊರಟ ಕನ್ನಡ ಪ್ರಭದ ಸಂಪಾದಕ ರಂಗನಾಥ್ ಮತ್ತು ವಿಜಯ ಕರ್ನಾಟಕದ ಸಂಪಾದಕ ವಿಶ್ವೇಶ್ವರ ಭಟ್ಟರಂಥವರಿಗೂ ಹೆಚ್ಚು ವ್ಯತ್ಯಾಸಗಳಿಲ್ಲ.

ಇವತ್ತು ಮಾಧ್ಯಮಗಳ ಮೂಲಕ ನಾಯಿ ಸನ್ನಿ ಹಬ್ಬಿಸುತ್ತಿರುವವರ ಪೈಕಿ ಬಹುತೇಕರು ಚೆಡ್ಡಿ ಪತ್ರಕರ್ತರು. ನಾಯಿ ಮೇಲಿನ ಇವರ ಸಿಟ್ಟಿಗೆ ಮೂಲ ಕಾರಣ ಈ ಥರದ ಪ್ರಾಣಿದಯಾ ಸಂಘಗಳನ್ನು ಕ್ರಿಶ್ಚಿಯನ್ ಮಿಷನರಿಗಳು ನಡೆಸುತ್ತಿದ್ದಾರೆ ಎಂಬ ತಪ್ಪು ಕಲ್ಪನೆ. ವಾಸ್ತವವೆಂದರೆ ಕರುಣಾದ ರಾಮಕೃಷ್ಣ, ಕ್ಯೂಪಾದ ಸುಧಾ ನಾರಾಯಣನ್, ಕೃಪಾದ ಪೂರ್ಣಿಮಾ ಹರೀಶ್, ಎಆರ್‌ಎಫ್‌ನ ದಿಲೀಪ್ ಬಾಪ್ನಾ ಇವರ್‍ಯಾರೂ ಕ್ರಿಶ್ಚಿಯನ್ನರಲ್ಲ, ಅಪ್ಪಟ ಹಿಂದೂಗಳು. ಕೆಲವಕ್ಕೆ ಫಾರಿನ್ ಫಂಡ್ ಬಂದಿರಬಹುದು. ಪಾಲಿಕೆಯ ದುಡ್ಡು ತಿಂದಿರಬಹುದು. ಲೋಪ ಎಸಗಿರಬಹುದು. ಆದರೆ ಇವರ ಮೇಲಿನ ಸಿಟ್ಟಿಗೆ ಪಾಪದ ನಾಯಿಗಳ ಹತ್ಯಾಕಾಂಡ ಸಮರ್ಥನೆಯೆ?

ತಮಾಷೆಯೆಂದರೆ ಈ ರೀತಿ ಶ್ವಾನಸಂಹಾರವನ್ನು ಸಮರ್ಥಿಸುವ ಇದೇ ಮಂದಿ ಗೋಹತ್ಯೆಯನ್ನು ವಿರೋಧಿಸುತ್ತಾರೆ. ಮಾಂಸಾಹಾರವನ್ನೇ ಬಿಡಬೇಕು ಎಂತಲೂ ದೊಡ್ಡ ಗಂಟಲಲ್ಲಿ ವಾದಿಸುತ್ತಾರೆ. ಸರಿ, ಹಾಗಂಥ ನಾಯಿಗಳ ಹತ್ಯೆಯೂ ಅಷ್ಟೇ ತಪ್ಪಲ್ಲವೆ?

ಇದಕ್ಕೆ ಅವರ್‍ಯಾರಲ್ಲೂ ಉತ್ತರವಿಲ್ಲ, ಏಕೆಂದರೆ ನಾಯಿ ಮಾಂಸ ತಿನ್ನುತ್ತೆ ನೋಡಿ ಅದಕ್ಕೆ ಅಂತ ಪೆದ್ದುಪೆದ್ದಾಗಿ ತಲೆ ಕುಣಿಸುತ್ತಾರೆ. ಈ ಪೈಕಿ ವಿಜಯ ಕರ್ನಾಟಕದ ರೋಲ್‌ಕಾಲ್ ರಿಪೋರ್ಟರ್ ಒಬ್ಬನಿಗೆ ನಾಯಿಗಳ ಮೇಲೆ ಆಪಾಟ ಸಿಟ್ಟೇಕೆಂದರೆ, ಕೆಲ ದಿನಗಳ ಹಿಂದೆ ಈತ ಪ್ರಾಣಿದಯಾ ಸಂಘವೊಂದರ ಅಧ್ಯಕ್ಷನನ್ನು ಬ್ಲ್ಯಾಕ್‌ಮೇಲ್ ಮಾಡಿ ದುಡ್ಡಿಗೆ ಪೀಡಿಸಿದ್ದ. 'ನಾವೇ ಭಿಕ್ಷೆ ಬೇಡಿ ಬೀದಿ ನಾಯಿ ಸಾಕ್ತಿದ್ದೀವಿ ನಿನಗೆಲ್ಲಿಂದ ಕೊಡ್ಲೀ....!' ಎಂದು ಲಾತಾ ಕೊಟ್ಟು ಓಡಿಸಿದ ಮೇಲೆ ಆ ಸಿಟ್ಟನ್ನು ಆತ ಪಾಪದ ನಾಯಿಗಳ ಮೇಲೆ ತೋರಿಸತೊಡಗಿದ.

ಹಾಗೆ ನೋಡಿದರೆ ಚೆಡ್ಡಿ ಪತ್ರಕರ್ತರಿಗಿಂತಲೂ ಹೆಚ್ಚಾಗಿ ಪ್ರಾಣಿದಯಾ ಸಂಘಗಳೇ ಗೋಹತ್ಯೆಯನ್ನು ವಿರೋಧಿಸಿವೆ. ನಾಯಿಗಳು ಮಾಂಸ ತಿನ್ನುವುದರಿಂದಲೇ ಮಕ್ಕಳನ್ನು ಕಚ್ಚುತ್ತಿವೆ ಎಂಬುದು ಚೆಡ್ಡಿ ಪತ್ರಕರ್ತರ ಮತ್ತೊಂದು ವಿತಂಡವಾದ. ಆ ನೆಪದಲ್ಲಿ ಮುಸ್ಲಿಮರೇ ಹೆಚ್ಚಾಗಿ ನಡೆಸುವ ಮಾಂಸದಂಗಡಿಗಳನ್ನು ಮುಚ್ಚಿಸುವುದು, ಆ ಮೂಲಕ ಜನರ ಆಕ್ರೋಶವನ್ನು ಮುಸ್ಲಿಮರ ವಿರುದ್ಧ ತಿರುಗಿಸುವುದು ಇದರ ಹಿಂದಿನ ಕುತಂತ್ರ.

ನಾಯಿಗಳೇ ಸ್ವಭಾವತ ಮಾಂಸಾಹಾರಿಗಳಾಗಿರುವಾಗ ಮಾಂಸ ತಿಂದಿದ್ದರಿಂದಲೇ ಮಕ್ಕಳನ್ನು ಕಚ್ಚುತ್ತಿವೆ ಎಂಬುದಕ್ಕೆ ಅರ್ಥವುಂಟೆ? ಮಕ್ಕಳನ್ನು ಕೊಂದ ನಾಯಿಗಳು ಮಾಂಸ ತಿಂದೇ ಈ ಕೃತ್ಯವೆಸಗಿದ್ದರೆ ಯುಗಯುಗಾಂತರದಿಂದ ಮನುಷ್ಯ ನಾಯಿಗೆ ಮಾಂಸ ಕೊಟ್ಟೇ ಇಲ್ಲವೆ? ಪ್ರತಿ ಮನೆಯಲ್ಲೂ ಸಾಕಿದ, ಆ ಮನೆಯವರು ಹಾಕಿದ ಮಾಂಸ ತಿಂದ ಅದೆಷ್ಟು ನಾಯಿಗಳು ಅದೆಷ್ಟು ಮಕ್ಕಳನ್ನು ಕೊಲ್ಲಬೇಕಿತ್ತು?

ಇದು ಎಂಥಾ ಹುಚ್ಚಾಟವೆಂದರೆ ಸಮುದ್ರ ವಿಪರೀತ ಉಪ್ಪು ತಿಂದಿದ್ದರಿಂದಲೇ ಉಪ್ಪುಪ್ಪು ಎಂದಂತೆ!



ಕೊಂದದ್ದು ಯಾರೋ ಶಿಕ್ಷೆ ಯಾರಿಗೋ?

ನಿರ್ಜನ ಪ್ರದೇಶದ 'ಜಂಗ್ಲೀ' ನಾಯಿಗಳು ಪಾಲಿಕೆಯ ನಾಯಿ ಹಿಡಿಯುವ ವಾಹನವನ್ನು ಕಂಡಿದ್ದೇ ಎದ್ದು ಓಡಿಬಿಟ್ಟವು. ಕೆಲವು ಮೋರಿ ಹೊಕ್ಕವು. ಅವುಗಳನ್ನು ಹಿಡಿಯಲಾಗದ ವೈಫಲ್ಯವನ್ನು ಮುಚ್ಚಿಕೊಳ್ಳಬೇಕಲ್ಲ; ಅದಕ್ಕೆ ಪಾಲಿಕೆಯ ಕಟುಕರು ಪಾಪದ, ಆರೋಗ್ಯವಂತ, ಮನುಷ್ಯ ಕರೆದಾಕ್ಷಣವೇ ಬಾಲ ಅಲ್ಲಾಡಿಸಿಕೊಂಡು ಬಂದು ಮುದ್ದಿಸುವ ನಿರುಪದ್ರವಿ ನಾಯಿಗಳನ್ನೆಲ್ಲ ಅನಾಯಾಸವಾಗಿ ಎತ್ತಿ ಬೋನಿಗೆ ತುರುಕುತ್ತಿದ್ದರು...

ರಾ. ಸೋಮನಾಥ್

ನಾಯಿಗಳ ಪೈಕಿ ನಿಷೇಧಿತ 'ರಾಟ್‌ವೈಲರ್' ತಳಿಯೊಂದೇ ಮಕ್ಕಳನ್ನು ಕೊಲ್ಲುತ್ತದೆಯೆಂಬುದು ಈತನಕ ಚಾಲ್ತಿಯಲ್ಲಿದ್ದ ನಂಬಿಕೆಯಾಗಿತ್ತು. ಆದರೆ ಭಾರತದ ನಾಟಿನಾಯಿಗಳು ಹಾಗಲ್ಲ, ಮನುಷ್ಯನನ್ನು ಅದರಲ್ಲೂ ಮಕ್ಕಳನ್ನು ಅದೆಷ್ಟೇ ಕಷ್ಟಪಟ್ಟಾದರೂ ಕಾಪಾಡುವ ಗುಣ ಅದಕ್ಕೆ ರಕ್ತಗತವಾಗಿ ಬಂದುಬಿಟ್ಟಿದೆ. ಈ ಬಗ್ಗೆ ಕಲ್ಕತ್ತಾದ 'ಆಜ್‌ಕಾಲ್' ಎಂಬ ದಿನಪತ್ರಿಕೆಯೊಂದು 1996 ರ ಮೇ 25 ರಂದು ತನ್ನ ಮುಖಪುಟದಲ್ಲಿ ಫೋಟೋ ಒಂದನ್ನು ಪ್ರಕಟಿಸಿತ್ತು, ಅದರಲ್ಲಿ ಬೀದಿಬದಿಯ ಕಸದ



ಮನೆಯೊಳಕ್ಕೆ ನುಗ್ಗಿ ನಾಯಿಯನ್ನು ಎಳೆದುತರುತ್ತಿರುವ ಪಾಲಿಕೆ ಸಿಬ್ಬಂದಿ



ರಕ್ಷಣೆಗಾಗಿ ತನ್ನ ಒಡತಿಗೆ ಮೊರೆಯಿಡುತ್ತಿರುವ ಪಾಪದ ನಾಯಿ


ತೊಟ್ಟಿಯೊಂದರಲ್ಲಿ ಎಸೆದು ಹೋಗಿದ್ದ ನವಜಾತ ಶಿಶುವೊಂದನ್ನು ಮೂರು ಬೀದಿನಾಯಿಗಳು ನಿಂತು ಕಾಯುತ್ತಿರುವ ದೃಶ್ಯವಿತ್ತು. ಯಾರೋ ತಾಯೊಬ್ಬಳು ಕಸದ ತೊಟ್ಟಿಗೆ ಎಸೆದು ಹೋಗಿದ್ದ ಆ ಶಿಶುವನ್ನು ಆ ಮೂರು ಬೀದಿನಾಯಿಗಳು ತಾವು ಅನ್ನ ಆಯುವುದಕ್ಕೂ ಕೂಡ ಹೋಗದೇ 1996ರ ಮೇ 23ರ ರಾತ್ರಿಯಿಡೀ ಹಸಿದು ನಿಂತೇ ಕಾದಿದ್ದವು. ಬೆಳಿಗ್ಗೆಯ ಹೊತ್ತಿಗೆ ಯಾರೋ ಬಂದು ಆ ಶಿಶುವನ್ನು ಆಸ್ಪತ್ರೆಗೆ ಸಾಗಿಸುವ ತನಕ ಹಾಗೇ ಅಲ್ಲಾಡದೇ ಪಹರೆ ಕಾಯ್ದದ್ದು ಬೀದಿನಾಯಿಗಳ ಪರಮನಿಷ್ಠೆಗೆ ಜೀವಂತ ಸಾಕ್ಷಿಯಾಗಿತ್ತು. ಈ ಒಂದೇ ಘಟನೆಯನ್ನು ಆಧಾರವಾಗಿಟ್ಟುಕೊಂಡು ಪ್ರತಿಯೊಬ್ಬರೂ ತಮಗೆ ತಾವೇ ಹಾಕಿಕೊಳ್ಳಬೇಕಾದ ಪ್ರಶ್ನೆಯೆಂದರೆ; ಯಾವ ಕಾರಣಕ್ಕೆ ಬೆಂಗಳೂರಿನಲ್ಲಿ ಇಂಥಾದೊಂದು ಅವಘಡ ಸಂಭವಿಸಿತು?

ಇದು ಇಂಗ್ಲಿಷ್ ವಾರಪತ್ರಿಕೆ ಔಟ್‌ಲುಕ್‌ನ 2007 ರ ಮಾರ್ಚ್ 19 ರ ಸಂಚಿಕೆಯಲ್ಲಿ ಬೆಂಗಳೂರಿನ ಬೀದಿನಾಯಿಗಳ ಮಾರಣಹೋಮದ ವಿರುದ್ಧ ಹಿರಣ್ಮಯಿ ಕಾರ್ಲೇಕರ್ ಬರೆದ ವರದಿಯ ಕೊನೆಯ ಸಾಲುಗಳು.

ಆರೋಗ್ಯ ಮಂತ್ರಿ ಅಶೋಕ್ 'ಸರ್ಪಯಾಗ' ಮಾಡಿದ ಜನಮೇಜಯನ ಗತ್ತಿನಲ್ಲಿ ಪೌರುಷ ಮೆರೆಯುತ್ತಿದ್ದರೆ, ಮತ್ತೊಂದೆಡ ಶಿವಮೊಗ್ಗ, ಮೈಸೂರು ಮತ್ತು ಬೆಂಗಳೂರಿನಲ್ಲಿ ನೂರಾರು ನಾಯಿಗಳನ್ನು ಹಿಡಿದು ನಿಷ್ಕರುಣೆಯಿಂದ ಕೊಂದಿದ್ದು ಅವುಗಳ ಹೆಣಗಳ ರಾಶಿರಾಶಿ ಚಿತ್ರಗಳು ದೇಶ-ವಿದೇಶಗಳಲ್ಲೂ ಸುದ್ದಿಯಾಗುತ್ತಿವೆ. ನಾಯಿಗಳ ಈ ಮಾರಣ ಹೋಮವನ್ನು ಖಂಡಿಸಿ ದೇಶದ ರಾಜಧಾನಿ ನವದೆಹಲಿಯಲ್ಲಿ ದಯಾವಂತರು ಬೀದಿಗಿಳಿದು ಪ್ರತಿಭಟಿಸಿದ್ದಾರೆ. ದೂರದ ಸಿಂಗಾಪೂರ್‌ನಲ್ಲೂ ಪ್ರತಿಭಟನೆ ವ್ಯಕ್ತವಾಗಿದೆ. ಇದು ಎನ್‌ಜಿಓಗಳು ನಡೆಸುವ ಅಪಪ್ರಚಾರ ಎಂದು ಕನ್ನಡಪ್ರಭ ಅದೆಷ್ಟೇ ಬುರುಡೆ ರಿಪೋರ್ಟುಗಳನ್ನು ಬಿಟ್ಟು, ಬರೆಸಿದರೂ, ಹತ್ಯಾಕಾಂಡವನ್ನು ಸಮರ್ಥಿಸುವ ವಿಜಯ ಕರ್ನಾಟಕದ ಸಂಪಾದಕ ವಿಶ್ವೇಶ್ವರ ಭಟ್ಟರ ವಿಷಪೂರಿತ ಸಂಪಾದಕೀಯಗಳೂ once again ಬೆಂಗಳೂರು 'ಕೊಲೆಗಡುಕರ ಸಿಟಿ' ಎಂಬ ದಯಾಮಯಿಗಳ ಆರೋಪವನ್ನೇ ಮತ್ತೆ ಮತ್ತೆ ಸಮರ್ಥಿಸುತ್ತಿಲ್ಲವೆ?

ಆಯಿತು; ಕನ್ನಡ ಪ್ರಭದ ಪ್ರಕಾರ ಇದು ಎನ್‌ಜಿಓಗಳು ನಡೆಸುತ್ತಿರುವ ಅಪಪ್ರಚಾರ ಎಂದೇ ಇಟ್ಟುಕೊಳ್ಳೋಣ. ಹಾಗಾದರೆ ಇಂಥಿಂಥಲ್ಲಿ ಇಷ್ಟಿಷ್ಟೇ ನಾಯಿಗಳನ್ನು ಹಿಡಿದರು, ಕೊಂದರು ಎಂದು ಆತ ತನ್ನದೇ ಪತ್ರಿಕೆಯಲ್ಲಿ ಫೋಟೋ ಸಹಿತ ಪ್ರಕಟಿಸಿದ ವರದಿಗಳೆಲ್ಲ ಶುದ್ಧ ಸುಳ್ಳೆ?

ಇಂಥ ಕಟುಕ ಮನಸ್ಸುಗಳೆಲ್ಲ ಬಹುಶಃ ಒಂದು ಸಂಗತಿಯನ್ನು ಈತನಕ ಗಮನಿಸಿರಲಿಕ್ಕಿಲ್ಲ, ಜನವರಿ 10ರಂದು ಚಂದ್ರಾಲೇಔಟಿನಲ್ಲಿ ಶ್ರೀದೇವಿ ಎಂಬ ಬಾಲಕಿ ನಾಯಿಗಳಿಗೆ ಬಲಿಯಾದಾಗಲೂ ಅದೇ ಬೀದಿಯ ಜನರ್‍ಯಾರೂ ಇದು ತಮ್ಮದೇ ಬೀದಿಯ ನಾಯಿಗಳು ಎಸಗಿದ ಕೃತ್ಯ ಎನ್ನಲಿಲ್ಲ, ಪ್ರತಿಯೊಬ್ಬರೂ 'ಎಲ್ಲಿಂದಲೋ ಬಂದ ನಾಯಿಗಳ ಹಿಂಡೊಂದು ಮಗುವನ್ನು ಎಳೆದಾಡಿ ಕಣ್ಮರೆಯಾದವು' ಎಂದೇ ದೂರದ ನಿರ್ಜನ ಖಾಲಿ ಸೈಟುಗಳತ್ತ ಕೈ ತೋರಿಸುತ್ತಿದ್ದರು. ಆನಂತರ ಮಾರ್ಚ್ ಒಂದರಂದು ಬಿಮೆಲ್ ಲೇಔಟಿನಲ್ಲಿ ಮಂಜುನಾಥ ಎಂಬ ಮಗುವನ್ನು ಕಚ್ಚಿ ಕೊಂದದ್ದು ಕೂಡ ಬೀದಿನಾಯಿಗಳಾಗಿರದೇ ವಿಶಾಲ ಕಾಂಪೌಂಡಿನ ನಿರ್ಜನ ಪ್ರದೇಶದ ನಾಯಿ ಹಿಂಡೊಂದರ ಕೃತ್ಯವಾಗಿತ್ತು.



ನಾಯಿಹಂತಕ ಅಶೋಕ್

ಹೇಳಿಕೇಳಿ ಚಂದ್ರಾಲೇಔಟ್ ಬೆಂಗಳೂರು ನಗರ ಮಧ್ಯದ ಪ್ರದೇಶವಾಗಿರದೇ ತೀರ ಇತ್ತೀಚೆಗಷ್ಟೇ ಅಭಿವೃದ್ಧಿ ಹೊಂದುತ್ತಿರುವ ಹೊರವಲಯದ ಏರಿಯಾ. ಅಲ್ಲಿ ಸಿಕ್ಕಾಪಟ್ಟೆ ಖಾಲಿ ಪ್ರದೇಶಗಳೂ ಪೊದೆಗಳಿಂದಾವೃತ ಖಾಲಿ ಜಾಗಗಳೇ ಹೆಚ್ಚು, ಹಾಗೇ ಬಿಮೆಲ್ ಲೇಔಟ್ ಕೂಡ ಬೆಂಗಳೂರು ಕೇಂದ್ರದಿಂದ ದೂರದ ಪ್ರದೇಶವೆ. ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಡದ ಎಕರೆಗಟ್ಟಲೇ ಕಾಂಪೌಂಡಿನಲ್ಲಿ ವಿಪರೀತ ಕಳೆ ಬೆಳೆದು ನಿಂತಿದೆ. ಮಗು ಮಂಜುನಾಥನನ್ನು ಕೊಂದದ್ದು ಅಲ್ಲಿಂದಲೇ ಬಂದ ನಾಯಿಗಳೆಂಬುದನ್ನು ಅಲ್ಲಿನ ಪ್ರತಿಯೊಬ್ಬರೂ ಬೊಟ್ಟು ಮಾಡಿ ಹೇಳುತ್ತಾರೆ.

ಅಲ್ಲಿಗೆ ಇದು ನಗರದ ಹೊರವಲಯದ ನಿರ್ಜನ ಪ್ರದೇಶದ 'ಜಂಗ್ಲೀ' ನಾಯಿಗಳ ಕೃತ್ಯ ಎಂಬುದು ಎಂಥವರಿಗೂ ಅರ್ಥವಾಗಲೇಬೇಕು. ಜನನಿಬಿಡ ಪ್ರದೇಶಗಳ ನಿರುಪದ್ರವಿ ಪಾಪದ ನಾಯಿಗಳಿಗೂ ನಿರ್ಜನ ಪ್ರದೇಶಗಳ 'ವ್ಯಗ್ರ' ನಾಯಿಗಳಿಗೂ ಇರುವ ವ್ಯತ್ಯಾಸವನ್ನೂ, ಯಾವುದು ಕೊಲ್ಲಲು ಯೋಗ್ಯ ಯಾವುದು ಪ್ರೀತಿ ಪಾತ್ರ ಎಂಬುದನ್ನೂ ನಿರ್ಧರಿಸುವವರು ಯಾರು? ಇದನ್ನು ತಿಳಿಯಲು ಪಾಲಿಕೆಯ ಬಳಿ ಯಾವ ನೈಪುಣ್ಯ ಅಥವಾ ಮಾನದಂಡವಿದೆ?

ಹೋಗಲಿ ಇಂಥ ಜಂಗ್ಲೀ ಅಥವಾ ವ್ಯಗ್ರ ನಾಯಿಗಳನ್ನು ಗುರುತಿಸಿ ಹಿಡಿಯುವ ತಾಕತ್ತಾದರೂ ಸರ್ಕಾರಕ್ಕಿದೆಯಾ? ಇದ್ಯಾವುದನ್ನೂ ವಿವೇಚಿಸದ ಆರೋಗ್ಯ ಮಂತ್ರಿ ಅಶೋಕ್ ಏಕಾಏಕಿ ಕೊಟ್ಟ ಹೇಳಿಕೆಯೆಂದರೆ; ಬೀದಿನಾಯಿಗಳನ್ನು ಹಿಡಿದು ನಿರ್ದಾಕ್ಷಿಣ್ಯವಾಗಿ ಕೊಂದು ಹಾಕಿ!

ಅದೂ ದಿನವೊಂದಕ್ಕೆ ಕನಿಷ್ಠ ಸಾವಿರ ನಾಯಿಗಳನ್ನು ಹಿಡಿದು ಕೊಲ್ಲಲೇಬೇಕೆಂಬ ಕಟ್ಟಾಜ್ಞೆ ಬೇರೆ. ಇದಕ್ಕೆ ಪಕ್ಕ ವಾದ್ಯದಂತೆ ಪತ್ರಿಕೆಗಳು ಇದಕ್ಕೆಲ್ಲ ಬೀದಿನಾಯಿಗಳೇ ಹೊಣೆ ಎಂಬಂತೆ ಅವಿವೇಕದ ವರದಿ ಪ್ರಕಟಿಸಲಾರಂಭಿಸಿದವು. ಇದರಿಂದ ಹುಮ್ಮಸ್ಸಿಗೆ ಬಿದ್ದ ಪಾಲಿಕೆ ಕಮೀಷನರ್ ಜೈರಾಜ್ ಏಕಾಏಕಿ ಎನ್‌ಜಿಓಗಳ ಪರವಾನಗಿ ರದ್ದು ಮಾಡಿದ್ದೇ ತಾವೇ ಖುದ್ದಾಗಿ ನಾಯಿ ಬೇಟೆಗೆ ನಿಂತುಬಿಟ್ಟರು.

ಸರಿಯಾಗಿ ಮೂವತ್ತು ನಾಯಿ ಹಿಡಿಯುವ ವಾಹನಗಳಲ್ಲಿ ಇನ್ನೂರಕ್ಕೂ ಹೆಚ್ಚು ಕಬ್ಬಿಣದ ಕುಣಿಕೆಗಳನ್ನು ಹಿಡಿದು ನಿಂತ ಪೌರ ಕಾರ್ಮಿಕರ್‍ಯಾರಿಗೂ ನಾಯಿ ಹಿಡಿಯುವ ತರಬೇತಿಯಿರಲಿಲ್ಲ, ಪಾಲಿಕೆಯ ಪ್ರತಿ ವಾರ್ಡಿನ ಒಬ್ಬೊಬ್ಬ ವೈದ್ಯಾಧಿಕಾರಿಯೂ ದಿನಕ್ಕೆ



...ಭಟನೆಯಲ್ಲಿ ತಲಕಾಡು ಚಿಕ್ಕರಂಗೇಗೌಡ ಮತ್ತು ...ಕ್ಕಲಿಗ ಜಗದ್ಗುರು ಸಿದ್ಧರಾಮಚೈತನ್ಯಸ್ವಾಮೀಜಿ

ಎನ್‌ಜಿಓಗಳು ಮೂಲೆಗೆ ಜನ ಬೀದಿಗೆ

ಮೊದಮೊದಲು ಸರ್ಕಾರದ ನಾಯಿ ದಮನಕ್ಕೆ ಪತ್ರಿಕೆಗಳಿಂದ ವಿಪರೀತ ಪ್ರೋತ್ಸಾಹ ಸಿಕ್ಕಿದ್ದೇನೋ ನಿಜ. ಆದರೆ ಅದೇ ಉಲ್ಟಾ ಹೊಡೆಯಿತು. ಮೋರಿ ಸೇರಿದ ನಾಯಿಯನ್ನು ಬೆಂಕಿ ಹಚ್ಚಿ ಕೊಂದಿದ್ದು, ನಾಯಿಗಳನ್ನು ನೇಣು ಹಾಕಿ ಎಳೆಯುತ್ತಿರುವುದು, ಕೊಂದ ನಾಯಿಗಳ ಹೆಣಗಳ ರಾಶಿಯ ಫೋಟೋಗಳನ್ನು ನೋಡಿದ ಜನ ಎನ್‌ಜಿಓಗಳನ್ನೇ ಬದಿಗೊತ್ತಿ ಬೀದಿಗಿಳಿದರು.

ಈ ಬಗ್ಗೆ ಮರುಗಿದ ಅನೇಕ ದಯಾವಂತರು 'ಬೀದಿನಾಯಿಗಳ ಹಿತರಕ್ಷಣಾ ವೇದಿಕೆ' ಎಂಬ ಸಂಘಟನೆಯನ್ನೇ ಕಟ್ಟಿಕೊಂಡರು. ಪತ್ರಿಕಾ ಕಛೇರಿಗಳ ಮುಂದೆ ಪ್ರತಿಭಟನೆಗಳಾದವು. ರಾಜ್ಯಪಾಲರನ್ನು ಬೆಂಬಲಿಸಿ ...ಭವನದ ಮುಂದೆ 'ಪ್ರಾಣಿಭಿಕ್ಷೆ' ಕಾರ್ಯಕ್ರಮವೇ ನಡೆಯಿತು. ಈ ಹೊತ್ತಿಗಾಗಲೇ ಮೂಲೆ ಸೇರಿದ್ದ ಎನ್‌ಜಿಓಗಳು ...ೀ ತೋಚದೆ ಭೂಗತರಾಗಿದ್ದು ಒಂದೆಡೆಯಾದರೆ ಮತ್ತೊಂದೆಡೆ 'ದಯವೇ ಧರ್ಮದ ಮೂಲವಯ್ಯ' ಎಂಬ ...ೇಷಣೆ ಹೊತ್ತು ಕನ್ನಡ ಪರ ಸಂಘಟನೆಗಳು ಬೀದಿಗಿಳಿದವು. ಕರ್ನಾಟಕ ಸೈನ್ಯದ ತಲಕಾಡು ಚಿಕ್ಕರಂಗೇಗೌಡ, ಕನ್ನಡ ...ೆಯ ಕೆ.ಆರ್. ಕುಮಾರ್, ಕಾವೇರಿ ಕನ್ನಡಿಗರ ವೇದಿಕೆಯ ಮಧುಸೂಧನ, ಸಂಗೊಳ್ಳಿ ರಾಯಣ್ಣ ಕನ್ನಡಿಗರ ...ದಿಕೆಯ ಕೆ. ರವಿ ಮುಂತಾದವರೆಲ್ಲ ಸೇರಿ ಹತ್ಯಾಕಾಂಡದ ವಿರುದ್ಧ 'ಶಾಂತಿ ಯಾತ್ರೆ' ಹಮ್ಮಿಕೊಂಡರೆ, ಒಕ್ಕಲಿಗ ...ದ್ಗುರು ಸಿದ್ಧರಾಮ ಚೈತನ್ಯ ಸ್ವಾಮೀಜಿಯವರೇ ಪ್ರತಿಭಟನೆಯ ನೇತೃತ್ವ ವಹಿಸಿಕೊಂಡಿದ್ದರು.

...ಇವರ್‍ಯಾರೂ ಎನ್‌ಜಿಓಗಳಲ್ಲ, ಆದಿಚುಂಚನಗಿರಿ ಕಾಲಭೈರವನ ಭಕ್ತರು. ಒಕ್ಕಲಿಗರ ಕುಲದೈವ ಆದಿಚುಂಚನಗಿರಿ ...ಭೈರವನೇ ನಾಯಿರೂಪಿ ದತ್ತಾತ್ರೇಯನ ಪರಮಾಪ್ತ ಜೀವಿಯಾಗಿದ್ದ ನಾಯಿಯನ್ನು ನಗರವಾಸಿ ಸ್ವಾರ್ಥಿಗಳು ...ವಿಗೆ ತಳ್ಳಿದ್ದರಿಂದಲೇ ಅವು ಮನುಷ್ಯನ ವಿರುದ್ಧ ತಿರುಗಿಬಿದ್ದಿವೆ. ಮನುಷ್ಯ ಈಗಲಾದರೂ ಸ್ವಾರ್ಥ ಬಿಟ್ಟು ತನ್ನನ್ನೇ ...ಲಂಬಿಸಿದ ಆ ಜೀವಿಯನ್ನು ಪ್ರೀತಿಸಬೇಕೆಂಬುದು ಇಂಥ ಸಂಘಟನೆಗಳ ವಾದ.

... ನಾಯಿಗಳ ಆಕ್ರಂಧನ ದೇವರನ್ನು ಮುಟ್ಟಿತೋ ಇಲ್ಲವೋ, ಕನ್ನಡ ಪರ ಸಂಘಟನೆಗಳನ್ನಂತೂ ಮುಟ್ಟಿವೆ. ಮಾಡಿದ ...ಪಕ್ಕೆ ಪ್ರಾಯಶ್ಚಿತವೂ ಸನ್ನಿಹಿತವಾಗುತ್ತಿದೆ.



...ಕಾಂಡದ ವಿರುದ್ಧ ದಯಾವಂತರ ಪ್ರತಿಭಟನೆ

'ಒಂದ್ನಿಮಿಷ ಇರಿ ಕೊನೆಗೊಮ್ಮೆ ಮಾತಾಡಿಸಿಬಿಡ್ತೀನಿ' ಎಂದಳು. ಚಂಡು ಎಂಬ ಆ ನಾಯಿಗೊಂದು ಮುತ್ತು ಕೊಟ್ಟವಳೇ ಕಣ್ಣೀರಿಡುತ್ತ ಹೇಳಿದಳು "ಬೇಡ ಕಣೋ; ಇಂಥಾ ಕೆಟ್ಟ ಪ್ರಪಂಚದಲ್ಲಿ ನೀನಿರ ಬೇಡ. ಮುಂದಿನ ಜನ್ಮ ಅಂತಿದ್ದರೆ ನನ್ನ ಮಗನಾಗಿ ಹುಟ್ಟು!"

ಮಂಜುಳಾ ನಿಂತು ಕಣ್ಣೀರಿಡುತ್ತಿದ್ದರೆ ನಾಯಿ ಚೀರಾಡುತ್ತಿದ್ದರೆ, ಪಾಲಿಕೆಯವರು ಕುಣಿಕೆ ಹಾಕಿ ಎಳೆದೊಯ್ದೇ ಬಿಟ್ಟರು!

ಇದು ಪಾಲಿಕೆಯ ನಾಯಿಬೇಟೆಯ ಒಂದು ಸ್ಯಾಂಪಲ್ ಮಾತ್ರ.

ಪ್ರಾಣ ಉಳಿಸಿಕೊಳ್ಳಲು ಮೋರಿ ಹೊಕ್ಕಿದ್ದ ನಾಯಿಯೊಂದನ್ನು ಹೊರಕ್ಕೊಡಿಸಲೆಂದು ಪಾಲಿಕೆ ಎಂಥಾ ಪೈಶಾಚಿಕತೆಗಿಳಿಯಿತೆಂದರೆ, ಅದು ಹೊರಬರಲು ಮತ್ತೊಂದು ದಾರಿಯಿಲ್ಲ ಎಂಬುದನ್ನೂ ವಿವೇಚಿಸದೇ ಮೋರಿಗೆ ಬೆಂಕಿ ಹಚ್ಚಲಾಯ್ತು. ನಾಯಿ ಹೊರಬರಲಾಗದೇ ಬೆಂಕಿಗೆ ಸಿಲುಕಿ ಸತ್ತೇ ಹೋಗಿತ್ತು. ಕೊನೆಗೂ ಪಾಲಿಕೆಗೆ ಸಿಕ್ಕಿದ್ದು ಅರೆಬೆಂದ ನಾಯಿಯ ಹೆಣ ಮಾತ್ರ!

ಇಂಥ ಸುದ್ದಿಯೊಂದನ್ನು ಪ್ರಜಾವಾಣಿ ಫೋಟೋ ಸಹಿತ ಪ್ರಕಟಿಸಿದ್ದನ್ನು ಓದಿದ ಅದೆಷ್ಟು ಮಂದಿ ಕಣ್ಣೀರಿಟ್ಟಿಲ್ಲ?

...ಷ್ಟು ನೂರು ನಾಯಿಗಳನ್ನು ಹಿಡಿಯಲೇಬೇಕೆಂಬ ಕಟ್ಟಾಜ್ಞೆ ...ಿ. ಇದರ ಪರಿಣಾಮ ಅದೆಷ್ಟು ಭಯಾನಕವಾಗಿತ್ತೆಂದರೆ ...ಟೆಗೆ ನಿಂತ ಪಾಲಿಕೆಯ ಸಿಬ್ಬಂದಿ ಜನನಿಬಿಡ ...ೇಶಗಳಲ್ಲಿ ತಮ್ಮ ಪಾಡಿಗೆ ತಾವು ಮಲಗಿದ್ದ ನಿರುಪದ್ರವಿ ...ತ್ತು ಪಾಪದ ನಾಯಿಗಳನ್ನು ಎತ್ತಿಎತ್ತಿ ಬೋನಿಗೆ ...ಕಿಕೊಂಡರು.

... ನಿರ್ಜನ ಪ್ರದೇಶದ 'ಜಂಗ್ಲೀ' ನಾಯಿಗಳು ಮನುಷ್ಯನನ್ನು ...ದ್ದೇ ಎದ್ದೂಬಿದ್ದು ಓಡುತ್ತಿದ್ದವು. ಆದರಲ್ಲೂ ಪಾಲಿಕೆಯ ...ು ಹಿಡಿಯುವ ವಾಹನ ಕಂಡಿದ್ದೇ ಮೋರಿ ಹೊಕ್ಕಿ ...ತ್ತಿದ್ದವು. ಅವುಗಳನ್ನು ಹಿಡಿಯಲಾಗದ ವೈಫಲ್ಯವನ್ನು ...ಟ್ಟಿಕೊಳ್ಳಬೇಕಲ್ಲ ಅದಕ್ಕೆ ಪಾಲಿಕೆ ಸಿಬ್ಬಂದಿ ಯಾವ ...ಕ್ಕಿಳಿದರೆಂಬುದಕ್ಕೆ ಈ ಪ್ರಕರಣವೊಂದೇ ಸಾಕ್ಷಿ.

...ಷ್ಟು ಕರೆದಾಕ್ಷಣವೇ ಬಾಲ ...ಡಿಸಿಕೊಂಡು ಓಡಿಬರುತ್ತಿದ್ದ ...ುಗಳನ್ನು ಹಿಡಿ ಹಿಡಿದು ...ನಿಗೆ ತುರುಕುತ್ತಿದ್ದ ಬನ್ನಿಪೇಟೆಯ ...ಧಿಕಾರಿ ರಾಮ ಚಂದ್ರರ ಪಡೆ ...ಳೂರುಪಾಳ್ಯದ ಭುವನೇಶ್ವರಿ ...ದ ಚಲುವಪ್ಪ ಗಾರ್ಡನ್ನಿನಲ್ಲಿ ... ಅತಿರೇಕಕ್ಕೆ ಹೋಯಿತೆಂದರೆ ...ಜುಳಾ ಎಂಬಾಕೆ ತನ್ನ ...ಮಲ್ಲಿ ಸಾಕಿಕೊಂಡಿದ್ದ ಕಣ್ಣು ...ದ ಓಡಲಾಗದ ನಾಯಿ ...ದನ್ನು ಅನಾಮತ್ತಾಗಿ ಎತ್ತಿ ...ಲ್ಲಿದ್ದ ಬೋನಿಗೆ ತುರುಕಿ ಬಿಟ್ಟರು. ಇದರಿಂದ ...ಕ್ಕೀಡಾದ ಮಂಜುಳಾ ತನ್ನ 'ಚಂಡು' ಎಂಬ ...ನ್ನಡ ಮತ್ತೊಂದು ನಾಯಿಯನ್ನು ತನ್ನ ಮನೆಯೊಳಕ್ಕೆ ...ಹೊರಗಿನಿಂದ ಬಾಗಿಲು ಹಾಕಿ ಬಾಗಿಲಿಗೆ ಅಡ್ಡ ...ಸರಿ ಐವತ್ತು ಮಂದಿಯಿದ್ದ ಪಾಲಿಕೆಯ ತಂಡ ...ನ್ನು ತಳ್ಳಿ ಮನೆಯೊಳಕ್ಕೆ ನುಗ್ಗಿ, ಕಟ್ಟಿ ಹಾಕಿದ್ದ ...ಯನ್ನೇ ಹೊರಕ್ಕೆಳೆದು ತಂದಿತ್ತು. ಅನ್ನ ಕೊಟ್ಟ ...ಾಗಿ ಅದ್ಯಾವತ್ತೋ ಬೊಗಳಿದ ತಪ್ಪಿಗಾಗಿ ತನಗಿಂತ ...ುಂತಲ್ಲ ಎಂದು ಅಳುತ್ತಿದ್ದ ಆ ನಾಯಿ ಕನಿಷ್ಠ ...ಯಾದರೂ ತನ್ನ ನೆರವಿಗೆ ಬರಬಹುದಾ ಎಂದು ... ಮುಖಮುಖ ನೋಡುತ್ತಿತ್ತು, ವಿಕಾರವಾಗಿ ಅದು ...ಡುತ್ತಿದ್ದರೆ ಸುತ್ತ ನೆರೆದವರು ಕೇಕೆ ಹಾಕಿ ನಗುತ್ತಿದ್ದರು. ...ನ್ನೇ ಹರಿಹರಿಯಾಗಿ ಬೇಡಿಕೊಂಡರೂ ಪಾಲಿಕೆಯ ... ಮನಸ್ಸು ಕರಗಲೇ ಇಲ್ಲ. ಇನ್ನೇನು ಕುಣಿಕೆ ...ದನ್ನು ಎಳೆದೊಯ್ಯಬೇಕೆನ್ನುವಷ್ಟರಲ್ಲಿ ಮಂಜುಳಾ



ಪಾಲಿಕೆಯವರು ದೌರ್ಜನ್ಯದಿಂದ ಎಳೆದೊಯ್ದ ಸಾಕುನಾಯಿಯ ಫೋಟೋ ತೋರಿಸುತ್ತಿರುವುದು

ಮಕ್ಕಳನ್ನು ಕಚ್ಚಿ ಕೊಂದ ಹೊರವಲಯದ ನಿರ್ಜನ ಪ್ರದೇಶದ 'ಜಂಗ್ಲಿ' ನಾಯಿಗಳೆಲ್ಲಿ? ಬೆಂಕಿಗೆ ಬಲಿಯಾದ ಪಾಪದ ನಾಯಿಯೆಲ್ಲಿ? ಯಾವ ತಪ್ಪಿಗೆಂದು ಈ ಶಿಕ್ಷೆ? ಮಕ್ಕಳನ್ನು ಕಚ್ಚಿಕೊಂದ ನಾಯಿಗಳಿಗೂ, ಅವುಗಳನ್ನು ಹಿಡಿಯಲಾಗದೇ ಪಾಪದ ನಾಯಿಗಳನ್ನು ಕೊಂದ ಆರೋಗ್ಯ ಮಂತ್ರಿಯ ಹಂತಕ ಪಡೆಗೂ ಏನೂ ವ್ಯತ್ಯಾಸ ಬಂತು?

ಹೋಗಲಿ ಶಿವಮೊಗ್ಗ, ಮೈಸೂರಿನ ನಾಯಿಗಳು ಮಾಡಿದ ತಪ್ಪಾದರೂ ಏನು? ಪ್ರಾಣಿ ಹಿಂಸೆ ಪ್ರತಿಬಂಧಕ ಕಾಯ್ದೆಯಿದ್ದಾಗಲೂ ಯಾವುದೋ ನಾಯಿಗಳು ಮಾಡಿದ ತಪ್ಪಿಗೆ ನೂರಾರು ಪಾಪದ ನಾಯಿಗಳನ್ನು ಅನ್ಯಾಯವಾಗಿ ಕೊಂದರಲ್ಲ; ಅದನ್ನು ಇಡೀ ಸಮಾಜವೇ ನಿಂತು ಸಮರ್ಥಿಸುತ್ತಿದೆಯೆಂದರೆ, ಮಾಧ್ಯಮಗಳೇ ನಿಂತು ಅದಕ್ಕೆ ಕುಮ್ಮಕ್ಕು ಕೊಡುತ್ತಿವೆಯೆಂದರೆ ಇದು ಕೊಲೆಗಡುಕ ಬೆಂಗಳೂರಲ್ಲದೇ ಮತ್ತೇನು?

ಡಂಬಾಯ ಸಾಹಿತಿಗಳ ಬಂಡಾಯ ದನಿ ಮುಳಿಗಿದ

ಮುಖ್ಯಮಂತ್ರಿಯಾದವನು ಪ್ರತಿಯೊಂದು ಖಾತೆಯ ಮಾಹಿತಿ ಹಾಗು ಅದನ್ನು ನಿರ್ವಹಿಸುತ್ತಿರುವವನ ಬಗ್ಗೆ ನಿಗಾ ಇಟ್ಟುಕೊಳ್ಳುವುದು ಒಳ್ಳೆಯದೆಂದು ನಮ್ಮ ಇಂಧನ ಮಂತ್ರಿಗಳು ಭಾವಿಸಿದ್ದರಂತಲ್ಲಾ, ಆದರೆ ದೇವೇ ಗೌಡರು ಮುಖ್ಯಮಂತ್ರಿಯಾಗಿದ್ದಾಗ ಸಚಿವರು ಮುಂಜಾ ನೆಯೇ ಎದ್ದು ಬಂದು ನೋಡಿ ಹೋಗಲು ಮೌಖಿಕ ಆದೇಶ ನೀಡಿದ್ದರೂ ಕೂಡ, ಗೋವಿಂದೇ ಗೌಡರೆಂಬ ಗೋವು ಯಾವುದೇ ಕಾರಣಕ್ಕೂ ಮುಖ್ಯಮಂತ್ರಿಯನ್ನು ನೋಡಲು ಹೋಗದೆ ಕೈ ಸ್ವಚ್ಛ ಇಟ್ಟು ಕೊಂಡು ಕೆಲಸ ಮಾಡಿ ಮತ್ತೆ ರಾಜ ಕಾರಣಕ್ಕೆ ಮುಖ ಇಡದಂತೆ ಮನೆ ಸೇರಿಕೊಂಡರಂತಲ್ಲಾ, ಅಂತಹ ನಿರ್ಧಾರಕ್ಕೆ ಪರೋಕ್ಷವಾಗಿ ಕಾರಣರಾದ ದೇವೇಗೌಡರ ಮುದ್ದಿನ ಮಗನಾದ ರೇವಣ್ಣ ಎಲ್ಲಾ ಸಚಿವರ ಖಾತೆಯೊಳಗೂ ಕೈಯಾಡಿಸಿ ಸದರಿ ಸಚಿವರೆಲ್ಲಾ ಈ ಸರ್ಕಾರದ ಸರ್ಕಸ್ ಮುಗಿದ ನಂತರ ನೆಮ್ಮದಿಯಾಗಿ ಮನೆ ಸೇರಿಕೊಳ್ಳಲಿದ್ದಾರಂತಲ್ಲಾ, ಥೂತ್ತೇರಿ!



* * * * * *

ಈ ರೇವಣ್ಣನೆಂಬ ಮಂದಮತಿ ಪ್ರತಿನಿಧಿಸುತ್ತಿರುವ ಹಾಸನ ಜಿಲ್ಲೆಗೆ ಈತನ ಪರವಾನಗಿ ಇಲ್ಲದೆ ಇರುವೆಯೂ ನುಸುಳಿ ಬರುವಂತಿಲ್ಲ, ಆದರೆ ಇದೇ ನೀತಿ ಬೇರೆ ಸಚಿವರಿಗಿಲ್ಲವಂತಲ್ಲಾ, ಬಹುತೇಕ ಜೆಡಿಎಸ್‌ನ ಎಲ್ಲಾ ಸಚಿವರ ಖಾತೆಯೊಳಗೆ ಕೈಯಾಡಿಸಿ, ವರ್ಗಾ, ಬಡ್ತಿ, ಭಕ್ಷೀಸು ಇತ್ಯಾದಿ ದಂಧೆಯನ್ನು ನಡೆಸುತ್ತಿರುವ ರೇವಣ್ಣನನ್ನು ಈ ಬಗ್ಗೆ ಪ್ರಶ್ನೆ ಮಾಡಿದರೆ, "ನಾನು ಮುಂದಿನ ಮುಖ್ಯಮಂತ್ರಿಯಾಗುವವನು, ಈಗಿನಿಂದಲೇ ಮಂತ್ರಿಗಳನ್ನು ನಿಯಂತ್ರಿಸುವುದನ್ನು ಕಲಿಯಬೇಕಿದೆ. ಅದಕ್ಕಾಗಿ ಈ ಕೆಲಸ" ಎಂದನಂತಲ್ಲಾ, ಥೂತ್ತೇರಿ!



* * * * * *

ರೇವಣ್ಣನ ರಗಳೆ ಬಗ್ಗೆ ಒಂದೆರಡು ಅಬ್ಕೇಪಾರಿ ಸಚಿವರು ಧೃತರಾಷ್ಟ್ರನ ಮುಂದೆ ಹೋಗಿ ದೂರು ಹೇಳಲಾಗಿ, ಬಂದು ದೂರೇಳುತ್ತಿರುವವರು ಯಾರಿರ ಬಹುದೆಂದು ಅವರ ದನಿಯಿಂದಲೇ ಗುರುತಿಸಿ, ಕಣ್ಣುಬಿಡದ ಧೃತರಾಷ್ಟ್ರ ಸಾವಧಾನದ ಧ್ವನಿಯಿಂದ "ನೋಡಿ ಹತ್ತೊಂಬತ್ತು ನೂರ ಎಂಬತ್ತ ಮೂರನೇ ಇಸವಿಯಲ್ಲಿ ನಾವು ಕಾಂಗ್ರೆಸ್ ಸರ್ಕಾರವನ್ನು ಚುನಾವಣೆಯಲ್ಲಿ ಸೋಲಿಸಿ ಜನತಾಪಕ್ಷ ಅಧಿಕಾರಕ್ಕೆ ಬಂದಾಗ ಆಗ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿ ನೇಮಕಗೊಂಡಾಗ ನಾವು ತ್ಯಾಗ ಮಾಡತಕ್ಕಂತಹ ಸಂದರ್ಭವೊದಗಿ ಬಂತು. ಆಗಿನ ಸರ್ಕಾರದ ಮುಖ್ಯಮಂತ್ರಿಗಳು ಅಬಕಾರಿ ಇಲಾಖೆಯಿಂದ ಹಿಡಿದು ನನ್ನ ಖಾತೆವರೆಗೂ ತಮ್ಮ ಪ್ರಭಾವವನ್ನು ಬೀರಿ ತಮ್ಮವರ ಕೆಲಸಗಳನ್ನು ಮಾಡಿಸುತಿದ್ರು. ಆದರೂ ಕೂಡ ನಾವು ಸರ್ಕಾರದ ಮಾನಮರ್ಯಾದೆ ಕಾಪಾಡುವ ಸಲುವಾಗಿ ಯಾವುದೇ ಭಿನ್ನಾಭಿಪ್ರಾಯಕ್ಕೆ ಹೋಗದೆ, ನಮ್ಮ ಕರ್ತವ್ಯವನ್ನು ನಿರ್ವಹಿಸಿದ್ದೇವೆ. ಆ ಸಮಯದಲ್ಲಿ ಪಾರ್ಟಿಯನ್ನು ಪುನಃ ಸಂಘಟಿಸಬೇಕು, ಆದಕ್ಕಾಗಿ ನೀವು ರಾಜೀನಾಮೆ ಕೊಟ್ಟು ಪಾರ್ಟಿ ಕೆಲಸ ಮಾಡಿ ಎಂದಾಗ, ನಾವು ರಾಜೀನಾಮೆ ಕೊಟ್ಟು ಪಾರ್ಟಿ ಕೆಲಸ ಮಾಡಿದೆವು" ಎಂದು ಧೃತರಾಷ್ಟ್ರ ಹೇಳಿದರಂತಲ್ಲ, ಅದನ್ನು ಕೇಳಿ ಮಂತ್ರಿಗಳು ಮಾಯವಾದರಲ್ಲಾ ಥೂತ್ತೇರಿ!!

* * * * * *

ಬಂಡಾಯದ ಸಾಹಿತಿಗಳೆಲ್ಲಾ ಸರ್ಕಾರದ ಡಂಬಾಯದ ಕುರ್ಚಿ ಹುಡುಕುತ್ತ ಹೋದ ಫಲವಾಗಿ, ಇಂದು ಬಂಡಾಯವೆಂದರೆ ಹಲ್ಲು ಕಿಸಿದು, ಕೈ ಹೊಸೆದು, ಜೇಬು ತೋರುವ ಕ್ರಿಯೆಯಾಗಿದೆಯೆಂದು, ಕುವೆಂಪು ಯೂನಿವರ್ಸಿಟಿಯ ವಾಮನಮೂರ್ತಿ ಶ್ರೀಕಂಠ ಕೂಡಿಗೆ ಕೂಗಿದ್ದಾರಂತಲ್ಲಾ, ಸದರಿ ವಾಮನಮೂರ್ತಿಯ ಕೂಗು ಕರ್ನಾಟಕದ ಸಚಿವ ಮಂಡಲವನ್ನು ತಲುಪಿ ಬಂಡಾಯದ ನಾಯಕರ ಹಿಂದೆ ಹೋಗಿ ಘೋಷಣೆ ಕೂಗಿದ ಹೈದರೆಲ್ಲ, "ಈ ಕೂಡಿಗೆ ಹೇಳುವುದು ತಪ್ಪು, ಬಂಡಾಯ ಸಂಘಟನೆ ಮನೆಯಲ್ಲಿ ಕಂಬಗಳು, ತೀರು, ರಿಫೀಸು, ಜಂತಿಯಾಗಿದ್ದವರೆಲ್ಲಾ ಅಳುವವರ ಅರಮನೆ ಉಳಿಗದವರಾಗಿ ಹೋದರು. ಬರಗೂರು ಕಂಟೆಸ್ಸಾ ಕಾರಿನಲ್ಲಿ ಕಾವ್ಯ ಬರೆದರೆ, ಚಂಪಾ ಕೂಡ 'ನನಗೆ ಅಂಬಾಸಿಡರ್ ಬೇಡ ಬರಗೂರರಂಥ ಕಂಟೆಸ್ಸಾನೇ ಇರಲಿ' ಎಂದರು. ಇನ್ನ ಕಪಳೇಗೌಡರು 'ಕಾರು ಯಾವುದಾದರೂ ಇರಲಿ, ಕಂಡಿಷನ್ನಾಗಿರಲಿ. ಜೊತೆಗೆ ಒಳ್ಳೆ ಊಟ, ವಸತಿ' ಅಕಾಡೆಮಿಯಲ್ಲಿ ಹೇರಳವಾಗಿ ಹಣವಿದ್ದರೆ ಸಾಕು' ಎಂದರು. ಇನ್ನು ಲಲಿತಾನಾಯಕಿ ನನಗೆ ಯಾವ ಖಾತೆಯಾದರೂ ಸರಿ ಮುಖ್ಯವಾಗಿ ಮಕ್ಕಳ ಖಾತೆ ಬೇಕು. ಯಾಕೆಂದರೆ ನಾನು ಮಕ್ಕಳ ತಾಯಿ. ಮೂರು ಮಕ್ಕಳಿಗೂ ಮನೆ ಮಾಡಬೇಕು, ಸೈಟು ಮಾಡಬೇಕು, ಅದಕ್ಕಾಗಿ ನಾನು ಮದ್ಯದ ದೊರೆ ಮಲ್ಯನೊಟ್ಟಿಗೂ ಹೋಗಬಲ್ಲೆ' ಎಂದು ಹೋಗೇಬಿಟ್ಟರಂತಲ್ಲಾ" ಎಂದು ಚಿಂತಿಸುತ್ತಿದ್ದಾರಂತಲ್ಲಾ, ಥೂತ್ತೇರಿ.

* * * * * *

ಮೇಲಿನವರದ್ದೆಲ್ಲಾ ಆ ಗತಿಯಾದರೆ ಇನ್ನು ಹೊಲೆ ಮಾದಿಗರ ಹಾಡು ಬರೆದು ಪರ್ಯಾಯವಾಗಿ ಬಂಡಾಯ ಸಾಹಿತ್ಯ ಸಮ್ಮೇಳನವೇ ಜರುಗುವಂತೆ ಮಾಡಿದ್ದ ದಲಿತ ಕವಿ ಸಿದ್ಧಲಿಂಗಯ್ಯ ಎಂಬ ಸಣ್ಣ ಮನುಷ್ಯ ತಾನೇ ಬರೆದ "ಇಕ್ರಲಾ ವದೀರ್ಲ" ಎಂಬ ಸಾಲಿಗೆ ಸಮಜಾಯಿಸಿ ನೀಡುತ್ತಾ ಸಂಬಂಧಪಟ್ಟವರು ಸಿಕ್ಕಾಗ "ನನ್ನ ಹಾಡಿನಿಂದ ಬೇಸರ ಮಾಡಿಕೊಳ್ಳಬೇಡಿ. ಆ ಡಿ.ಆರ್. ನಾಗರಾಜ್, ಕಾಳೇಗೌಡ, ಬರಗೂರು, ಮುತ್ತಿತರ ಸಾಹಿತಿ ಮಿತ್ರರು ಪ್ರಚೋದಿಸಿದ ಫಲವಾಗಿ ನಾನು ಹಾಗೆ ಬರೆಯಬೇಕಾಯ್ತು, ಈ ಪ್ರಮಾದಕ್ಕಾಗಿ ನಾನು ಕ್ಷಮೆಯಾಚಿಸುತ್ತೇನೆ'' ಎಂಬಂತೆ ವರ್ತಿಸಿದರಂತಲ್ಲಾ, ಇದನ್ನು ಕಂಡು "ಪಾಪ ಇಂತಹ ಹುಡುಗನನ್ನು ಆ ಜನ ದಾರಿ ತಪ್ಪಿಸಿದ್ದಾರಲ್ಲಾ" ಎಂದು ಮರುದಿನ ರಾಮಕೃಷ್ಣ ಹೆಗಡೆ ವಿಧಾನಸಭೆಗೆ ಕರೆಸಿಕೊಂಡರಂತಲ್ಲಾ, ಇದರಿಂದ ಬದ್ದು ಹೊರಳಾಡಿ ಬಾಲವಲ್ಲಾಡಿಸಿದ ಸಿದ್ಧಲಿಂಗಯ್ಯ ತನ್ನ ಮೈಕೆಸರಾಗಿದ್ದ ಸಂಗತಿಯನ್ನೇ ಕೆರೆದು ಹೆಗಡೆಗೆ ಅರ್ಪಿಸಿಬಿಟ್ಟರಂತಲ್ಲಾ, ಸಿದ್ಧಲಿಂಗಯ್ಯನ ಬುದ್ಧಿ ನೋಡಿದ ಕುಮಾರಣ್ಣನೂ ಒಂದು ಸಿಂಪಲ್ಲಾದ ಅಂಬಾಸಿಡರ್ ಕಾರು ಕೊಡಲಾಗಿ, ಮತ್ತೆ ತನ್ನ ಸುಳ್ಳಂಪಳ್ಳಂ ಸಂಗತಿಯನ್ನು ಆತುರವಾಗಿ ಕೆರೆದು ಕುಮಾರಸ್ವಾಮಿಗೂ ಅರ್ಪಿಸಿ ಹಾಳಾಗಿ ಹೋದರಂತಲ್ಲಾ, ಥೂತ್ತೇರಿ!!


* * * * * *

ಸದರಿ ಬಂಡಾಯ ಸಾಹಿತಿಗಳು ಹೀಗೆ ಈ ಪರಿಯಾದುದನ್ನು ವ್ಯಾಖ್ಯಾನಿಸಿದ ಭಗ್ನ ಬಂಡಾಯದ ಹೃದಯಿಗಳು ಹೇಳುವುದೇನೆಂದರೆ "ಇವರ ಪ್ರಕಾರ ಬಂಡಾಯವೆಂದರೆ ಪ್ರತಿಭಟನೆ. ಆ ಪ್ರತಿಭಟನೆಯಲ್ಲೂ ಕೂಡ ಆಗಾಗ್ಗೆ ನಿಲುಗಡೆಗೊಳ್ಳುವ ಪ್ರತಿಭಟನೆಯಿದೆ. ಉದಾಹರಣೆಗೆ ಇವರಿಗೊಂದು ಕೆಲಸವಿರಲಿಲ್ಲ, ಅದೂ ಸಿಕ್ಕಿತು. ಮನೆಯಿರಲಿಲ್ಲ ಅದೂ ಸಿಕ್ಕಿತು. ಹೆಂಡತಿಯಿರಲಿಲ್ಲ, ಅವಳೂ ಸಿಕ್ಕಳು. ಯಾರ ಸಹಾಯವೂ ಇಲ್ಲದೆ ಮಕ್ಕಳೂ ಆದವು. ಅವೆಲ್ಲಾ ಓದಿ ಒಂದೊಂದು ಕೆಲಸಕ್ಕೆ ಬಂಡಾಯದ ಪ್ರಭಾವದಿಂದಲೇ ಸೇರಿಕೊಂಡವು. ಇನ್ನು ಈ ಬಂಡಾಯದ ಸಾಹಿತಿಗಳಿಗೆ ಮಂತ್ರಿಗಳ ಸವಲತ್ತಿನಲ್ಲಿ ಮೆರೆಯಬೇಕೆಂಬ ಚಪಲ ಹುಟ್ಟಿಕೊಂಡಿತು. ಇವರನ್ನು ಕೊಂಕು ನಗೆಯಿಂದ ನೋಡುತ್ತಿದ್ದ ರಾಜಕಾರಣಿಗಳಿಗೆ ಇವರ ಬಂಡಾಯವೇನೆಂದು ಅರ್ಥವಾಗಿತ್ತು, ಅದನ್ನು ದಯಪಾಲಿಸಿದರು. ಅಲ್ಲಿಗೆ ಈ ಡಂಬಾಯ ಸಾಹಿತಿಗಳ ಬಂಡಾಯ ದನಿ ಮುಳುಗಿ ಹೋಯಿತು" ಎಂದು ಪರಿತಪಿಸುತ್ತಿದ್ದಾರಂತಲ್ಲಾ, ಹೀಗೆ ಮುಂದೆ ಬಂಡಾಯದವರ ದನಿಯಲ್ಲಿ, ಬಡಾವಣೆ ಸೌಕರ್ಯಗಳ ಬೇಡಿಕೆ ಕಾಣುವಂತಾಗಿದೆಯಂತಲ್ಲಾ, ಥೂಥೂಥೂತ್ತೇರಿ!!!

—ಯಾಹೂ

ಸ್ವಸ್ಥ ಸಮಾಜದ ಕುರಿತು ಕಾಳಜಿ ಇರುವ, ಆಷಾಢಭೂತಿತನವನ್ನು ಪ್ರಶ್ನಿಸುವ ಯಾರು ಬೇಕಾದರೂ ಬರೆಯಬಹುದಾಗಿದ್ದ ಲೇಖನವೊಂದನ್ನು ಮುಂದಿಟ್ಟುಕೊಂಡು ಸೀತಾರಾಮ್ ಅವರ ವಿರುದ್ಧ ಆರಂಭವಾಗಿರುವ ವಿಚ್ ಹಂಟಿಂಗ್‌ನ ಹಿಂದೆ ಒಂದು ವ್ಯವಸ್ಥಿತ ಸಂಚಿದೆ. ಈ ಸಂಚಿನ ಸೂತ್ರಧಾರಿ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರಾಗಿದ್ದರೆ ಬೆಂಬಲವಾಗಿ ನಿಂತಿರುವುದು ಕರ್ನಾಟಕದ ಕಾವಿ ಪಡೆ.

ನಗ್ನ ಮುನಿ ಸುತ್ತ ವಿವಾದ



ಕರಾವಳಿ ಜಿಲ್ಲೆಗಳಲ್ಲಿ ಪ್ರಭಾವಶಾಲಿಯಾಗಿರುವ 'ಕರಾವಳಿ ಅಲೆ', 'ಕನ್ನಡ ಜನ ಅಂತರಂಗ' ಎಂಬ ಸಂಜೆ ದಿನ ಪತ್ರಿಕೆಗಳು ಹಾಗೂ 'ಕೆನರಾ ಟೈಂಸ್' ಎಂಬ ಪಾಕ್ಷಿಕವನ್ನು ಪ್ರಕಟಿಸುತ್ತಿರುವ ಚಿತ್ರಾ ಪಬ್ಲಿಕೇಷನ್ಸ್ ಸಂಸ್ಥೆಯ ನಿರ್ದೇಶಕರಾಗಿರುವ ಬಿ.ವಿ. ಸೀತಾರಾಮ್ ಮತ್ತು ಅವರ ಪತ್ನಿ ರೋಹಿಣಿಯವರನ್ನು ಪೊಲೀಸರು ಎರಡೆರಡು ಬಾರಿ ಬಂಧಿಸಿದ್ದಾರೆ. ಮೊದಲಿಗೆ ರಾಜವರ್ಮ ಬಲ್ಲಾಳ್ ನೀಡಿದ ದೂರನ್ನು ಪರಿಗಣಿಸಿ ಮಂಗಳೂರು ಪೊಲೀಸರು ಬಂಧಿಸಿದ್ದರೆ, ನ್ಯಾಯಾಲಯದಿಂದ ಜಾಮೀನು ಪಡೆದು ಹೊರಗೆ ಬರುವ ಹೊತ್ತಿಗೆ ಸಾಗರ ಪೊಲೀಸರು ಬಂಧಿಸಿದರು.



ಸೀತಾರಾಮ್‌ಗೆ ಕೈ ಕೋಳ ಹಾಕಿರುವ ಪೊಲೀಸರು

ಬಂಧನಕ್ಕೆ ಒಳಗಾದ ಇಬ್ಬರೂ ಕಾನೂನಿನನ್ವಯ ಸಂಪಾದಕರಲ್ಲ, ಪ್ರಕಾಶಕರಲ್ಲ, ಅಷ್ಟೇಕೆ ಕನಿಷ್ಠ ಮುದ್ರಕರೂ ಅಲ್ಲ. ಬಿ.ವಿ.ಸೀತಾರಾಮ್ ತಮ್ಮ ಸಂಸ್ಥೆಯ ಪ್ರಕಟಣೆಗಳಲ್ಲಿ ಅಂಕಣಗಳನ್ನಷ್ಟೇ ಬರೆಯುತ್ತಿರುವವರು. ಪೊಲೀಸರು ಈ ದಂಪತಿಗಳ ಮೇಲೆ ಮುಗಿಬೀಳಲು ಕಾರಣವಾದ ಬರಹ ಯಾವ ರೀತಿಯಲ್ಲೂ ಅತಾರ್ಕಿಕ ಅಥವಾ ಅಸಹಿಷ್ಣುತೆಯಿಂದ ತುಂಬಿದ್ದಲ್ಲ.

ಅಸಂಗತ ಎಂಬಂತೆ ಕಾಣುವ ಈ ಪ್ರಕರಣದ ಕುರಿತಂತೆ ದಕ್ಷಿಣ ಕನ್ನಡ ಜಿಲ್ಲೆಯ ಪತ್ರಕರ್ತರ ಸಂಘಟನೆ ತೋರಿಕೆಗೂ ಒಂದು ಖಂಡನೆಯನ್ನು ದಾಖಲಿಸಿಲ್ಲ. ಸೀತಾರಾಮ್ ಬಂಧನಕ್ಕೆ ಒಳಗಾದ ದಿನವೇ ಮಂಗಳೂರಿನ ಪ್ರೆಸ್‌ಕ್ಲಬ್‌ನ ಉದ್ಘಾಟನೆಯ ಕಾರ್ಯಕ್ರಮವಿತ್ತು. ಅಲ್ಲಿದ್ದ ಕರ್ನಾಟಕ ರಾಜ್ಯ ಪತ್ರಕರ್ತರ ಸಂಘಟನೆಯ ಪದಾಧಿಕಾರಿಗಳಲ್ಲಿ ಒಬ್ಬರೂ ಬಂಧನದ ವಿರುದ್ಧ ಮಾತನಾಡಲಿಲ್ಲ. ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ್ದ ಮಾಜಿ ಸಂಸದ ಜನಾರ್ದನ ಪೂಜಾರಿ ಮಾತ್ರ ಪರೋಕ್ಷವಾಗಿ ಪತ್ರಿಕೋದ್ಯಮದ ಮೇಲೆ ನಡೆಯುತ್ತಿರುವ ಹಲ್ಲೆಯನ್ನು ಖಂಡಿಸಿದರು. ಸದ್ಯಕ್ಕೆ ಸೀತಾರಾಮ್ ಮತ್ತು ರೋಹಿಣಿಯವರ ಬಂಧನವನ್ನು ಕರಾವಳಿಯಲ್ಲಿ ಪ್ರತಿಭಟಿಸುತ್ತಿರುವವರೆಲ್ಲಾ ಕೋಮು ಸೌಹಾರ್ದಕ್ಕಾಗಿ ದುಡಿಯುತ್ತಿರುವ ಸಂಘಟನೆಗಳಲ್ಲಿರುವವರು.

ಇಷ್ಟಕ್ಕೂ ಸೀತಾರಾಮ್ ಅವರು ಬರೆದದ್ದೇನು?

ಸೀತಾರಾಮ್ ಅವರ ಅಂಕಣದಲ್ಲಿ ಬಂದ ಬರಹದ ಧ್ವನಿ ಇಷ್ಟೇ. ಬೆತ್ತಲೆ ಪೂಜೆಯನ್ನು ನಿಷೇಧಿಸಬೇಕೆಂದು ನಾವೆಲ್ಲಾ ಮಾತನಾಡುತ್ತೇವೆ. ಇದಕ್ಕಾಗಿ ಚಳವಳಿಗಳನ್ನು ನಡೆಸುತ್ತೇವೆ. ಸಾರ್ವಜನಿಕವಾಗಿ ಬೆತ್ತಲೆ ತಿರುಗುವುದು ಕಾನೂನಿನ ಪ್ರಕಾರವೂ ಅಪರಾಧ. ಆದರೆ ಜೈನ ಸನ್ಯಾಸಿಗಳೇಕೆ ಬೆತ್ತಲೆಯಾಗಿ ತಿರುಗಾಡುತ್ತಾರೆ? ಇವರನ್ನೇಕೆ ಯಾರೂ ಪ್ರಶ್ನಿಸುತ್ತಿಲ್ಲ?

ಈ ಪ್ರಶ್ನೆಗಳನ್ನು ಕೇಳಿದ್ದರಿಂದ ಜೈನರ ಭಾವನೆಗಳಿಗೆ ನೋವುಂಟಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲೆಯ ಖಾಸಗೀ ಬಸ್ ಮಾಲೀಕರ ಸಂಘಟನೆಯ ಪ್ರಮುಖರಾಗಿರುವ ರಾಜವರ್ಮ ಬಲ್ಲಾಳ್ ಪೊಲೀಸರಿಗೆ ಒಂದು ದೂರು ನೀಡಿದರು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಮಧ್ಯರಾತ್ರಿ ಹೋಗಿ ಸೀತಾರಾಮ್ ಹಾಗೂ ಅವರ ಪತ್ನಿ ರೋಹಿಣಿಯವರನ್ನು ಬಂಧಿಸಿದರು. ಇವರ ಸಂಸ್ಥೆ ನಡೆಸುತ್ತಿರುವ ಪತ್ರಿಕೆಗಳ ಸಂಪಾದಕ, ಮುದ್ರಕ ಹಾಗೂ ಪ್ರಕಾಶಕರಾಗಿರುವ ಶಿವಪ್ರಸಾದ್ ಬದಿಯಡ್ಕ ಅವರನ್ನು ಬಂಧಿಸಲು 'ವ್ಯಾಪಕ ಬಲೆ ಬೀಸಿ' ಕುಳಿತಿದ್ದಾರೆ.

ರಾಜವರ್ಮ ಬಲ್ಲಾಳರು ನೀಡಿದ ದೂರನ್ನು ಇಟ್ಟುಕೊಂಡು ಶನಿವಾರ ರಾತ್ರಿಯವರೆಗೂ ಕಾದು ಸೀತಾರಾಮ್ ದಂಪತಿಗಳನ್ನು ಬಂಧಿಸಿ ಅಪರಾತ್ರಿಯಲ್ಲಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂಧಕ್ಕೆ ಒಳಪಡಿಸಲಾಯಿತು. ಈ ಎಲ್ಲಾ ಒತ್ತಡವನ್ನು

(12ನೇ ಪುಟಕ್ಕೆ)

ಪತ್ರಕರ್ತ ಸೀತಾರಾಂ ಬಂಧನ

ಕೋಮುವಾದಿ ಪೊಲೀಸರಿದ್ದಾರೆ ಎಚ್ಚರಿಕೆ!

ಕರಾವಳಿಯ 'ಹಿಂದೂ ಪೊಲೀಸರ' ಕಾಕದೃಷ್ಟಿ ಈಗ ಪತ್ರಕರ್ತರ ವಿರುದ್ಧ ತಿರುಗಿದೆ. ಮಂಗಳೂರಿನ ಜನಪ್ರಿಯ ದಿನಪತ್ರಿಕೆ ಕರಾವಳಿ ಅಲೆಯ ಮಾಲೀಕ ಬಿ.ವಿ.ಸೀತಾರಾಮ್ ಮತ್ತವರ ಪತ್ನಿ ರೋಹಿಣಿಯವರನ್ನು ಅರೆಸ್ಟು ಮಾಡಿ ಜೈಲಿಗೆ ಕಳುಹಿಸಿದ್ದಾರೆ. ಜೈನ ಧರ್ಮದ ಬಗ್ಗೆ ಹಾಗೂ ನಗ್ನ ಮುನಿ ತರುಣ ಸಾಗರ ಎಂಬುವರ ಬಗ್ಗೆ ಸೀತಾರಾಮ್ ಬರೆದ ಲೇಖನಗಳು ಜೈನ್ ಧರ್ಮೀಯರ ಭಾವನೆಗಳಿಗೆ ನೋವುಂಟು ಮಾಡಿವೆ ಎಂಬ ರಾಜವರ್ಮ ಬಲ್ಲಾಳ್ ಎಂಬುವರ ದೂರಿನ ಮೇಲೆ ಕ್ರಮ ಜರುಗಿಸಿದ ಪೊಲೀಸರೇ ಈಗ ಬೆತ್ತಲಾಗಿದ್ದಾರೆ. ಸೀತಾರಾಮ್ ಬಂಧನವು ನ್ಯಾಯಾಲಯದ ಆದೇಶದಂತೆ ಆಗಿರುವುದು ನಿಜ. ಅದನ್ನೀಗ ಯಾರೂ ಪ್ರಶ್ನಿಸುವಂತಿಲ್ಲ. ಏನಿದ್ದರೂ ಸೀತಾರಾಮ್ ದಂಪತಿಗಳು ಜಾಮೀನು ಪಡೆದು ಹೊರಬರಬೇಕಷ್ಟೆ. ಆದರೆ ಕರಾವಳಿಯ ಹಿಂದೂ ಮತೋನ್ಮಾದಿ ಪೊಲೀಸರು, ಬಿಜೆಪಿ ಸಚಿವ ನಾಗರಾಜ ಶೆಟ್ಟಿ ಹಾಗೂ ಕೆಲ ಪಟ್ಟಭದ್ರರು ಒಟ್ಟಿಗೆ ಸೇರಿ ಪತ್ರಕರ್ತರ ವಿರುದ್ಧ ಹೀಗೆ ಸಂಚು ಹೂಡಿರುವುದು ಬಹಳ ಅಪಾಯಕಾರಿ ಬೆಳವಣಿಗೆಯಾಗಿದೆ.

ಕರ್ನಾಟಕದ ಹಾಲಿ ಕೋ-ಜಾ ಸರ್ಕಾರ ಹಾಗೂ ಕೋಮುವಾದಿ ಗೃಹಮಂತ್ರಿ ಎಂ.ಪಿ. ಪ್ರಕಾಶ್ ಒಪ್ಪಿಗೆಯೊಂದಿಗೇ ಚಾಲೂ ಆಗಿರುವ ಈ ಪ್ರಜಾಪ್ರಭುತ್ವದ ಮೇಲಿನ ದಾಳಿ ಇಲ್ಲಿಗೆ ನಿಲ್ಲುವ ಸಾಧ್ಯತೆಗಳಿಲ್ಲ. ಅದರಲ್ಲೂ ಕರಾವಳಿ ಪೊಲೀಸರಂತೂ ನೇರ ಆರ್‌ಎಸ್‌ಎಸ್ ಶಾಖೆಗಳಿಂದಲೇ ತರಬೇತಾಗಿ ಬಂದವರಂತೆ ಆಡುತ್ತಿದ್ದಾರೆ. ಸೀತಾರಾಮ್ ಜೈನ ಧರ್ಮಿಯರ ಭಾವನೆಗಳಿಗೆ ನೋವಾಗುವಂತೆ ಬರೆದಿದ್ದರೆ ಅದು ಸಮರ್ಥನೀಯವಲ್ಲ. ಅದರ ಸರಿ-ತಪ್ಪುಗಳೇನಿದ್ದರೂ ಈಗ ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕಾದ ವಿಚಾರ. ಆದರೆ ಅದೇ ಕರಾವಳಿಯ ಉದಯವಾಣಿ, ಪ್ರಜಾವಾಣಿ, ವಿಜಯ ಕರ್ನಾಟಕ ದಿನಪತ್ರಿಕೆಗಳು ಪ್ರತಿನಿತ್ಯ ಮುಸ್ಲಿಮರ ವಿರುದ್ಧ, ಇಸ್ಲಾಂ ವಿರುದ್ಧ ಬರೆಯುತ್ತಲೇ ಬಂದಿವೆ. ಈ ಬಗ್ಗೆ ನೊಂದವರು ರಾಜವರ್ಮ ಬಲ್ಲಾಳ್ ರೀತಿಯೇ ಪೊಲೀಸರಿಗೆ ದೂರುಗಳನ್ನು ನೀಡಿದ್ದಿದೆ. ಆದರೆ ಆವಾಗೆಲ್ಲಾ ಯಾವ ಕ್ರಮವನ್ನೂ ತೆಗೆದುಕೊಂಡಿರದಿದ್ದ ಮಂಗಳೂರು ಪೊಲೀಸರು ಈಗ ಏಕಾಏಕಿ ಸೀತಾರಾಮ್‌ರನ್ನು ಬಂಧಿಸಿದ್ದೇಕೆ?

ಬ್ರಾಹ್ಮಣ ಧರ್ಮೀಯರೂ ಹಾಗೂ ಜೈನರಿಗೆ ಮಾತ್ರ ಭಾವನೆಗಳಿರುತ್ತವೆ ಉಳಿದಂತೆ ದಲಿತರು, ಶೂದ್ರರಿಗೆ ಹಾಗೂ ಮುಸ್ಲಿಮರಿಗೆ ಭಾವನೆಗಳೇ ಇರುವುದಿಲ್ಲವೆಂದೆ?



ಸೀತಾರಾಮ್ ಹಾಗೂ ರೋಹಿಣಿಯರನ್ನು ಪೊಲೀಸರು ಬಂಧಿಸಿರುವುದು

ಸೀತಾರಾಂ-ಪಿತೂರಿಯ ಬಂಧನ

ಕಳೆದ 15 ವರ್ಷಗಳಿಂದ ಪ್ರಕಟವಾಗುತ್ತಿರುವ ಕೋಸ್ಟಲ್ ಏರಿಯಾದ 'ಕರಾವಳಿ ಅಲೆ' ದಿನಪತ್ರಿಕೆ ಆ ಭಾಗದ ಅತ್ಯಧಿಕ ಪ್ರಸಾರವುಳ್ಳ ಪತ್ರಿಕೆಯೂ ಹೌದು. ಕಳೆದ ತಿಂಗಳು ಧರ್ಮಸ್ಥಳದಲ್ಲಿ ನಡೆದ ಬಾಹುಬಲಿಯ ಮಸ್ತಕಾಭಿಷೇಕದ ಸಂದರ್ಭದಲ್ಲಿ 'ಕರಾವಳಿ ಅಲೆ' ಕೆಲವು ಲೇಖನಗಳನ್ನು ಪ್ರಕಟಿಸಿತ್ತು. ಜೈನ ಮುನಿ ತರುಣ ಸಾಗರರು ನಗ್ನವಾಗಿ ಓಡಾಡುತ್ತಿರುವ ಬಗ್ಗೆಯೂ ಸೀತಾರಾಮ್ ಲೇಖನ ಬರೆದಿದ್ದರು. ಕಳೆದ ಮೂರು ತಿಂಗಳುಗಳಿಂದ ಕರ್ನಾಟಕದಲ್ಲಿ ಪ್ರವಚನ ನೀಡುತ್ತಾ ಬಂದಿರುವ ತರುಣ ಸಾಗರರು ಒಮ್ಮೆ ಮಂಗಳೂರಿಗೂ ಹೋಗಿ ಬಂದಿದ್ದಾರೆ. ಜೈನ ಧರ್ಮದ ದಿಗಂಬರ ಸಂಘದ ಈ ಧರ್ಮಗುರು ಬಟ್ಟೆ ಧರಿಸುವುದಿಲ್ಲ. ನೀರಿನಿಂದ ಸ್ನಾನ ಮಾಡುವುದಿಲ್ಲ. ಮಿತಾಹಾರ ಸೇವನೆ ಧಾರ್ಮಿಕ ಬೋಧನೆಗಳೇ ಇವರ ನಿತ್ಯಕಾಯಕ. ಈ ಜಗತ್ತಿನಲ್ಲಿರುವವರೆಲ್ಲಾ ಹುಚ್ಚರು, ತಾನು ಅವರನ್ನು ಉದ್ಧರಿಸಲು ಬಂದಿರುವಾತ ಎಂದು ಈ ತರುಣ ಸಾಗರ ನಂಬಿಕೊಂಡಿದ್ದಾರೆ, ಹಾಗೆಂದು ತಮ್ಮ ಪ್ರವಚನಗಳಲ್ಲೂ ಪ್ರತಿಪಾದಿಸುತ್ತಾರೆ. ಆ ಬಗ್ಗೆ ಯಾರೇನೂ ಆಕ್ಷೇಪಣೆ ಮಾಡಬೇಕಾಗಿಲ್ಲ. ಅದು ಹುಚ್ಚು ಹಿಡಿದಿರುವವರಿಗೂ ಮತ್ತು ಹುಚ್ಚು ಬಿಡಿಸುವವರಿಗೂ ಸಂಬಂಧಪಟ್ಟ ವಿಚಾರ. ಆದರೆ ಪತ್ರಕರ್ತ ಸೀತಾರಾಮ್ ಎತ್ತಿದ್ದ ಪ್ರಶ್ನೆಗಳೇ ಬೇರೆ.

ಅದು ಜೈನಮುನಿಗಳು ನಗ್ನರಾಗಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿರುವ ಬಗ್ಗೆ ಸೀತಾರಾಮ್ ಆಕ್ಷೇಪ ವ್ಯಕ್ತಪಡಿಸಿದ್ದರು. ನಗ್ನತೆ ಬಗ್ಗೆ ಈಗಲೂ ಭಾರತೀಯ ಪೀನಲ್ ಕೋಡ್ (IPL) ನಲ್ಲಿ ಕೆಲ ನಿರ್ಬಂಧಗಳಿವೆ. ಸೆಕ್ಷನ್ 268, 290 ಹಾಗೂ 294 ರ ಪ್ರಕಾರ ಸಾರ್ವಜನಿಕವಾಗಿ ಬೆತ್ತಲಾಗುವುದು, ಅಂತವಕ್ಕೆ ಪ್ರೋತ್ಸಾಹ ನೀಡುವುದು ಎರಡೂ ಅಪರಾಧವಾಗುತ್ತದೆ. ಇದಕ್ಕೆ ಯಾವುದೇ ಜಾತಿ, ಧರ್ಮಗಳಿಗೂ ವಿನಾಯಿತಿ ಇಲ್ಲ. ಇದು ಜೈನರಿಗೂ ಅನ್ವಯಿಸುತ್ತದೆ. ಇದೇ ತರುಣ ಸಾಗರ ಮುನಿ ಈಗ್ಗೆ ಎರಡು ತಿಂಗಳ ಹಿಂದೆ ಬೆಂಗಳೂರಿನಲ್ಲೂ ಬೀಡುಬಿಟ್ಟಿದ್ದರು. ಶಂಕರಪುರಂನಲ್ಲಿ ಅವರ ಪ್ರವಚನ ನಡೆಯುತ್ತಿತ್ತು. ಆಗಲೂ ನಗ್ನವಾಗಿ ಸಾರ್ವಜನಿಕವಾಗಿ ಕಾಣಿಸಿಕೊಂಡಾಗ ಕೆಲವು ನಾಗರಿಕರು ಪ್ರತಿಭಟಿಸಿದ್ದರು. ಕೊನೆಗೆ ಈ ನಗ್ನಮುನಿ ಹೊರಗಡೆ ಹೊರಟಾಗ ಕೆಲವು ಸಹಾಯಕರು ನಾಲ್ಕು ಕಡೆಯಿಂದ ಪಂಚೆ ಬಟ್ಟೆ ಅಡ್ಡ ಹಿಡಿದು ನಗ್ನತೆ ಕಾಣದಂತೆ ಕವರ್ ಮಾಡುವುದಾಗಿ ಸಮಾಧಾನಪಡಿಸಲಾಗಿತ್ತು. ಜೈನ ನಗ್ನ ಮುನಿಗಳು ಓಡಾಡುವಾಗ ಈಗಲೂ ಅದೇ ನಿಯಮ ಪಾಲಿಸಬಾರದೇಕೆ?

ವೀರೇಂದ್ರ ಹೆಗ್ಗಡೇನ ಪ್ರಶ್ನಿಸಬಾರದೇ?



ಸೀತಾರಾಮ್ ಬಂಧನದ ಹಿಂದೆ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯ ಕೈವಾಡವೂ ಇದೆ. ಇದಕ್ಕೆ ಕಾರಣ ಏನೆಂದರೆ ಜನವರಿ 22ರ ಕರಾವಳಿ ಅಲೆ ಪತ್ರಿಕೆಯು ವೀರೇಂದ್ರ ಹೆಗ್ಗಡೆಯ ಹಣಕಾಸಿನ ವ್ಯವಹಾರಗಳ ಬಗ್ಗೆ ನಾಗರಿಕ ಸೇವಾ ಟ್ರಸ್ಟ್ ಬರೆದಿದ್ದ ಪತ್ರವೊಂದನ್ನು ಪ್ರಕಟಿಸಿತ್ತು.

ಎಲ್ಲರಿಗೂ ಗೊತ್ತಿರುವ ಹಾಗೆ ಧರ್ಮಸ್ಥಳದ ಮಂಜುನಾಥ ದೇವರಿಗೆ ಲಕ್ಷಾಂತರ ಭಕ್ತರಿದ್ದಾರೆ. ಕೋಟ್ಯಂತರ ರೂಪಾಯಿಗಳ ವರಮಾನವೂ ಇದೆ. ಆದರೆ ಆದಾಯ-ಖರ್ಚುಗಳ ಲೆಕ್ಕಪತ್ರ ಮಾತ್ರ ಈಗಲೂ ಯಾರಿಗೂ ಗೊತ್ತಾಗುತ್ತಿಲ್ಲ. ಇಷ್ಟಕ್ಕೂ ಹೆಗ್ಗಡೆ ಜೈನ ಧರ್ಮೀಯ. ಆದರೆ ಮಂಜುನಾಥ ದೇವರು ಜೈನ ದೇವರಲ್ಲ, ಹಾಗೂ ಅಲ್ಲಿಗೆ ಹೋಗುವ ಬಹುತೇಕ ಭಕ್ತರೂ ಜೈನ ಧರ್ಮದವರಲ್ಲ ಬದಲಾಗಿ ಶೂದ್ರ ದಲಿತರೇ ಹೆಚ್ಚಿದ್ದಾರೆ. ಹೀಗಿರುವಾಗ ಈ ಜೈನೇತರ ದೇವಾಲಯದ ಮೇಲೆ ಜೈನರಾದ ವೀರೇಂದ್ರ ಹೆಗ್ಗಡೆ ನಿಯಂತ್ರಣ ಇಟ್ಟುಕೊಂಡಿರುವುದು ಎಷ್ಟು ಸರಿ?

ಈ ವೀರೇಂದ್ರ ಹೆಗ್ಗಡೆ ನಿಜಕ್ಕೂ ಧರ್ಮಾಧಿಕಾರಿಯೇ ಆಗಿದ್ದರೆ ಜನ ಎಷ್ಟೆಷ್ಟು ದಾನಧರ್ಮ ನೀಡುತ್ತಿದ್ದಾರೆಂಬುದನ್ನು ಬಹಿರಂಗ ಪಡಿಸಬಾರದೇಕೆ? ಅದರಲ್ಲೇನು ರಹಸ್ಯ! ಇದಿಷ್ಟೇ ಅಲ್ಲ, ಈ ಹೆಗಡ್ಡೆ ಸ್ಥಾಪಿಸಿರುವ ರುಡ್‌ಸೆಟ್ ಎಂಬ ಗ್ರಾಮೀಣ ಸ್ವಯಂ ಸೇವಾ ಸಂಸ್ಥೆಯ ಲೆಕ್ಕಪತ್ರಗಳಲ್ಲೂ ಭಾರಿ ಅಪರಾ ತಪರಗಳು ನಡೆಯುತ್ತಿವೆ ಎಂದು ನಾಗರೀಕ ಸೇವಾ ಟ್ರಸ್ಟ್ ಆರೋಪಿಸಿದೆ. ಸಿಂಡಿಕೇಟ್ ಬ್ಯಾಂಕ್ ಹಾಗೂ ಕೆನರಾ ಬ್ಯಾಂಕ್‌ಗಳು ರುಡ್‌ಸೆಟ್‌ಗೆ ಹಣ ನೀಡಿ ನಡೆಸುತ್ತಿವೆ. ಆದರೆ ಅದರ ಕೀರ್ತಿಯೆಲ್ಲಾ ಹೆಗ್ಗಡೆಗೆ.

ಇದಿಷ್ಟೇ ಅಲ್ಲ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಡಿ ನಬಾರ್ಡ್, ಸ್ಟೇಟ್ ಬ್ಯಾಂಕ್, ಕಾರ್ಪೊರೇಶನ್ ಬ್ಯಾಂಕುಗಳಿಂದ 200 ಕೋಟಿ ರೂ.ವರೆಗೆ ಶೇ. 6 ರಿಂದ 8 ರ ಬಡ್ಡಿ ದರದಲ್ಲಿ ಸಾಲ ತಂದು ಅದೇ ಹಣವನ್ನು ಸ್ವಸಹಾಯ ಸಂಘಗಳಿಗೆ ಶೇ. 12 ರಿಂದ 18 ರಷ್ಟು ಬಡ್ಡಿ ದರ ವಿಧಿಸಿ ಮರುಸಾಲ ನೀಡುತ್ತಿದೆ ಹೆಗ್ಗಡೆಯವರ SHG. Self Help Group ಒಂದು ತಾನೇ ಬ್ಯಾಂಕ್‌ನ ಪಾತ್ರ ವಹಿಸುವಂತಿಲ್ಲವೆಂಬ ರಿಸರ್ವ್ ಬ್ಯಾಂಕಿನ ನಿಯಮದ ನೇರ ಉಲ್ಲಂಘನೆ ಇದು.

ಹೆಗ್ಗಡೆಯನ್ನು ಇಲ್ಲೂ ಯಾರೂ ಪ್ರಶ್ನಿಸುವವರಿಲ್ಲ.

ಕೆ. ಸೋಮನಾಥ ನಾಯಕ್‌ರವರ ಅಧ್ಯಕ್ಷತೆಯ ನಾಗರೀಕ ಸೇವಾ ಟ್ರಸ್ಟ್ ಈ ಪ್ರಶ್ನೆಗಳನ್ನೆತ್ತಿ ಕಳುಹಿಸಿದ್ದ ಪತ್ರವನ್ನು ಕರಾವಳಿ ಅಲೆ ಅತ್ಯಂತ ದಿಟ್ಟತನದಿಂದ ಪ್ರಕಟಿಸಿತ್ತು, ಆ ಸೇಡಿನಿಂದಲೇ ಈಗ ಸೀತಾರಾಮ್ ಅರೆಸ್ಟಾಗುವಂತೆ ಹೆಗ್ಗಡೆಯೂ ಪೊಲೀಸರ ಮೇಲೆ ಪ್ರಭಾವ ಬೀರಿದ್ದಾರೆ.

ಅವಿವೇಕಿ ಎಸ್ಪಿ ದಯಾನಂದ



ಮುನಿಗೆ ಆರತಿ ಬೆಳಗುತ್ತಿರುವ ಎಸ್ಪಿ ದಯಾನಂದ್

ಸಂಘ ಪರಿವಾರದ ಕೈಗೊಂಬೆ ಮಂಗಳೂರು ಎಸ್ಪಿ ದಯಾನಂದ್‌ಗೆ ತನ್ನ ಸ್ಥಾನ ಹಾಗೂ ಜವಾಬ್ದಾರಿಗಳ ಬಗ್ಗೆ ಕಿಂಚಿತ್ತೂ ಅರಿವಿದ್ದಂತಿಲ್ಲ, ಫೆಬ್ರವರಿ ಕೊನೆಯ ವಾರದಲ್ಲಿ ಮಂಗಳೂರಿಗೆ ಬಂದಿದ್ದ ಜೈನ ನಗ್ನಮುನಿ ತರುಣ ಸಾಗರರ ಪ್ರವಚನ ಕೇಳಲು ಹೋದ ಎಸ್ಪಿ ದಯಾನಂದ್ ಥೇಟ್ ಪುರೋಹಿತನಂತೆ ಆರತಿ ತಟ್ಟೆ ಹಿಡಿದು ಜ್ಯೋತಿ ಬೆಳಗಿಸಿ ತಮ್ಮ ಜನ್ಮ ಪಾವನಗೊಳಿಸಿಕೊಂಡರು. 1960 ರ ಕರ್ನಾಟಕ ಪೊಲೀಸ್ ಮ್ಯಾನುಯಲ್‌ನ ಸೆಕ್ಷನ್ 1 ರ ಅಧ್ಯಾಯ 7 ರಲ್ಲಿ ಪೊಲೀಸ್ ಅಧಿಕಾರಿಗಳ ನಡವಳಿಕೆ ಹಾಗೂ ಪಾಲಿಸಬೇಕಾದ ಶಿಸ್ತುಗಳ ಬಗ್ಗೆ ಹೇಳಲಾಗಿದೆ. ಯಾರೇ ಅಧಿಕಾರಿ ಒಂದು ನಿರ್ದಿಷ್ಟ ಧರ್ಮ ಅಥವಾ ಕೋಮಿನವರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ನೇರವಾಗಿ ಭಾಗವಹಿಸುವಂತಿಲ್ಲ ಎಂಬ ನಿಯಮವಿದ್ದರೂ ಎಸ್ಪಿ ದಯಾನಂದ್ ಇಂತಾ ತಪ್ಪು ಮಾಡಿದ್ದಾರೆ.

ಪತ್ರಕರ್ತ ಸೀತಾರಾಮ್ ಎಸ್ಪಿಯ ಈ ತಪ್ಪನ್ನು ಎತ್ತಿ ತೋರಿಸಿ ಬರೆದಿದ್ದಕ್ಕೆ ದಯಾನಂದ್ ಈಗ ಈ ರೀತಿ ಸೇಡು ತೀರಿಸಿಕೊಂಡಿದ್ದಾರೆ.

ಅಷ್ಟೇ ಅಲ್ಲ ಮಂಗಳೂರಿನಲ್ಲಿ ಸೀತಾರಾಮ್ ಜಾಮೀನು ಪಡೆದು ಹೊರಬಂದ ತಕ್ಷಣ ಸಾಗರ ಪೊಲೀಸರು ಬಂದು ಸೀತಾರಾಮ್‌ರನ್ನು ಎಳೆದೊಯ್ದಿದ್ದಾರೆ. ಮೂಡಬಿದರೆ, ಕಾರ್ಕಳ, ಪೊಲೀಸರು ತಮ್ಮ ಸೇಡಿನ ಸರದಿಗೆ ಕಾದಿದ್ದಾರೆ.

ಇದು ಸಂಚಲ್ಲವೇ?

ಇದನ್ನೆಲ್ಲಾ ನೋಡಿಕೊಂಡು ಸುಮ್ಮನೇ ಕುಳಿತಿರುವ ಗೃಹಮಂತ್ರಿ ಎಂ.ಪಿ.ಪ್ರಕಾಶ್‌ಗೆ ಮೈಮೇಲೆ ಸಂಚಿತ್ತಾದರೂ ಪ್ರಜ್ಞೆ ಇದೆಯಾ?


ಚಂದ್ರಗುತ್ತಿ ಬೆತ್ತಲೆ ಸೇವೆಗೆ ನಿಷೇಧ ಏಕೆ

ಬಹುತೇಕ ದಲಿತ ಮಹಿಳೆಯರೇ ಭಾಗಿಯಾಗುತ್ತಿದ್ದ ಚಂದ್ರಗುತ್ತಿಯ ಬೆತ್ತಲೆ ಸೇವೆ ಎಂಬ ಧಾರ್ಮಿಕ ಆಚರಣೆ ಬಗ್ಗೆ 1986 ರಲ್ಲಿ ಸಾಕಷ್ಟು ವಿವಾದವೆದ್ದಿತ್ತು, ಕೊನೆಗೆ ಇದೊಂದು ಅನಾಗರಿಕ ಮೂಢನಂಬಿಕೆಯ ಆಚರಣೆ. ಮಹಿಳೆಯರ ಘನತೆಗೆ ಧಕ್ಕೆ ತರುವಂತದ್ದೆಂದು ಸರ್ಕಾರವೇ ನಿಷೇಧಿಸಿತ್ತು, ಈಗ ಜೈನ ಮುನಿ ತರುಣ ಸಾಗರರಂತವರ ನಗ್ನತೆಯೂ ನಂಬಿಕೆಗೆ ಸಂಬಂಧಿಸಿದ್ದೇ ಆಗಿದೆ. ಅಷ್ಟೇ ಅಲ್ಲ ಸಾರ್ವಜನಿಕ ಅಶ್ಲೀಲತೆಗೂ ಅಸ್ಪೃಶ್ಯತೆಗೂ ಕಾರಣವಾದದ್ದು ಎಂಬ ಚರ್ಚೆಗಳೆದ್ದಿವೆ. ಬಟ್ಟೆಯುಟ್ಟ ನಾಗರಿಕ ಸಮಾಜದಲ್ಲಿ ಅದೂ ದೇಹವೂ [illegible] ಸಮಾಜದಲ್ಲಿ ಬೆತ್ತಲೆ ಪ್ರದರ್ಶನ ಮಾಡುವುದು ಆತ್ಮಘಾತಕವೇ ಸರಿ. ಆದರೆ ಇದೇ ದಲಿತರ ಬೆತ್ತಲೆ ಸೇವೆ ನಿಷೇಧಿಸಿದಾಗ ಅನುಸರಿಸಿದ ಮಾನದಂಡವನ್ನು ಮೇಲುಜಾತಿ, ಮೇಲುವರ್ಗದವರ ಬೆತ್ತಲೆ ಧಾರ್ಮಿಕ ನಂಬಿಕೆಗಳ ವಿಚಾರದಲ್ಲೂ ಸರ್ಕಾರ ಅಳವಡಿಸುವುದಿಲ್ಲ ಏಕೆ?

ದಲಿತರ ಬೆತ್ತಲೆ ಪೂಜೆ ಅಕ್ಷಮ್ಯವೆಂದಾದರೆ ಮೇಲುಜಾತಿಯವರ ಬೆತ್ತಲೆ ಅದು ಹೇಗೆ [illegible]? ಸರ್ಕಾರ ಈಗಲಾದರೂ ಈ ಬಗ್ಗೆ ಒಂದು ನಾಗರಿಕವಾದ ಖಚಿತ ನಿಲುವನ್ನು [illegible]?

ಲಾಡು, ಕಬಾಬು ಬ್ಯಾನು!

ನಟ ರಾಧಿಕಾಳ ಮನೆ ಮೇಲೆ ಐಟಿ ರೈಡ್ ಬೀಳೊ ಕೆಲ ನಿಮಿಷ ಮೊದಲು ಕಾಂಪೌಂಡ್ ಹಾರಿ ಆಚೆಗೆ ಓಡಿಹೋದ ನಾಯಕ ಯಾರೆಂಬ ವಿಚಾರ ಈಗ ಎಲ್ಲರಿಗೂ ಗೊತ್ತಾಗಿದೆ. ಆದರೆ ರೈಡ್ ಬೀಳೊ ಮೊದಲು ಅದೇ ಮನೆಯ ಕಾಂಪೌಂಡ್ ದಾಟಿ ಒಳಬಂದಿದ್ದ ಮೂರೂವರೆ ಕೋಟಿ ಹಣ ಕೊಟ್ಟದ್ದು ಯಾರೆಂಬ ವಿಚಾರ ಪೂರ್ತಿ ಗೊತ್ತಾಗಿರಲಿಲ್ಲ, ಕೆಲವರು ಆ ದುಡ್ಡು ಡಿಕೆಯದ್ದು ಎಂದರೆ, ಬಾಕಿಯವರು 'ಲಾಡು'ನದ್ದು ಎಂದು ಊಹಿಸಿದ್ದರು. ಉಳಿದವರಿಗೆ ಅದು ಮುದ್ದೆ ಸೊಪ್ಪು ಸಾರು ಗಿರಾಕಿದು ಎಂತಲೂ ಅನ್ನಿಸಿತ್ತು.



ಆದರೆ ಆದಾಯ ತೆರಿಗೆ ಅಧಿಕಾರಿಗಳು ಕಳ್ಳತನವಾದ ಮನೆಯಿಂದ ಕಳ್ಳರ ವಾಸನೆ ಹಿಡಿಯುತ್ತಾ ಹೊರಡುವ ಪೊಲೀಸ್ ಡಾಗ್ ಸ್ಕ್ವಾಡ್‌ನಂತೆ ಕತ್ರಿಗುಪ್ಪೆಯ ರಾಧಿಕಾ ಮನೆಯಿಂದ ಹೊರಟು ಸೀದಾ ಬಳ್ಳಾರಿ ತಲುಪಿದ್ದರು. ಈಗೇನಾಗಿದೆ ಎಂದು ವಿಚಾರಿಸಿ ನೋಡಿದರೆ ಐಟಿ ತಂಡ ನೇರ ಹೋಗಿ ಜಿಯಾವುಲ್ ಶರೀಫ್ ಎಂಬಾತನ ಬೆನ್ನು ಹತ್ತಿದೆ. ಬೆಂಗಳೂರು ಏರ್‌ಪೋರ್ಟ್ ರಸ್ತೆಯಲ್ಲಿ ಕುಪ್ರಸಿದ್ಧ Diamond district ಕಟ್ಟಡದ ಮಾಲೀಕನೀತ. ಅಷ್ಟೇ ಅಲ್ಲ, ನಟ ರಾಧಿಕಾಳ ಸದಾಶಿವನಗರದ ಬಂಗಲೆ ಖರೀದಿಗೆಂದು ಮೂರುವರೆ ಕೋಟಿ ರೂಪಾಯಿಗಳ ಗಂಟನ್ನು ಕೊಟ್ಟವನೂ ಇದೇ ಭೂಪ ಎಂಬ ದಾಖಲೆ ಐಟಿ ಅಧಿಕಾರಿಗಳಿಗೆ ಸಿಕ್ಕಿದೆಯಂತೆ.

ಅಂದಹಾಗೆ ಈ ಶರೀಫನು ಲಾಡ್‌ನ ಮಿತ್ರ. ಈ ಲಾಡು ಮುದ್ದೆ ಸೊಪ್ಪುಸಾರು ಫ್ಯಾಮಿಲಿಯ ನಾಯಕ ಕುಮಾರಸ್ವಾಮಿ ಗೆಣೇಕಾರ. ವಿಷಾಗಿತ್ತೆಂದರೆ ಈ ಲಾಡು ಮತ್ತು ಮುದ್ದೆ ಸೇರಿ ಬೋಂಡಾ ಫ್ಯಾಮಿಲಿಯ ನಿರಾಶ್ರಿತ ನಟಿ ರಾಧಿಕಾಳಿಗೆ ಒಂದು ನೆಲೆ ಕಲ್ಪಿಸಲೇಬೇಕೆಂದು 'ವಿಶೇಷ ಆಶ್ರಯ' ಯೋಜನೆ ರೆಡಿ ಮಾಡಿದ್ದರಷ್ಟೇ. ಹಳ್ಳಿಗಾಡಿನ ಬಡವರಿಗೆ ಆಶ್ರಯ ಯೋಜನೆಯ ಮನೆ ಕಟ್ಟಿಸಿಕೊಡಲು ಮೂವತ್ತು ಸಾವಿರ ಸಾಕಾಗುತ್ತದೆ. ಆದರೆ ರಾಧಿಕಾಳ ಆಶ್ರಯ ಸ್ಕೀಮಿನ ಮನೆಯ ಅಂದಾಜು ವೆಚ್ಚ ಹದಿಮೂರು ಕೋಟಿ ರೂ.ನಷ್ಟಿತ್ತಲ್ಲ, ರಾಜ್ಯ ಹಣಕಾಸು ಸಚಿವರಾದ ಶೋಭಾ ಕರಂದ್ಲಾಜೆ ಹಾಗೂ ಯೂಡಿಯರಪ್ಪನವರ ಬಜೆಟ್‌ನಲ್ಲಿ ಇಂಥದಕ್ಕೆಲ್ಲಾ ಅನುದಾನ ಎಲ್ಲಿ ಬರಬೇಕು. ಹಾಗಾಗಿ ಈ ಲಾಡು-ಕುಮಾರಸ್ವಾಮಿ ಸೇರಿ ಶರೀಫನಿಗೆ ಗಾಳ ಹಾಕಿ ಮೂರುವರೆ ಕೋಟಿ ರೂ. ವಿಶೇಷ ಅನುದಾನ ರಾಧಿಕಾಗೆ ತಲುಪುವಂತೆ ಮಾಡಿದ್ದಾರೆ.

ಐಟಿ ದಾಳಿ ಆದಾಗ ರಾಧಿಕಾ ಮನೆಯಲ್ಲಿ ಸಿಕ್ಕ ದಾಖಲೆಗಳಲ್ಲಿ ಶರೀಫನ ಹೆಸರು ಪತ್ತೆಯಾಗಿದೆ. ಸದಾಶಿವನಗರದ ಬಂಗಲೆ ಬೆಲೆಯನ್ನು ಹದಿಮೂರು ಕೋಟಿಯಿಂದ ಕೇವಲ ಮೂರುವರೆ ಕೋಟಿಗಿಳಿಸಿ ಸ್ಟಾಂಪ್ ಡ್ಯೂಟಿ, ಮನೆ ಮಾಲೀಕರಿಗೆ ಹಣ ಪಾವತಿಗಳನ್ನೆಲ್ಲಾ ರಾಧಿಕಾ ಪೂರೈಸಿದ್ದು ಈ ಶರೀಫ ಕೊಟ್ಟಿದ್ದ ಚೆಕ್ ಮೂಲಕವೇ!

ಕೊನೆಯದಾಗಿ ನಟ ರಾಧಿಕಾಳ ಪೋಷಕರಾದ ಈ ಲಾಡು ಹಾಗೂ ಕುಮಾರಸ್ವಾಮಿಯ ಗೆಣೇಕಾರ ಶರೀಫ್ ಇಷ್ಟು ಹಣ ಕೊಟ್ಟಿದ್ದಕ್ಕೂ ಕಾರಣಗಳಿವೆ.

ಏರ್‌ಪೋರ್ಟ್ ರೋಡಿನಲ್ಲಿರುವ ಶರೀಫನ ಬೃಹತ್ ಡೈಮಂಡ್ ಡಿಸ್ಟ್ರಿಕ್ಟ್ ಕಟ್ಟಡ ಒಂದು ಅಕ್ರಮ ನಿರ್ಮಾಣ. ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ನೀತಿ ನಿಯಮಗಳನ್ನು ಉಲ್ಲಂಘಿಸಿ ನಿರ್ಮಿಸಲಾಗಿರುವ ಕಟ್ಟಡ ಅದು. ಜೊತೆಗೆ ಈ ಶರೀಫ ನಗರದ ಸುತ್ತಮುತ್ತಾ ಗ್ರೀನ್‌ಬೆಲ್ಟ್ ಹಾಗೂ ಮತ್ತಿತರ ನಿರ್ಬಂಧಗಳಿರುವ ಪ್ರದೇಶಗಳಲ್ಲಿ ಬೇಕಾದಷ್ಟು ಎಕರೆ ಜಮೀನು ಖರೀದಿಸಿ ಅಭಿವೃದ್ಧಿ ಪಡಿಸಿಟ್ಟಿದ್ದಾನೆ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಅಕ್ರಮ ಕಟ್ಟಡಗಳನ್ನು ಎಬ್ಬಿಸಿ ಬಿಟ್ಟಿದ್ದಾನೆ. ಇವುಗಳ ಜೊತೆಗೇ ನೂರಾರು ಕೋಟಿಗಳಷ್ಟಿದೆ. India Builders ಎಂಬ ಹೆಸರಿನ ಕಂಪನಿ ಮೂಲಕ ಈ ಕಾನೂನುಬಾಹಿರ ಭೂಕಬಳಿಕೆ ನಡೆದಿದೆ.

ಶರೀಫನೇ ಈ ಇಂಡಿಯಾ ಬಿಲ್ಡರ್ಸ್‌ನ ಮಾಲೀಕ.

ತನ್ನ ಅಕ್ರಮ ಭೂ ಕಬಳಿಕೆ ಹಾಗೂ ರಿಯಲ್ ಎಸ್ಟೇಟ್ ವ್ಯವಹಾರಗಳನ್ನು ಬೇಗನೆ ಕಾನೂನು ಬದ್ಧಗೊಳಿಸಿಕೊಳ್ಳಬೇಕೆಂದು ಚಡಪಡಿಸುತ್ತಿದ್ದ ಶರೀಫ್ ನೇರ ಹೋಗಿ ಲಾಡನ್ನು ಕೇಳಿಕೊಂಡಿದ್ದಾನೆ. ಈ ಲಾಡು ಶರೀಫನನ್ನು ಮುದ್ದೆ ಸೊಪ್ಪು ಸಾರಿನ ಬಳಿ ಕರೆದೊಯ್ದಿದೆ, ಪಾಪ ನಾಯಕ ಕುಮಾರಸ್ವಾಮಿಗೆ ನಿರಾಶ್ರಿತಳಾಗಿ ಬೀದಿಯಲ್ಲಿ ನಿಂತಿದ್ದ ಬೋಂಡಾ ಕಬಾಬ್ ನಟಿಯ ಚಿಂತೆ.

ಆವತ್ತೇ ಶರೀಫ "ನಿಮ್ಗುಕೆ ಪರೇಶಾನ್ ಬಿಡಿ," ಎಂದವನೇ ಅವರ ಸಮ್ಮುಖದಲ್ಲೇ ನಟ ರಾಧಿಕಾಳ ಹೆಸರಿಗೆ ಮೂರೂವರೆ ಕೋಟಿಗೆ ಒಂದು ಚೆಕ್ ಬರೆದು ಕೊಟ್ಟಿದ್ದಾನೆ. ನಂತರ ಅದು ರಾಧಿಕಾ ಕೈಗೆ ತಲುಪಿ ಬಂಗಲೆ ಡೀಲ್‌ಗೆ ಖರ್ಚಾಯಿತು.

ಅಂದಹಾಗೆ ಈ ಶರೀಫ ಕೊಟ್ಟಿದ್ದ ಚೆಕ್ ಇಂಡಿಯಾ ಬಿಲ್ಡರ್ಸ್ ಕಂಪನಿಯದ್ದು, ಅದನ್ನಿಟ್ಟುಕೊಂಡೇ ಇವತ್ತು ಐಟಿ ಅಧಿಕಾರಿಗಳು ರಾಧಿಕಾಗೆ "ನಿಂಗೂ ಇಂಡ್ಯಾ ಬಿಲ್ಡರ್ಸ್‌ಗೂ ಏನು ಸಂಬಂಧ? ಅವರ್‍ಯಾಕೆ ನಿನಗೆ ಹಣ ಕೊಟ್ಟರು" ಎಂದು ತನಿಖೆ





ಮಾಡುತ್ತಿದ್ದಾರೆ. ಮತ್ತೂ ಕೊನೆಯದಾಗಿ ಇನ್ನೊಂದು ಬೇರೆ ವಿಚಾರ ಏನೆಂದರೆ ಕರ್ನಾಟಕದ ಯುವ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯನ್ನು ಅವರ ಪಿತಾಶ್ರೀ ದೇವೇಗೌಡರು, ಮಾತೋಶ್ರೀ ಚೆನ್ನಮ್ಮನವರು ಹಾಗೂ ಧರ್ಮಪತ್ನಿ ಶ್ರೀಮತಿ ಅನಿತಾ ಕುಮಾರಸ್ವಾಮಿಯವರು ಕೇದಿಕೊಂಡು ಮೊನ್ನೆ ಮಧುರೈಗೆ ಮೀನಾಕ್ಷಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿದ್ದರಂತೆ.

ಅಲ್ಲೊಂದು ವಿಶೇಷ ಪೂಜೆಯೂ ನಡೆಯಿತು. ಇನ್ನು ಮೇಲಾದರೂ ಕುಮಾರಸ್ವಾಮಿಯವರು ಲಾಡು, ಬಾದಾಮಿ, ಬೋಂಡಾ, ಕಬಾಬ್‌ಗಳ ವ್ಯಾಮೋಹ ಬಿಟ್ಟು ನೆಟ್ಟಗಿರಲಿ ಎಂದು ಮಾಡಿದ ವಿಶೇಷ ಪೂಜೆ ಅಂತೆ ಅದು.

–ಶೀನ

ಭಾರತದ ಐದನೇ ಅತಿದೊಡ್ಡ ಶ್ರೀಮಂತ ಪತ್ತೆಯಾದ

ಇವನ್ನು ಒಂದು ಅಚಾತುರ್ಯ ಎನ್ನಬೇಕೋ, ತೆರಿಗೆ ಅಧಿಕಾರಿಗಳ ಬೇಜವಾಬ್ದಾರಿತನ ಎನ್ನಬೇಕೋ ಅಥವಾ ಭಾರತದ ಪ್ರಜಾತಂತ್ರದ ಅಸಲಿ ಮುಖ ಇರೋದೇ ಹೀಗೆ ಎನ್ನಬೇಕೋ ನೀವೇ ತೀರ್ಮಾನ ಮಾಡಿ. ಅಂತೂ ಇದುವರೆಗೂ ಯಾರಿಗೂ ಗೊತ್ತಿರದ, ಕಡೇಪಕ್ಷ ಆದಾಯ ತೆರಿಗೆ ಇಲಾಖೆಗೂ ತಿಳಿದಿರದ ಭಾರತದ ಐದನೇ ಅತಿದೊಡ್ಡ ಶ್ರೀಮಂತನ ಅವಿಷ್ಕಾರ ವಂತೂ ಆಗಿದೆ.

ಅವನ ಹೆಸರು ಹಸನ್ ಅಲಿಖಾನ್. ಮೂಲತಃ ಹೈದರಾಬಾದಿನವನಾದರೂ ಅವನ ಅಡ್ಡೆ ಮಾತ್ರ ಪುಣೆ. ಅವನ ಆಸ್ತಿ ಎಷ್ಟು ಗೊತ್ತೆ? ಸುಮಾರು 35 ಸಾವಿರ ಕೋಟಿ ರೂಪಾಯಿಗಳು! ಅಂದರೆ ಭಾರತದ ದೊಡ್ಡ ದೊಡ್ಡ ಉದ್ಯಮಿಪತಿಗಳಾದ ಲಕ್ಷ್ಮಿ ಮಿತ್ತಲ್, ರಿಲಿಯನ್ಸ್‌ನ ಮುಕೇಶ್ ಅಂಬಾನಿ, ಅನಿಲ್ ಅಂಬಾನಿ ಮತ್ತು ವಿಪ್ರೋದ ಅಜೀಮ್ ಪ್ರೇಮ್‌ಜಿಯ ನಂತರದ ಐದನೇ ದೊಡ್ಡ ಶ್ರೀಮಂತ! DLFನ ಕೆ.ಪಿ.ಸಿಂಗ್, ಇನ್‌ಫೋಸಿಸ್‌ನ ನಾರಾಯಣಮೂರ್ತಿ, ಟಾಟಾ, ಬಿರ್ಲಾನಂತಹ ಕುಳಗಳದ್ದೆಲ್ಲ ನಂತರದ ಸ್ಥಾನ.

ಇಂತಹ ಒಂದು ಭಾರಿ ಕುಳ. ಇಷ್ಟು ವರ್ಷಗಳ ಕಾಲ ಜನಸಾಮಾನ್ಯರಿಗೆ ಮತ್ತು ಮಾಧ್ಯಮದವರಿಗೆ ಕಾಣದಂತೆ ನಮ್ಮೊಳಗೆಯೇ ಅವಿತು ಕುಳಿತಿದ್ದಾನೆ ಎಂದರೆ ಅಷ್ಟೇನೂ ಸೋಜಿಗವಲ್ಲವೇನೋ. ಆದರೆ ಸಣ್ಣಪುಟ್ಟ ಬೀಡಿ, ಕಡ್ಡಿಪೆಟ್ಟಿಗೆ ಮಾರುವವರನ್ನೂ ಟ್ಯಾಕ್ಸ್ ಕೊಡಿ ಅಂತ ಗೋಳು ಹೊಯ್ದುಕೊಳ್ಳುವ, ಅಲ್ಲೊಂದು-ಇಲ್ಲೊಂದು ರೇಡ್ ಮಾಡಿ ಉತ್ತರ ಕುಮಾರನ ಪೌರುಷ ಕೊಚ್ಚಿಕೊಳ್ಳುವ ಆದಾಯ ತೆರಿಗೆ ಇಲಾಖೆಯ ಕಣ್ಣಿಗೂ ಬೀಳದಂತೆ ಇದ್ದ ಅಂದ್ರೆ?

ಕುಮಿಷನ್ನು ತಿನ್ನುವ ವಿಚಾರದಲ್ಲಿ ಏನು ಜಗಳ ಬಂತೋ ಗೊತ್ತಿಲ್ಲ. ಮೊನ್ನೆಯಷ್ಟೇ ಅವನ ಪುಣೆಯ ಭವ್ಯ ಬಂಗಲೆಯ ಮೇಲೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ದಾಳಿ ಮಾಡಿ ಅವನ ಆಸ್ತಿಪಾಸ್ತಿಯ ವಿವರಗಳನ್ನು ಹೊರಗೆಡವಿದ್ದಾರೆ. ಅವನು ಪುಣೆಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಸೇರಿಕೊಂಡಿದ್ದಾಗಲೇ ಈ ದಾಳಿ ನಡೆದಿದೆ. ಈ ದಾಳಿ ನಡೆಯುವ ತನಕ ಭಾರತದಲ್ಲಿ



ಹಸನ್ ಅಲಿಖಾನ್

ಇಂತಹ ಶ್ರೀಮಂತ ಇದ್ದಾನೆ ಅಂತ ಗೊತ್ತೆ ಇರಲಿಲ್ಲ.

ಅಂದಮಾತ್ರಕ್ಕೆ ಅವನು ಯಾರ ಸಂಪರ್ಕಕ್ಕೂ ಬಾರದಂತೆ, ಯಾವ ಬಿಜಿನೆಸ್ಸನ್ನೂ ಮಾಡದೇ ಏಕಾಂಗಿಯಾಗಿ ತಪಸ್ಸು ಮಾಡ್ತಾ ಕುಳಿತಿದ್ದ ಎಂದೇನೂ ಅಲ್ಲ. ಅವನು ಪುಣೆಯ ರೇಸ್‌ಕೋರ್ಸ್ ವಲಯದಲ್ಲಿ ಎಲ್ಲರೂ ಗುರುತಿಸಬಹುದಾದ ಚಿರಪರಿಚಿತ ವ್ಯಕ್ತಿ. ರೇಸ್‌ನಲ್ಲಿ ಓಡಿಸುವ ಕುದುರೆಗಳನ್ನು ಸಪ್ಲೈ ಮಾಡುವುದು ಈತನೇ. ಅಂತಹ ಕುದುರೆಗಳ ತಳಿಗಳನ್ನು ಬೆಳೆಸುವ ದೊಡ್ಡ ಫಾರ್ಮೇ ಇವನ ಹತ್ತಿರ ಇದೆ. ಹಾಗಾಗಿಯೇ ದೊಡ್ಡ ದೊಡ್ಡ ಉದ್ದಿಮೆಪತಿಗಳ ಹಾಗೂ ರಾಜಕಾರಣಿಗಳ ನಿರಂತರ ಸಂಪರ್ಕದಲ್ಲೂ ಈತ ಇರುತ್ತಿದ್ದ. ಹೀಗಿದ್ದಾಗ್ಯೂ ಕಾಣಿಸದೇ ಇದ್ದುದ್ದು ಕೇವಲ ಆದಾಯ ತೆರಿಗೆ ಇಲಾಖೆಗೆ ಮಾತ್ರ ಎಂದರೆ ಇದನ್ನು 'ಜಾಣ ಕುರುಡು' ಅನ್ನದೆ ಮತ್ತೇನೆನ್ನಬೇಕು?

[illegible]

ಹಸನ್ ಅಲಿಖಾನ್‌ಗೆ ಕೇವಲ ಕುದುರೆ ಫಾರ್ಮು ಮಾತ್ರ ಅಲ್ಲ, ಬೆಂಗಳೂರು, ಹೈದರಾಬಾದ್, ಪುಣೆ ಮತ್ತು ಮುಂಬಯಿಗಳನ್ನೂ ಒಳಗೊಂಡಂತೆ ದೇಶದ ವಿವಿಧ ಕಡೆ ಭಾರಿ ಪ್ರಮಾಣದ ಆಸ್ತಿ ಇದೆ. ಸ್ವಿಸ್ ಬ್ಯಾಂಕ್‌ನಲ್ಲಿ ಸುಮಾರು 8 ಬೇನಾಮಿ ಖಾತೆಗಳಿವೆ. ಅವುಗಳೆಲ್ಲವುಗಳ ಮೊತ್ತ ಸುಮಾರು 35 ಸಾವಿರ ಕೋಟಿ ರೂಪಾಯಿಗಳಷ್ಟಾಗಬಹುದು. ಕೇವಲ ಕುದುರೆ ವ್ಯಾಪಾರ ಮಾಡುವವನಿಗೆ ಇಷ್ಟೊಂದು ದೊಡ್ಡ ಮೊತ್ತದ ಹಣ ಗಳಿಸಲು ಸಾಧ್ಯವೆ? ಖಂಡಿತಾ ಇಲ್ಲ. ಈ ಬಗ್ಗೆ ತನಿಖೆ ನಡೆಯುತ್ತಾ ಹೋದಂತೆ ಅದು ಮುಂಬೈ ಷೇರು ಮಾರುಕಟ್ಟೆಯ ಹವಾಲ ಹಗರಣಕ್ಕೆ ಬಂದು ನಿಲ್ಲುತ್ತದೆ. ಈ ಹಗರಣದಲ್ಲಿ ಈತ ಭಾರಿ ಮೊತ್ತದ ಹಣವನ್ನು ಕಾನೂನುಬಾಹಿರವಾಗಿ ಲಪಟಾಯಿಸಿದ್ದ. ಅದನ್ನು ಸ್ವಿಸ್ ಬ್ಯಾಂಕಿನಲ್ಲಿಟ್ಟು ಭದ್ರಗೊಳಿಸಿದ್ದ ನಂತರದ ದಿನಗಳಲ್ಲಿ ತೆರಿಗೆಯನ್ನು ಕದಿಯುವ ದೃಷ್ಟಿಯಿಂದ ತೆರಿಗೆ ರಿಯಾಯಿತಿ ಇರುವ ದೇಶಗಳ ಕಂಪೆನಿಗಳ ಮೂಲಕ ಮತ್ತೆ ಭಾರತದ ಷೇರು ಮಾರುಕಟ್ಟೆಯಲ್ಲಿ ಹೂಡುತ್ತಿದ್ದ. ಹೀಗೆ ಮಾಡುತ್ತಲೇ ಅವನ ಆಸ್ತಿ ಕಳೆದ ಕೆಲವು ವರ್ಷಗಳಲ್ಲಿ 35,000 ಕೋಟಿ ರೂಪಾಯಿಗಳಿಗೆ ಬೆಳೆದು ನಿಂತಿತು.

ನಿದ್ದೆಯಿಂದ ಈಗ ಕಣ್ಣೊರೆಸುತ್ತಾ ಎಚ್ಚೆತ್ತು ಕೊಂಡಿರುವ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳು ಭಾರತದ ಹಣ ಕಾನೂನುಬಾಹಿರವಾಗಿ ಸ್ವಿಸ್ [illegible] ಎಂದು ಕಸಿವಿಸಿಗೊಂಡವರಂತೆ ಒದ್ದಾಡುತ್ತಿದ್ದಾರೆ. ಸ್ವಿಟ್ಜರ್‌ಲ್ಯಾಂಡ್ ಸರ್ಕಾರಕ್ಕೆ ಸೂಕ್ತ ದಾಖಲೆಗಳನ್ನು ಒದಗಿಸಿ ಆತನ ಖಾತೆಯ ಬಗ್ಗೆ ಮತ್ತಷ್ಟು ಮಾಹಿತಿ ಪಡೆಯಲು ಒಂದು ತಂಡ ರಚಿಸಿಕೊಂಡು ಹೋಗಿದ್ದಾರೆ. ಅಲ್ಲಿ ಏನು ಕಡಿದು ಬರುತ್ತಾರೋ ನೋಡಬೇಕು.

ಇತ್ತ ಈತನ ಸುತ್ತ ತನಿಖೆ ಕೈಗೊಂಡಿರುವ ಅಧಿಕಾರಿಗಳು ಅವನಿಂದ ಕೆಲ ಮಾಹಿತಿಗಳನ್ನು ಹೊರಗೆಳೆಯುತ್ತಿದ್ದಾರೆ. ತನಿಖೆ ವೇಳೆಯಲ್ಲಿ ಅವನು ಕೊಲ್ಕತ್ತಾದ ದೊಡ್ಡ ಉದ್ಯಮಿ ಮತ್ತು ಮಹಾರಾಷ್ಟ್ರದ ಕೆಲವು ರಾಜಕಾರಣಿಗಳು ತನ್ನೊಂದಿಗೆ ಶಾಮೀಲಾಗಿರುವುದನ್ನು ಬಾಯ್ಬಿಟ್ಟಿದ್ದಾನೆ. ಆದರೆ ತನಿಖಾಧಿಕಾರಿಗಳು ಮಾತ್ರ ಅವರ ಹೆಸರುಗಳನ್ನು ಬಹಿರಂಗಗೊಳಿಸಿಲ್ಲ. ಇಂತಹ ಒಂದು ಕುಳ ಪತ್ತೆಯಾಗಿರುವುದು. ಪಾರ್ಲಿಮೆಂಟಿಗೂ ಬಿಸಿ ಮುಟ್ಟಿಸಿದೆ. ಮೊನ್ನೆ ಸದನ ನಡೆಯುತ್ತಿರುವಾಗ ವಿರೋಧ ಪಕ್ಷದವರು ಗದ್ದಲ ಎಬ್ಬಿಸಿ ಹಸನ್ ಅಲಿಖಾನ್ ತನಿಖೆಯ ವೇಳೆಯಲ್ಲಿ ಬಾಯ್ಬಿಟ್ಟಿರುವ ರಾಜಕಾರಣಿಗಳ ಮತ್ತು ಉದ್ಯಮಿಗಳ ಹೆಸರುಗಳನ್ನು ಬಹಿರಂಗಪಡಿಸಬೇಕೆಂದು ಪಟ್ಟು ಹಿಡಿದಿದ್ದಾರೆ. ಎಲ್ಲರೂ ಸೇರಿ ಏನು ಕಡಿದು, ಕೆತ್ತಿ ತುಂಬುತ್ತಾರೋ ಕಾದು ನೋಡಬೇಕು.

ಏಕೆಂದರೆ, ಇಲ್ಲಿ ನಡೀತಾ ಬಂದಿರೋದೇ ಹೀಗೆ. ಎಲ್ಲಿಯತನಕ ಪುಷ್ಕಳವಾಗಿ ಮೇಯಲು ಅವಕಾಶವಿರುತ್ತೋ ಅಲ್ಲಿಯ ತನಕ ಮೇಯುತ್ತಾ, ಮೈಕೈ ಹೊಲಸು ಮಾಡಿಕೊಳ್ಳುತ್ತಾ ಕುಳಿತಿರುತ್ತಾರೆ. ನಮ್ಮ ಅಧಿಕಾರಿಗಳು ಅದರ ಜೊತೆಗೆ ತಾವಿನ್ನೂ ಜೀವಂತವಾಗಿದ್ದೇವೆಂದು ತೋರಿಸಿಕೊಳ್ಳಲು ಆಗೊಂದು-ಈಗೊಂದು ರೇಡ್ ಮಾಡುವ ನಾಟಕವಾಡುತ್ತಿರುತ್ತಾರೆ. ಇದನ್ನು ಬಿಟ್ಟು ಅವರು ಮಾಡುವುದೇನೆಂದರೆ, ಸಣ್ಣಪುಟ್ಟ ಅಂಗಡಿ ಹಾಕಿಕೊಂಡು ಜೀವನ ನಡೆಸುವ ಅಮಾಯಕರನ್ನು ಟ್ಯಾಕ್ಸ್ ಕೊಡಿ ಅಂತ ಜೀವ ಹಿಂಡುವುದು, ತಮಗೆ ಮೇವು ಸರಿಯಾಗಿ ಸಿಗಲಿಲ್ಲ ಎಂದಾಕ್ಷಣ ಇಂತಹ ದೊಡ್ಡ ಕುಳಕ್ಕೆ ಕೈ ಹಾಕುವುದು. ಹಸನ್ ಅಲಿಖಾನ್ ವಿಚಾರದಲ್ಲಿ ಆಗಿರುವುದೂ ಇದೆ. ●

ನಗ್ನ ಮುನಿ ಸುತ್ತ ವಿವಾದ

(10ನೇ ಪುಟದಿಂದ)


ಬಹಳ ತಣ್ಣಗೆ ನಿರ್ವಹಿಸಿದ ಸೀತಾರಾಂ ದಂಪತಿಗಳು ಜಾಮೀನು ಪಡೆದುಕೊಂಡು ಹೊರಬರುವ ಹೊತ್ತಿಗೆ ಸಾಗರದ ಪೊಲೀಸರು ಮತ್ತೆ ಬಂಧಿಸಿದರು. ಸಾಗರದ ಜೈನಧರ್ಮೀಯರೊಬ್ಬರು ರಾಜವರ್ಮ ಬಲ್ಲಾಳ್ ನೀಡಿದಂಥದ್ದೇ ಒಂದು ದೂರನ್ನು ನ್ಯಾಯಾಲಯದಲ್ಲಿ ಖಾಸಗಿ ದೂರನ್ನಾಗಿ ದಾಖಲಿಸಿದ್ದರಂತೆ. ನ್ಯಾಯಾಲಯ ಸಹಜವಾಗಿಯೇ ವಾರೆಂಟ್ ಜಾರಿ ಮಾಡಿತ್ತು.

ಸ್ವಸ್ಥ ಸಮಾಜದ ಕುರಿತು ಕಾಳಜಿ ಇರುವ, ಅಪಾಥಭೂತಿತನವನ್ನು ಪ್ರಶ್ನಿಸುವ ಯಾರು ಬೇಕಾದರೂ ಬರೆಯಬಹುದಾಗಿದ್ದ ಲೇಖನವೊಂದನ್ನು ಮುಂದಿಟ್ಟುಕೊಂಡು ಸೀತಾರಾಂ ಅವರ ವಿರುದ್ಧ ಆರಂಭವಾಗಿರುವ ವಿಚ್ ಹಂಟಿಂಗ್‌ನ ಹಿಂದೆ ಒಂದು ವ್ಯವಸ್ಥಿತ ಸಂಚಿದೆ. ಈ ಸಂಚಿನ ಸೂತ್ರಧಾರಿ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರಾಗಿದ್ದರೆ ಬೆಂಬಲವಾಗಿ ನಿಂತಿರುವುದು ಕರ್ನಾಟಕದ ಕಾವಿ ಪಡೆ.

ಕರಾವಳಿ ಜಿಲ್ಲೆಗಳನ್ನು ಕರ್ನಾಟಕದ ಗುಜರಾತ್ ಆಗಿ ಪರಿವರ್ತಿಸುವ ಸಂಘ ಪರಿವಾರದ ಕನಸಿಗೆ ಅಡ್ಡಿಯಾಗಿರುವ ದಕ್ಷಿಣ ಕನ್ನಡದ ಬೆರಳೆಣಿಕೆಯ ಪತ್ರಿಕೋದ್ಯಮಿಗಳಲ್ಲಿ ಸೀತಾರಾಂ ಕೂಡಾ ಒಬ್ಬರು. ಸೀತಾರಾಂ ಅವರ ದೊಡ್ಡ ಸಮಸ್ಯೆಯೆಂದರೆ ಅವರ ನಿಲುವುಗಳು ನಿರಂತರವಾಗಿ ಬದಲಾಗುತ್ತಾ ಹೋಗುವುದು. ಒಂದು ವಿಷಯಕ್ಕೆ ಸಂಬಂಧಿಸಿ ದಕ್ಷಿಣ ಕನ್ನಡ ಜಿಲ್ಲೆಯ ಬಹುಸಂಖ್ಯಾತ ಪತ್ರಕರ್ತರಂತೆಯೇ ಕೋಮುವಾದಿ ನಿಲುವನ್ನು ತಳೆಯುತ್ತಿದ್ದ ಸೀತಾರಾಂ ಮತ್ತೊಂದು ವಿಷಯದಲ್ಲಿ ನೇರ ವಿರುದ್ಧವಾದ ನಿಲುವನ್ನು ತಳೆಯುತ್ತಿದ್ದರು. ಸೀತಾರಾಂ ಯಾವಾಗಲೂ ಆ ಕ್ಷಣದ ಸತ್ಯವನ್ನು ಇಟ್ಟುಕೊಂಡು ಒಂದು ನಿಲುವು ತಳೆಯುತ್ತಿದ್ದರು ಎನ್ನುವುದು ಹೆಚ್ಚು ಸರಿಯಾಗಬಹುದೇನೋ. ಸಂಘಿಗಳು ಕನ್ವಿನ್ಸಿಂಗ್ ಆಗುವಂಥ ಕಾರಣ ನೀಡಿದರೆ ತಕ್ಷಣ ಒಪ್ಪಿಕೊಳ್ಳುತ್ತಿದ್ದ ಸೀತಾರಾಂ ಆ ವಿಷಯದ ಹೊಸ ಆಯಾಮ ತಿಳಿದರೆ ತಕ್ಷಣ ಅದನ್ನೂ ಬರೆಯುತ್ತಿದ್ದರು.

ಜೈನ ಸನ್ಯಾಸಿಗಳ ವಿಷಯದಲ್ಲೂ ಸೀತಾರಾಂ ಮಾಡಿದ್ದು ಹೀಗೆಯೇ. ಇದೇ ಅರ್ಥ ಬರುವಂಥ ಅನೇಕ ಪತ್ರಗಳು, ಬರಹಗಳು ರಾಜ್ಯದ ಇತರ ಅನೇಕ ಪತ್ರಿಕೆಗಳಲ್ಲಿಯೂ ಪ್ರಕಟವಾಗಿವೆ. ಈ ಬಗ್ಗೆ ಯಾವ ಕೇಸನ್ನೂ ತಲೆಕೆಡಿಸಿಕೊಂಡಿಲ್ಲ, ಸೀತಾರಾಂ ಅವರ ಸಂಸ್ಥೆಗಳು ಹೊರತರುತ್ತಿರುವ ಪತ್ರಿಕೆಗಳಲ್ಲಿ ಪ್ರಕಟವಾದ ತಕ್ಷಣ ದೂರು ನೀಡಿದ್ದೇಕೆ?

ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ದಕ್ಷಿಣ ಕನ್ನಡದಲ್ಲಿ ಪತ್ರಿಕೋದ್ಯಮದ ಸದ್ಯದ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ದಕ್ಷಿಣ ಕನ್ನಡದಲ್ಲಿ ಮಾಧ್ಯಮಗಳು ಯಾವುದನ್ನು ಬರೆಯಬಾರದು ಎಂಬ ಅಲಿಖಿತ ನಿಯಮಗಳಿವೆ. ಧರ್ಮಸ್ಥಳದ ಧಾರ್ಮಿಕ ಕೆಲಸಗಳ ಮರೆಯಲ್ಲಿ ಉಳಿದುಕೊಂಡಿರುವ ಜೀತ ಪದ್ಧತಿ, ಜಮೀನು ಕಬಳಿಕೆಗಳ ಬಗ್ಗೆ ಯಾರೂ ಯಾವ ಮಾಧ್ಯಮದಲ್ಲೂ ಬರೆಯಬಾರದು. ಮಣಿಪಾಲ ಸಮೂಹ ಸಂಸ್ಥೆಗಳು ನಡೆಸುವ ಅನಾಚಾರಗಳನ್ನು ಪ್ರಕಟಿಸಬಾರದು. ಸದಾ ಮುಸ್ಲಿಮರು ಮತ್ತು ಕ್ರೈಸ್ತರ ವಿರುದ್ಧ ಗುಟುರು ಹಾಕುತ್ತಾ ತಿರುಗಾಡುವ ಹಿಂದೂತ್ವವಾದೀ ಉಗ್ರರ ಸುದ್ದಿಗೆ ಹೋಗಬಾರದು ಮುಂತಾದವುಗಳೆಲ್ಲಾ ಈ ನಿಯಮಾವಳಿಗಳೊಳಗೆ ಬರುವಂಥ ವಿಚಾರಗಳು.



ಸೀತಾರಾಂ ಈ ನಿಯಮಗಳನ್ನು ಸದಾ ಮುರಿಯುತ್ತಾ ಬಂದವರು. ಕೆನರಾ ಟೈಂಸ್ ಆರಂಭಿಸಿದ ದಿನಗಳಿಂದಲೇ ಮಣಿಪಾಲ ಸಮೂಹ ಸಂಸ್ಥೆಗಳೊಳಗಿನ ಭಿನ್ನಮತವನ್ನು ಸುದ್ದಿಯಾಗಿಸಿದರು. ಮಣಿಪಾಲ ಸಮೂಹ ಸಂಸ್ಥೆಗಳು ಒಡೆದು ಎರಡು ಗುಂಪುಗಳಾಗುವ ಕ್ರಿಯೆಯ ಹಿನ್ನೆಲೆ ಮುನ್ನೆಲೆಗಳನ್ನು ಕರ್ನಾಟಕದ ಜನತೆಗೆ ತಿಳಿಸಿಕೊಟ್ಟದ್ದೇ ಸೀತಾರಾಂ ಅವರ ಸಂಸ್ಥೆ ಪ್ರಕಟಿಸುತ್ತಿರುವ ಪತ್ರಿಕೆಗಳು. ಇದಾದ ಮೇಲೆ ಮಣಿಪಾಲ ಗುಂಪು ಮಣಿಪಾಲದಲ್ಲಿ ನಡೆಸುತ್ತಲೇ ಬರುತ್ತಿರುವ ಭೂಕಬಳಿಕೆ, ಕಾರ್ಮಿಕರ ಶೋಷಣೆ, ವಿದ್ಯಾರ್ಥಿಗಳ ಶೋಷಣೆಗಳನ್ನು ಬಯಲಿಗೆಳೆದರು. ಮಣಿಪಾಲ ಪೈಗಳಿಗೆ ಸೇರಿದ ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕ್ ಮತ್ತು ಐಸಿಡಿಎಸ್‌ಗಳು ಠೇವಣಿದಾರರಿಗೆ ನಾಮ ಹಾಕಿದಾಗ ಬಡವರ ಧ್ವನಿಯಾದದ್ದೂ ಕರಾವಳಿ ಅಲೆ, ಕನ್ನಡ ಜನ ಅಂತರಂಗ ಮತ್ತು ಕೆನರಾ ಟೈಂಸ್‌ಗಳೇ.

ದಕ್ಷಿಣ ಕನ್ನಡಿಗರನ್ನು ಹೊರತು ಪಡಿಸಿದವರಿಗೆಲ್ಲಾ ಧರ್ಮಸ್ಥಳ ಎಂಬುದು ಧರ್ಮವೇ ನೆಲಸಿರುವ ಸ್ಥಳ. ಬೆಳ್ತಂಗಡಿ ತಾಲೂಕಿನಲ್ಲಿ ತುಂಡು ಭೂಮಿಯನ್ನು ಹೊಂದಿರುವವರೂ ಧರ್ಮಸ್ಥಳಕ್ಕೆ ಭಯ ಪಡುತ್ತಾರೆ. ಇದಕ್ಕೆ ಕಾರಣ ದೇವರಲ್ಲ, ನಮ್ಮ ತುಂಡು ಭೂಮಿಯ ಮೇಲೆ 'ತಮ್ಮಂದಿರ' ಕಣ್ಣು ಯಾವಾಗ ಬೀಳಬಹುದು ಎಂಬ ಭಯ. ಅವರ ಕಣ್ಣು ಬಿತ್ತೆಂದರೆ ಮುಗಿಯಿತು. ಅವರು ಕೊಟ್ಟಷ್ಟು ಹಣವನ್ನು ಪ್ರಸಾದವೆಂದು ಸ್ವೀಕರಿಸಿ ಭೂಮಿಯನ್ನು ಬಿಟ್ಟುಕೊಡುವುದೊಂದೇ ಮಾರ್ಗ. ತೆರೆಮರೆಯ ಜೀತ ಪದ್ಧತಿಯ ವಿಷಯವನ್ನು ಚರ್ಚಿಸಿ ಫಲವಿಲ್ಲ. ಈ ಎಲ್ಲವನ್ನೂ ಸುದ್ದಿಯೆಂಬಂತೆ ಜನರ ಮುಂದಿಡಲು ಪ್ರಯತ್ನಿಸಿದ್ದು ಸೀತಾರಾಂ ಅವರು ನಡೆಸುತ್ತಿರುವ ಪತ್ರಿಕೆಗಳು ಮಾತ್ರ.

ಕೋಮುವಾದಿಗಳಿಗೆ ಸಂಬಂಧಿಸಿದ ವಿಷಯವೂ ಅಷ್ಟೇ. ವಿರಾಟ್ ಹಿಂದೂ ಸಮಾವೇಶದಲ್ಲಿ ಕೆಳಜಾತಿಯವರನ್ನು ಕಡೆಗಣಿಸಲಾಗುತ್ತಿದೆ ಎಂಬುದನ್ನು ಪ್ರತಿಭಟಿಸಿ ಕೊಲ್ಯದ ಸ್ವಾಮೀಜಿ ವೇದಿಕೆ ಬಿಟ್ಟು ಕೆಳಗಿಳಿದಿದ್ದನ್ನು ಬಾಕ್ಸ್ ಐಟಂ ಮಾಡಿ ಪ್ರಕಟಿಸಿದ್ದೂ ಸೀತಾರಾಂ ಅವರ ಸಂಸ್ಥೆಯ ಪತ್ರಿಕೆಗಳೇ.

ಜಿಲ್ಲಾ ಉಸ್ತುವಾರಿ ಸಚಿವ ನಾಗರಾಜ ಶೆಟ್ಟಿಯ 'ಮೋದಿ ತನ', ಬಿಜೆಪಿಯೊಳಗಿನ ಬ್ರಾಹ್ಮಣ ವರ್ಸಸ್ ಶೂದ್ರ ಜಗಳಗಳು, ಭಜರಂಗದಳದ ಒಡಕು, ಶ್ರೀರಾಮ ಸೇನೆಯ ಬಿಜೆಪಿ ಟೀಕೆಗಳೆಲ್ಲವೂ ಬೆಳಕು ಕಂಡದ್ದೂ ಕರಾವಳಿ ಅಲೆಯಲ್ಲೇ. ಎಲ್ಲಾ ಶತ್ರುಗಳೂ ಈಗ ಒಂದಾಗಿ ಸೀತಾರಾಂ ಮೇಲೆ ಮುಗಿಬಿದ್ದಿದ್ದಾರೆ. ಸ್ವಭಾವತಃ ಕೋಮುವಾದಿಗಳೇ ಆಗಿಬಿಟ್ಟಿರುವ ಪೊಲೀಸರೂ ಸೀತಾರಾಂರನ್ನು ಮಟ್ಟ ಹಾಕಲು ಕಾಯುತ್ತಿದ್ದರು. ಅವಕಾಶವನ್ನು ಅವರು 'ಸದುಪಯೋಗ' ಪಡಿಸಿಕೊಳ್ಳುತ್ತಿದ್ದಾರೆ.

ಇಷ್ಟಕ್ಕೂ ದಕ್ಷಿಣ ಕನ್ನಡದ ಪತ್ರಕರ್ತರಿಗೆ ಏನಾಗಿದೆ?

ತಾತ್ವಿಕ ಕಾರಣಗಳನ್ನು ಬದಿಗಿಟ್ಟು ನೋಡಿದರೂ ಕನಿಷ್ಠ ಪತ್ರಕರ್ತನೆಂಬ ನೆಲೆಯಲ್ಲಾದರೂ ಸೀತಾರಾಂ ಬೆಂಬಲಕ್ಕೆ ಇವರೆಲ್ಲಾ ನಿಲ್ಲಬೇಕಿತ್ತಲ್ಲವೇ?

ಈ ಪ್ರಶ್ನೆಯನ್ನು ಪತ್ರಕರ್ತರ ಸಂಘದ ಪದಾಧಿಕಾರಿಗಳ ಮುಂದಿಟ್ಟರೆ ಅವರು ವಿಚಿತ್ರ ಉತ್ತರಗಳನ್ನು ಕೊಡುತ್ತಾರೆ. 'ಈ ಹಿಂದೆ ಪೊಲೀಸನೊಬ್ಬ 'ಕರಾವಳಿ ಅಲೆ' ವರದಿಗಾರನೊಂದಿಗೆ ಕೆಟ್ಟದಾಗಿ ನಡೆದುಕೊಂಡಾಗ ನಾವು ಪ್ರತಿಭಟಿಸಿದ್ದೆವು. ಆದರೆ ಸೀತಾರಾಂ ತಮ್ಮ ಅಂಕಣದಲ್ಲಿ ನಮ್ಮ ಪ್ರತಿಭಟನೆ ಸಾಕಾಗಲಿಲ್ಲ ಎಂದೆಲ್ಲಾ ಬರೆದರು. ಈಗಲೂ ಹಾಗೆ ಬರೆಯುತ್ತಾರೋ ಏನೋ? ಹಾಗಾಗಿ ನಾವು ಅವರ ಸುದ್ದಿಯನ್ನೇ ಬಿಟ್ಟು ಬಿಟ್ಟಿದ್ದೇವೆ'.

ಪತ್ರಕರ್ತರ ಸಂಘದಿಂದ ಯಾವ ಪ್ರಯೋಜನವೂ ಇಲ್ಲ ಎಂದು ಅರ್ಥವಾಗಿರುವ ಕೆಲವು ಬದ್ಧತೆ ಇರುವ ಪತ್ರಕರ್ತರು ತಮ್ಮ ತಮ್ಮ ಪತ್ರಿಕೆಗಳಲ್ಲಿ ತಮಗಿರುವ ಅವಕಾಶವನ್ನು ಬಳಸಿಕೊಂಡು ವರದಿಗಳನ್ನು ಬರೆಯುತ್ತಿದ್ದಾರೆ. ಡೆಕ್ಕನ್ ಹೆರಾಲ್ಡ್, ದ ಹಿಂದೂ ಮತ್ತು ವಾರ್ತಾಭಾರತಿ ಪತ್ರಿಕೆಗಳು ಮತ್ತು ಟಿವಿ 9 ಚಾನೆಲ್ ಮಾತ್ರ ಸೀತಾರಾಂ ಬಂಧನದ ಸುದ್ದಿಯನ್ನು ಗಂಭೀರವಾಗಿ ಪರಿಗಣಿಸಿ ಪ್ರತಿಕ್ರಿಯಿಸುತ್ತಿವೆ. ಉಳಿದವರೆಲ್ಲಾ ಈಗ ಬೆತ್ತಲಾಗುತ್ತಿದ್ದಾರೆ.


ದಕ್ಷಿಣ ಕನ್ನಡದಲ್ಲಿ ಪಬ್ಲಿಕ್ ಸ್ಪೇಸ್ ಎಂಬುದು ಕೇವಲ ಕರಾವಳಿ ಅಲೆ, ವಾರ್ತಾ ಭಾರತಿ ಮತ್ತು ಇಂಗ್ಲಿಷ್ ಪತ್ರಿಕೆಗಳಲ್ಲಿ ಮಾತ್ರ ಉಳಿದುಕೊಂಡಿತ್ತು. ಇಂಗ್ಲಿಷ್ ಪತ್ರಿಕೆಗಳ ಪ್ರಭಾವ ಇಲ್ಲಿ ಕಡಿಮೆ. ಪ್ರಭಾವಶಾಲಿಯಾಗಿರುವುದು ಕರಾವಳಿ ಅಲೆ ಮತ್ತು ವಾರ್ತಾ ಭಾರತಿಗಳು ಮಾತ್ರ. 'ವಾರ್ತಾ ಭಾರತಿ'ಯನ್ನು ಮುಸ್ಲಿಂ ಪತ್ರಿಕೆ ಎಂಬ ಹಣೆಪಟ್ಟಿ ಹಚ್ಚಿ ಅದರ ತೊಂದರೆಯನ್ನು ನಿವಾರಿಸಿಕೊಳ್ಳುವಲ್ಲಿ ಕೋಮುವಾದಿಗಳು ಯಶಸ್ವಿಯಾಗಿದ್ದರು.


ಕರಾವಳಿ ಅಲೆಯನ್ನು ಇಂಥ ತಂತ್ರಗಳ ಮೂಲಕ ನಿವಾರಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಸೀತಾರಾಂ ಬ್ರಾಹ್ಮಣರು. ಈ ಹುಂಬ ಪತ್ರಿಕೋದ್ಯಮಿಯನ್ನು ಹೇಗಾದರೂ ಮಾಡಿ ನಿವಾರಿಸಿಕೊಳ್ಳಲು ಸಂಚು ಹೂಡುತ್ತಿದ್ದವರಿಗೆ ತಾತ್ಕಾಲಿಕ ಯಶಸ್ಸು ದೊರೆತಿದೆ.?

ಸೀತಾರಾಂ ಅವರ ಮೇಲೆ ದಾಖಲಿಸಲಾಗಿರುವ ಕೇಸುಗಳೆಲ್ಲಾ ಕೋಮುವಾದವನ್ನು ಪ್ರಚೋದಿಸುವವರ ವಿರುದ್ಧ ದಾಖಲಿಸಲಾಗುವ ಕೇಸುಗಳು. ಸೀತಾರಾಂ ಅವರ ಬರಹದಲ್ಲಿ ಇಂಥ ಯಾವ ಅಂಶವೂ ಇರಲಿಲ್ಲ. ಇತ್ತೀಚೆಗಷ್ಟೇ ಕೋಮು ಪ್ರಚೋದಕ ಭಾಷಣ ಮಾಡಿದ ಆರೋಪದನ್ವಯ ಕುಂಬಳೆ ಸುಂದರರಾವ್ ಅವರ ವಿರುದ್ಧ ದಾಖಲಿಸಲಾಗಿದ್ದ ಕೇಸನ್ನು ಕೋ.ಜಾ. ಸರಕಾರ ಹಿಂದೆಗೆದುಕೊಂಡಿದೆ.

ಈ ಹಿಂದೆ ಕೋಮು ಪ್ರಚೋದಕ ಬರವಣಿಗೆಗಾಗಿ ಉದಯವಾಣಿ, ತರಂಗದಂಥ ಪತ್ರಿಕೆಗಳಿಗೆ ಇಂಡಿಯನ್ ಪ್ರೆಸ್ ಕೌನ್ಸಿಲ್ ಛೀಮಾರಿ ಹಾಕಿದಾಗಲೂ ಅವುಗಳ ವಿರುದ್ಧ ಕೇಸು ದಾಖಲಿಸಿರಲಿಲ್ಲ, ಮುಸ್ಲಿಮರ ವಿರುದ್ಧ ವಿಷಕಾರುವ ಬರವಣಿಗೆಗಳನ್ನು ಪೊಲೀಸರ ಗಮನಕ್ಕೆ ಯಾರಾದರೂ ತಂದರೆ 'ಗಲಾಟೆಯೇನೂ ಆಗಿಲ್ಲವಲ್ಲ. ಗಲಾಟೆ ಆದರಷ್ಟೇ ಕೇಸು ದಾಖಲಿಸಲು ಸಾಧ್ಯ' ಎನ್ನುತ್ತಿದ್ದ ದಕ್ಷಿಣ ಕನ್ನಡ ಪೊಲೀಸ್ ವರಿಷ್ಠ ದಯಾನಂದ್ ಒಂದು ಪುಡಿ ದೂರನ್ನು ಪರಿಗಣಿಸಿ ಕಾನೂನಿನಂತೆ ಸಂಪಾದಕ, ಪ್ರಕಾಶಕ, ಮುದ್ರಕರಲ್ಲದ ದಂಪತಿಯನ್ನು ಬಂಧಿಸಿದ್ದೇಕೆ? ●

ಸುಂಕದಕಟ್ಟೆ ಡಬ್ಬಲ್ ಮರ್ಡರ್


ಮುಲಾಮ



ಮಚ್ಚ

ಆ ಹೊತ್ತಿಗಾಗಲೇ ಮಚ್ಚ ಮತ್ತು ಮುಲಾಮರ ಮಧ್ಯೆ ಸಣ್ಣ ವಿರಸವೊಂದು ಹೆಡೆಯೆತ್ತಿತ್ತು. ಅದಕ್ಕೆ ಮುಖ್ಯ ಕಾರಣ ತನ್ನ ಜೊತೆಗಿದ್ದೇ ಮುಲಾಮ ತನ್ನ ಎದುರಾಳಿ ಜೇಕೆಯ ಜೊತೆ ಕೈಜೋಡಿಸಿದ್ದನ್ನು ಮಚ್ಚ ಸಹಿಸದೇ ಹೋಗಿದ್ದು. ಹತ್ತಾರು ವರ್ಷಗಳ ಕಾಲ ಜಿದ್ದು ಸಾಧಿಸಿಕೊಂಡು ಬಂದಿದ್ದ ಜೇಕೆ ಮತ್ತು ಮುಲಾಮ ಇದ್ದಕ್ಕಿದ್ದಂತೆ ಕೈಜೋಡಿಸಿಬಿಟ್ಟಿದ್ದರು.

ಒಂದು ಡಬ್ಬಲ್ ...ರ್ಡರ್. ಜೊತೆಗೊಂದು ...ಫ್ ಮರ್ಡರ್ ಮತ್ತು ...ಕೆ, ಪ್ರತಿಯಾಗಿ ನಡೆದ ...ಕ್ಕೊಂದು ...ಲೆಯಿಂದಾಗಿ ಇಡೀ ...ಂಕದಕಟ್ಟೆಯೇ ...ಗುಟ್ಟಿ ಹೋಗಿತ್ತು. ...ದು ಮಚ್ಚ ಮತ್ತು ...ಲಾಮರ ನಡುವಿನ ...ಕರ ಕಾಳಗ. ಇಬ್ಬರೂ ...ಂಡ್ ...ಬುಗರೀಂದಾಗಿಯೇ ...ಟ್ಟಧಿಪತಿಗಳಾಗಿದ್ದರು. ...ಲೇ ದುಡ್ಡಿನಿಂದ ತಮ್ಮ ...ಸಗಿ ಪಡೆಗಳನ್ನು ...ಕುವುದು ಮತ್ತು ಅವುಗಳನ್ನು ಛೂ ಬಿಟ್ಟೇ ...ಂಡ್ ಡೀಲ್ ಮಾಡುವುದು ಅವರಿಬ್ಬರ ನಿತ್ಯ ...ಯಕವಾಗಿತ್ತು.

ಹೀಗಿರುವಾಗಲೇ ಸಣ್ಣದೊಂದು ಕಿಡಿ ಹತ್ತಿಕೊಂಡಿದ್ದು ...ದು 2003 ರ ಜುಲೈ ತಿಂಗಳು. ರಾತ್ರಿಯಿನ್ನೂ ...ಬತ್ತೂವರೆಯಾಗಿತ್ತು, ಸುಂಕದಕಟ್ಟೆಯ ಮುರ್ಡೇಶ್ವರ ...ಟೆಲಿನಲ್ಲಿ ಮಚ್ಚನ ಬಂಟರಾದ ಶಂಕ್ರ ಮತ್ತು ...ಯ್‌ಕುಮಾರ್ ಕುಡಿಯುತ್ತಾ ಕುಳಿತಿದ್ದರು. ಇನ್ನೆರಡು ...ಗಳೊಳಗೆ ಕುತ್ತು ಬಂದೆರಗಲಿದೆಯೆಂಬ ಕಿಂಚಿತ್ ...ವಾದರೂ ಅವರಿಗೆಲ್ಲಿತ್ತು?

ವಿಜಿ ಮತ್ತು ಶಂಕ್ರ ರೆಪ್ಪೆ ಬಡಿಯುವುದರೊಳಗೆ ...ಮತ್ತು ಮೂವತ್ತು ಮಂದಿ ಮುಲಾಮನ ಬಂಟರು ...ರ್ಡೇಶ್ವರ ಹೋಟೆಲಿನೊಳಕ್ಕೆ ನುಗ್ಗಿಬಿಟ್ಟರು. ಅವ...ರು ಅಂತ ಸುತ್ತಲಿನವರಿಗೆ ಗೊತ್ತಾಗುವ ಮೊದಲೇ ...ಳಿತಿದ್ದ ಶಂಕ್ರ ವಿಕಾರವಾಗಿ ಕಿರುಚಿಕೊಂಡ. ಅವನ ...ದುರಿಗೇ ಆತನಕ ಕುಡಿಯುತ್ತ ಕುಡಿಯುತ್ತ ಕುಳಿತಿದ್ದ ...ಜಯಕುಮಾರನ ಹೆಣ ಅದೇ ಟೇಬಲ್ಲಿನ ಕೆಳಗೆ ...ದ್ದಿತ್ತು. ಲೆಕ್ಕ ಹಾಕಿದರೆ ಕರಾರುವಾಕ್ಕಾಗಿ ಮೂವತ್ತು ... ವಿಜಯಕುಮಾರನನ್ನು ಮುಲಾ...ನ ಹುಡುಗರು ಕತ್ತರಿಸಿದ್ದರು. ...ಂಕದಕಟ್ಟೆಯ ಜನ ಏನಾಗುತ್ತಿದೆ ...ದು ನೋಡುವುದರೊಳಗಾಗಿ ...ಚಿಕೊಳ್ಳುತ್ತಿದ್ದ ಶಂಕ್ರನನ್ನು ...ಮತ್ತಾಗಿ ತಮ್ಮ ಕ್ವಾಲಿಸ್‌ಗೆ ...ಕ್ಕಿಕೊಂಡು ನಾಪತ್ತೆ ಯಾಗಿತ್ತು ...ಲಾಮನ ಗ್ಯಾಂಗ್.


ಕೊಲೆಯಾದ ಶಂಕ್ರ

ಮತ್ತೆಲ್ಲಿಗೂ ಅಲ್ಲ, ಎತ್ತಾಕಿ...ಂಡ ಶಂಕ್ರನನ್ನು ನೇರವಾಗಿ ...ಗ್ಗೆರೆಯ ಒಂಟಿ ಮನೆಯೊಂದಕ್ಕೆ ...ದೊಯ್ದು ಅಲ್ಲಿ ಮುಲಾಮನ ...ಟರಾದ ರಾಮು ಮತ್ತು ...ಣ ಆತನನ್ನು ಭೀಕರವಾಗಿ ...ಸುತ್ತಿದ್ದರು. ಅವನ ಕೈಕಾಲು ಕಟ್ಟಲಾಗಿತ್ತು, ಸಿಕ್ಕಸಿಕ್ಕಲ್ಲಿ ...ರಿಸುತ್ತಿದ್ದರು. ಅಂತಿಮವಾಗಿ ಅವರಲ್ಲೊಬ್ಬ ...ರಿಯೊಂದನ್ನು ತಂದಿದ್ದೇ ಚೀರಾಡುತ್ತಿದ್ದ ಶಂಕರನ ...ಗೆ ಯಾಪಾಟ ಚುಚ್ಚಿದನೆಂದರೆ, ಹಾರೆ ಆತನ ...ಗೂಡನ್ನೇ ಛೇದಿಸಿ ಬೆನ್ನಿನಿಂದ ಆಚೆಗೆ ಹೊರಬಿದ್ದಿತ್ತು.

ಹೀಗೆ ಒಂದಲ್ಲ ಎರಡು ಹತ್ಯೆಗಳನ್ನು ಮಾಡಿದ ...ರವಾದರೂ ಮುಲಾಮನ ಗ್ಯಾಂಗ್ ಸುಮ್ಮನಾಗ...ತ್ತು, ಆದರೆ ಜಮೆಗೊಂಡ ಗ್ಯಾಂಗ್‌ನ ಮಸ್ತಿಯೇ ...ತ್ತು, 'ಮುರ್ಡೇಶ್ವರ ಹೋಟೆಲಿನ ಬಳಿ ಕುರಿ ...ದ್ದ' ಎಂಬ ಸುದ್ದಿ ಬರುತ್ತಿದ್ದಂತೆಯೇ ಒಂಟಿ ...ಯಲ್ಲಿ ಶಂಕ್ರನ ಹೆಣ ಬಿಸಾಕಿದ್ದೇ ಅದೇ ...ಲೀಸ್ ಗಾಡಿಯಲ್ಲಿ ಮತ್ತೆ ಸುಂಕದಕಟ್ಟೆಗೆ ...ದ್ದಾರೆ. ಆ ಹೊತ್ತಿಗೆ ಪೊಲೀಸರು ಅಲ್ಲಿಗೆ ...ರಬಹುದೆಂಬ ಭಯವೂ ಹಂತಕ ಹುಡುಗ...ರಲಿಲ್ಲ, ತಮಾಷೆಯೆಂದರೆ ಮುರ್ಡೇಶ್ವರ ಬಾರಿ... ವಿಜಯನ ಹೆಣ ಬಿದ್ದು ಮುಕ್ಕಾಲು ಗಂಟೆ ...ದರೂ ಅಲ್ಲಿಗೆ ಪೊಲೀಸರು ತಲುಪಿರಲಿಲ್ಲ, ಆದರೆ ಮಚ್ಚನ ಮತ್ತೊಬ್ಬ ಬಂಟ ಕುರಿ ...ತ್ತ ಅಲ್ಲಿಗೆ ಬಂದುಬಿಟ್ಟಿದ್ದ!

ಅವನ ಪೂರ್ತಿ ಹೆಸರು ಕೃಷ್ಣಮೂರ್ತಿ. ಪಟ್ಟಾ... ಪಂಟಾಯಿಸ್ತಿ ಸದಸ್ಯನೊಬ್ಬನ ಮಗನಾದ ಕೃಷ್ಣ...ರ್ತಿ ಅಲಿಯಾಸ್ ಕುರಿಯದ ಮನೆ ಬ್ರಿಸ್ಲೈನಿ... ತನ್ನ ಗೆಳೆಯ ವಿಜಿ ಸುಂಕದಕಟ್ಟೆಯಲ್ಲಿ ...ವಾಗಿ ದ್ದಾನೆ ಮತ್ತು ಶಂಕ್ರನನ್ನು ಮುಲಾಮನ ...ಗ್ ಎತ್ತಾಕಿಕೊಂಡು ಹೋಗಿದೆ ಎಂಬುದು ...ತ್ತು ತಿಳಿಯುತ್ತಿದ್ದಂತೆಯೇ ಮುರ್ಡೇಶ್ವರ ಹೋಟೆಲಿನ ... ಓಡಿ ಬಂದಿದ್ದಾನೆ. ಆತ ಅಲ್ಲಿಗೆ ಬಂದ ಸುದ್ದಿ ...ದ್ದೇ ಮುಲಾಮನ ಹುಡುಗರಿದ್ದ ಕ್ವಾಲೀಸ್ ಗಾಡಿಯೂ ಅಲ್ಲಿಗೆ ಬಂದಿದೆ. ಕುರಿಯನ್ನು ಮುತ್ತಿಕೊಂಡಿದ್ದೇ ಮುಲಾಮನ ಹುಡುಗರು ಯಾವ ಪರಿ ಕತ್ತರಿಸಿದರೆಂದರೆ, ಡಜನ್ ಹೊಲಿಗೆ ಹಾಕಿದರೂ ಕೂಡಿಕೊಳ್ಳದಂತೆ ತಲೆಬುರುಡೆ ಬಿಚ್ಚಿಕೊಂಡಿದೆ. ಒಂದು ಅಂಗೈ ತುಂಡಾಗಿದೆ. ಮತ್ತೊಂದು ಕೈ ಬದರಿನ ದಬ್ಬೆ ಸೀಳಿದಂತೆ ಸಿಗಿದುಹೋಗಿದೆ. ಅದೇನು ಲಕ್ಕಿತ್ತೋ, ಎಚ್ಚರತಪ್ಪಿ ಬೀಳದೇ ಹೋಗಿದ್ದರೆ ಕುರಿಯನ್ನು ಕೊಂದೇ ಬಿಡುತ್ತಿದ್ದರು.

ಇದೆಲ್ಲವನ್ನೂ ಆರಾಮಾಗಿಯೇ ಮಾಡಿ ಮುಗಿಸಿದ ಮುಲಾಮನ ಹುಡುಗರು ಅಷ್ಟೇ ಸಲೀಸಾಗಿ ಬಂದ ಕ್ವಾಲೀಸ್ ಹತ್ತಿ ನಾಪತ್ತೆಯಾಗಿದ್ದಾರೆ. ಕುರಿ ಮಾತ್ರ ಆಸ್ಪತ್ರೆಯಿಂದ ಹೊರ ಬರಲು ಆರು ತಿಂಗಳುಗಳೇ ಬೇಕಾದವು.

ಎಲ್ಲಾ ಬಿಟ್ಟು ಜೆಡಿಎಸ್ ಸೇರಿಕೊಂಡು ದೇವೇಗೌಡ-ಕುಮಾರಸ್ವಾಮಿ ಜೊತೆ ಸುತ್ತಾಡಿಕೊಂಡಿದ್ದ ಮುಲಾಮನಿಗೆ ಇದು ಬೇಡದ ಕಿತಾಪತಿಯಾಗಿತ್ತು. ಬಹುಶಃ ಆತ ಸುಮ್ಮನಿದ್ದರೂ ಆತನ ಶಿಷ್ಯರಾದ ರಾಮ-ಲಕ್ಷ್ಮಣ ಕೇಳಬೇಕಲ್ಲ; ಅವರಿಗೆ ಮಚ್ಚನಿಗಿಂತಲೂ ತಮ್ಮ ಜೊತೆಗಿದ್ದುಕೊಂಡೇ ಮಚ್ಚನ ಜೊತೆ ಕೈಜೋಡಿಸಿದ ಶಂಕ್ರ ಮತ್ತು ವಿಜಿಯ ಮೇಲೆ ಸಿಟ್ಟಿತ್ತು.

ಆ ಹೊತ್ತಿಗಾಗಲೇ ಮಚ್ಚ ಮತ್ತು ಮುಲಾಮರ ಮಧ್ಯೆ ಸಣ್ಣ ವಿರಸವೊಂದು ಹೆಡೆಯೆತ್ತಿತ್ತು. ಅದಕ್ಕೆ ಮುಖ್ಯ ಕಾರಣ ತನ್ನ ಜೊತೆಗಿದ್ದೇ ಮುಲಾಮ ತನ್ನ ಎದುರಾಳಿ ಜೇಕೆಯ ಜೊತೆ ಕೈಜೋಡಿಸಿದ್ದನ್ನು ಮಚ್ಚ ಸಹಿಸದೇ ಹೋಗಿದ್ದು. ಹತ್ತಾರು ವರ್ಷಗಳ ಕಾಲ ಜಿದ್ದು ಸಾಧಿಸಿಕೊಂಡು ಬಂದಿದ್ದ ಜೇಕೆ ಮತ್ತು


ರಿವೇಂಜ್ ಕಿಲ್ಲಿಂಗ್ಸ್ 21


ಡಾ. ಸೋಮನಾಥ್

ಮುಲಾಮ ಇದ್ದಕ್ಕಿದ್ದಂತೆ ಕೈಜೋಡಿಸಿಬಿಟ್ಟಿದ್ದರು. ಅದು ಯಾವ ಮಟ್ಟದ ರಾಜಿಯೆಂದರೆ, ತನ್ನ ಬಂಟ ರಾಮುವನ್ನು ಮುಲಾಮ ಐದು ಲಕ್ಷ ಖರ್ಚು ಮಾಡಿ ಮದುವೆ ಮಾಡಿದಾಗ ಅದಕ್ಕೆ ಖುದ್ದು ಜೇಕೆಯೇ ಬಂದು ಗಿಫ್ಟ್ ಕೊಟ್ಟು ಹೋಗಿದ್ದ.

ಯಾವತ್ತು ಮುಲಾಮ ಮತ್ತು ಜೇಕೆ ಒಂದಾದ ಸುದ್ದಿ ಬಂತೋ ಮಚ್ಚ ಹುಷಾರಾಗಿ ಬಿಟ್ಟ. ಇದೇ ಹೊತ್ತಿಗೆ ಮುಲಾಮನ ತಂಡದಲ್ಲೊಂದು ಸಣ್ಣ ಬಿರುಕು ಮೂಡಿಸುವಲ್ಲಿ ಮಚ್ಚ ಯಶಸ್ವಿಯೂ ಆದ.

ಮುಲಾಮನ ಶಿಷ್ಯರಾದ ಶಂಕ್ರ, ವಿಜಿ ಮತ್ತು ಕುರಿಯನ್ನು ಸದ್ದಿಲ್ಲದೇ ತನ್ನೆಡೆಗೆ ಸೆಳೆದುಕೊಂಡಿದ್ದ ಮಚ್ಚ.


ರಾಮ


ಲಕ್ಷ್ಮಣ

ಅದಕ್ಕಿದ್ದ ಕಾರಣವೇ ಬೇರೆ. ಕೊಲೆಯಾದ ವಿಜಿ ಮತ್ತು ಶಂಕ್ರರ ಪೈಕಿ ವಿಜಿ ರಾಜಗೋಪಾಲನಗರದವನು. ರಾಮ-ಲಕ್ಷ್ಮಣರ ಜೊತೆ ಓಡಾಡಿಕೊಂಡಿದ್ದ. ಶಂಕ್ರ ಆಜಾದ್‌ನಗರದ ಕೌನ್ಸಿಲರ್ ಆಗಿದ್ದ ವೆಂಕಟಾಚಲನನ್ನು ಕೊಂದ ಚಾಮರಾಜಪೇಟೆಯ ಹಳೇ ರೌಡಿ ಸತೀಶನನ್ನು ಕೊಂದಿದ್ದ. ಆ ಕೇಸಿನಲ್ಲಿ ಆತ ಜೈಲು ಪಾಲಾದಾಗ, ರಾಬರಿ ಕೇಸಿನಲ್ಲಿ ವಿಜಿಯೂ ಜೈಲಿಗೆ ಬಂದಿದ್ದ. ಇಬ್ಬರೂ ಮುಲಾಮನ ಬಂಟರೆ. ಆದರೆ ಮುಲಾಮ ಮಾತ್ರ ಇವರಿಬ್ಬರಿಗೂ ಜಾಮೀನು ಕೊಡಿಸುವುದಾಗಲಿ, ನೆರವು ನೀಡುವುದಾಗಲಿ ಮಾಡಲೇ ಇಲ್ಲ, ಆದರೆ ನೆರವಿಗೆ ಬಂದವನು ಮಚ್ಚ.

ಕೈಯಾರೇ ದುಡ್ಡು ಹಾಕಿ ಅವರಿಬ್ಬರನ್ನೂ ಜೈಲಿಂದ ಹೊರತಂದ ಮಚ್ಚ ಕಾಲಕ್ರಮೇಣ ಅವರಿಗೆ ಇನ್ನಷ್ಟು ಆತ್ಮೀಯನಾದ. ಕಷ್ಟದಲ್ಲಿ ನೆರವಾಗದ ಮುಲಾಮನ ಮೇಲೆ ಮೊದಲೇ ಸಿಟ್ಟಿತ್ತಲ್ಲ; ಅವರಿಬ್ಬರೂ ಮುಲಾಮನ ಚಲನವಲನದ ಬಗ್ಗೆ ಮಚ್ಚನಿಗೆ ಮಾಹಿತಿ ಕೊಡತೊಡಗಿದರು. ತನ್ನ ಜೊತೆಗಿದ್ದು ಮಚ್ಚನ ಗ್ಯಾಂಗ್ ಸೇರಿಕೊಂಡ ಅವರಿಬ್ಬರನ್ನೂ ಮುಲಾಮ ಅಷ್ಟಾಗಿ ಲೆಕ್ಕಕ್ಕೆ ತೆಗೆದುಕೊಂಡಿರಲಿಲ್ಲ. ಯಾವತ್ತು ಮುಲಾಮನ ಗ್ಯಾಂಗ್ ಕೈಯಿಟ್ಟ ಲಗ್ಗೆರೆಯ ಲ್ಯಾಂಡ್ ಡೀಲ್ ಒಂದಕ್ಕೆ ಮಚ್ಚ ಕೈಯಿಟ್ಟನೋ ಆತನ ಜೊತೆ ಶಂಕ್ರ ಮತ್ತು ವಿಜಿ ಕೂಡ ಮುಲಾಮನ ಗ್ಯಾಂಗ್ ಕೈಹಾಕಿದ ಲ್ಯಾಂಡಿಗೆ ಬಂದು ಹಾವಳಿಯಿಟ್ಟಿದ್ದನ್ನು ಮುಲಾಮ ಸಹಿಸದೇ ಹೋದ. ಮುಲಾಮನಿಗಿಂತಲೂ ಆತನ ಪುಂಡ ಶಿಷ್ಯರಾದ ರಾಮು ಮತ್ತು ಲಕ್ಷ್ಮಣರಿಗದು ಹೊಟ್ಟೆಯಲ್ಲಿ ಖಾರ ಕಲಿಸಿದಂತಾಗಿತ್ತು, 'ನೋಡು ಗುರೂ ನಮ್ಮ ಜೊತೆಗಿದ್ದವರೇ ಗುನ್ನ ಇಕ್ಕಿವೆ,' ಎಂದು ಬತ್ತಿ ಇಟ್ಟಿದ್ದಾರೆ. ಕಾರಣವಿಷ್ಟೇ- ಈ ಶಂಕ್ರ ಮತ್ತು ವಿಜಿಯನ್ನು ಎಲ್ಲಿ ತಮಗೆ ಪರ್ಯಾಯವಾಗಿ ಮಚ್ಚ ಬೆಳೆಸಿಬಿಟ್ಟಾನೋ ಎಂಬ ಅಳುಕು!

ಮುಲಾಮ ಹೋಗಿ ನಾಲ್ಕು ಬಾರಿಸ್ಕೋ ಎಂದಿದ್ದೇ ರಾಮ-ಲಕ್ಷ್ಮಣರಿಗೆ ಸಾಕಾಗಿತ್ತು, ಮೂವತ್ತು ಮಂದಿ ಹುಡುಗರನ್ನು ರೆಡಿ ಮಾಡಿದ್ದೇ ಅನಾಹುತ ಮಾಡಿಯೇ ಬಿಟ್ಟರು. ಹುಡುಗರು ಕಿತ್ತಾಡಿಕೊಂಡಿದ್ದಕ್ಕೆ ಪೊಲೀಸರು ತನ್ನನ್ನು ಮುಟ್ಟಲಾರರು ಎಂಬ ಮುಲಾಮನ ನಿರೀಕ್ಷೆ ಒಂದೇ ಕ್ಷಣಕ್ಕೆ ತಲೆಕೆಳಗಾಗಿ ಹೋಗಿತ್ತು. ರಾಮ, ಲಕ್ಷ್ಮಣ, ಪುನಿತೇಶ ಮುಂತಾದವರ ಜೊತೆ ಮುಲಾಮನೂ ಜೈಲು ಪಾಲಾಗಿಬಿಟ್ಟ. ಬಹುಶಃ ಇಂಥ ಕೇಸೊಂದು ಮೈಮೇಲೆ ಬೀಳದೇ ಹೋಗಿದ್ದರೆ ಮುಲಾಮ ಜೆಡಿಎಸ್‌ನ ಪದಾಧಿಕಾರಿಯಾಗಿ ಬಿಡುತ್ತಿದ್ದೇನೇನೊ. ಮುಂದೆ ಚುನಾವಣೆಗೂ ನಿಲ್ಲುವ ಯೋಚನೆಯಿತ್ತು, ಆದರೆ ಡಬ್ಬಲ್ ಮರ್ಡರ್ ಆತನ ಭವಿಷ್ಯವನ್ನೇ ದಿಕ್ಕುತಪ್ಪಿಸಿಬಿಟ್ಟಿತು.

ಒಂದು ವರ್ಷ ಕಾಲ ಜೈಲು ಕಳೆದು ಈಚೆಗೆ ಬರುತ್ತಿದ್ದಂತೆಯೇ ಅನಾಹುತಕಾರಿ ಸುದ್ದಿಯೊಂದು ಮುಲಾಮನ ಕಿವಿಗೆ ಬಿತ್ತು. ಯಾವ ಪುನಿತೇಶ ತನ್ನ ಪರವಾಗಿ ಮಚ್ಚನ ಬಂಟರಾದ ವಿಜಿ ಮತ್ತು ಶಂಕ್ರರನ್ನು ಕೊಂದು ಹಾಕಿದ್ದನೋ ಆತನನ್ನು ಮಚ್ಚನ ಶಿಷ್ಯ ಕುರಿ ಉರ್ಫ್ ಕೃಷ್ಣಮೂರ್ತಿಯ ಗ್ಯಾಂಗ್ ನಡುರಸ್ತೆಯಲ್ಲಿ ಕೊಚ್ಚಿ ಹಾಕಿತ್ತು!

ಅದು 2005 ರ ಜನವರಿ ತಿಂಗಳು. ತಿಂಗಳ ಹಿಂದಷ್ಟೇ ಜೈಲಿಂದ ಹೊರಬಿದ್ದಿದ್ದ ಪುನಿತೇಶನಿಗೂ ಸತ್ತ ವಿಜಿ ಮತ್ತು ಶಂಕ್ರರ ಚೆಡ್ಡಿದೋಸ್ತ್ ಕುರಿಗೂ ಭಯಂಕರ ಜಿದ್ದಾಜಿದ್ದಿ ಶುರುವಾಗಿತ್ತು. ವಿಜಿ-ಶಂಕ್ರರನ್ನು ಕೊಂದು ತನ್ನ ಕೈ ಕತ್ತರಿಸಿದ್ದಕ್ಕೆ ಬೇರೆಲ್ಲರಿಗಿಂತಲೂ ಮುಂದಿದ್ದವನೇ ಪುನಿತೇಶ ಎಂದು ಕುರಿ ನಿರ್ಧರಿಸಿದ್ದ. ಜೈಲಿಂದ ಹೊರಬಂದ ಮೇಲೂ ಕಂಡಕಂಡಲ್ಲಿ ಕುರಿ ಕಡೆಯ ಹುಡುಗರನ್ನು ಪುನಿತೇಶ ಅಟಕಾಯಿಸಿಕೊಂಡ. ಕುರಿಯನ್ನು ಹುಡುಕಿಕೊಂಡು ತಾವರೆಕೆರೆ, ಬಸವೇಶ್ವರನಗರದ ಅಡ್ಡೆಗಳ ಮೇಲೂ ರೇಡು ಮಾಡಲಾರಂಭಿಸಿದ ಎಲ್ಲೆಂದರಲ್ಲಿ ರೌಂಡಿಂಗ್ ಶುರುಹಚ್ಚಿಕೊಂಡ. ಇದೇ ಹೊತ್ತಿಗೆ ಸುಂಕದಕಟ್ಟೆಯಲ್ಲಿ ರಾಜ್ಯೋತ್ಸವದ ಹೆಸರಲ್ಲಿ ರೋಲ್ ಕಾಲ್ ಆರಂಭಿಸಿದ ಪುನಿತೇಶ ಮುಲಾಮನನ್ನು ವೇದಿಕೆಗೆ ಕರೆಸಿ ಸನ್ಮಾನಿಸಿದ್ದ. ಅವತ್ತು ಆರ್ಕೆಸ್ಟ್ರಾ ಕೇಳಲು ಬಂದಿದ್ದ ಕುರಿಯ ಹುಡುಗರನ್ನೂ ಹಿಡಿದು ಬಡಿದ. ಇದರಿಂದ ಇನ್ನಷ್ಟು ಕುದ್ದು ಹೋದ ಕುರಿ ಪುನಿತೇಶನನ್ನು ತೆಗೆಯದೇ ತನಗೆ ಉಳಿಗಾಲವೇ ಇಲ್ಲ ಎಂಬ ನಿರ್ಧಾರಕ್ಕೆ ಬಂದುಬಿಟ್ಟ.

ಅದೇನು ಕೆಟ್ಟಗಳಿಗೆಯೋ, ಹುಂಬ ಪುನಿತೇಶ ಕುರಿಯನ್ನು ತೆಗೆದು ಬಿಡ್ತೀನಿ ಎಂದು ಕಂಡಕಂಡಲ್ಲಿ ರೌಂಡಿಂಗ್‌ಗಿಳಿದವನು ಅದೇ ರೀತಿ ಕುರಿಯೂ ತನ್ನನ್ನು ಹುಡುಕಿಕೊಂಡು ಬೇಟೆಗಿಳಿದಿದ್ದಾನೆ ಎಂಬುದನ್ನೇ ಮರೆತುಬಿಟ್ಟ. 2003 ರ ಜನವರಿ ತಿಂಗಳ ಎರಡನೇ ಭಾನುವಾರದಂದು ಹತ್ತು ಮಂದಿ ಹುಡುಗರನ್ನು ಕಟ್ಟಿಕೊಂಡು ಕುರಿಕೃಷ್ಣನ ಸುಂಕದಕಟ್ಟೆಯ ಅಡ್ಡೆಯ ಮೇಲೆ ಮತ್ತೊಂದು ಭಯಾನಕ ರೇಡ್ ಮಾಡಿಬಿಟ್ಟ. ಅಲ್ಲಿಗೆ ಮಚ್ಚನ ಶಿಷ್ಯ ಕುರಿಕೃಷ್ಣನಿಗೆ ಒಂದು ಸಂಗತಿ ಮನದಟ್ಟಾಗಿತ್ತು. ಅದು-

ತಾನು ಉಳಿಯಬೇಕೆಂದರೆ ಪುನಿತೇಶ ಸಾಯಲೇ ಬೇಕು!

[illegible]

ಚನ್ನಪಟ್ಟಣದಲ್ಲಿ ಪೊಲೀಸರೇ ಗೂಂಡಾಗಳ ಬಾಡಿಗಾರ್ಡ್ಸ್

ಸ್ವೈರ ನಡೆಯುತ್ತಿರುವ ಸಾಮಾನ್ಯ ಮಹಿಳೆಯರ ಮೇಲೆ ಹಲ್ಲೆ ನಡೆಸುವುದಕ್ಕೆ ಗೂಂಡಾಗಳಿಗೆ ಪೊಲೀಸರೇ ಪರ್ಮಿಷನ್ ಕೊಟ್ಟು, ರಕ್ಷಣೆ ಕೊಟ್ಟು ಕರೆತರುತ್ತಾರೆಂದರೆ ನೀವು ನಂಬುತ್ತೀರಾ? ಬೇರೆಯವರು ಏನೆನ್ನುತ್ತಾರೋ ಗೊತ್ತಿಲ್ಲ. ಆದರೆ ಚನ್ನಪಟ್ಟಣದ ಜನ ಮಾತ್ರ 'ಹೌದು' ಎಂದೇ ಹೇಳುತ್ತಾರೆ. ಇಂತಹ ದಕ್ಷ ಪೊಲೀಸರನ್ನು ನೋಡಬೇಕೆನಿಸಿದರೆ ಚನ್ನಪಟ್ಟಣಕ್ಕೆ ಒಮ್ಮೆ ಬಂದು ಹೋಗಿ. ಎಂ.ಪಿ. ಪ್ರಕಾಶರ ಖಾಕಿ ಪಡೆ ಕಾರ್ಯ ನಿರ್ವಹಿಸುವ ಪರಿಯನ್ನು ನೋಡುವ ಅವಕಾಶ ಸಿಗುತ್ತದೆ.

ನಡೆದದ್ದಿಷ್ಟು.

ಮೊನ್ನೆ ಶನಿವಾರ ಚನ್ನಪಟ್ಟಣದ ಮಹಿಳೆಯರು 'ಸ್ಪಂದನ' ಮತ್ತು 'ಜನವಾದಿ ಮಹಿಳಾ ಸಂಘ' ಎಂಬ ಸಂಘಟನೆಗಳ ನಾಯಕತ್ವದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಹಿಳೆಯರನ್ನುದ್ದೇಶಿಸಿ ಮಾತನಾಡುವುದಕ್ಕೆ, ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರದ ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದಕ್ಕೆ ಹಸನತ್ ಮನ್ಸೂರ್, ರೈತ ಸಂಘದ ಸುನಂದಾ ಜಯರಾಮ್, ಜನವಾದಿ ಮಹಿಳಾ ಸಂಘದ ಪ್ರಭಾ, ಸ್ಪಂದನದ ಮಾಲಿನಿ, ಸಾಮಾಜಿಕ ಕಾರ್ಯಕರ್ತೆ ಮಲ್ಲಿಗೆ-ಹೀಗೆ ಹಲವಾರು ಮಹಿಳಾಪರ ಕಾರ್ಯಕರ್ತೆಯರು ಚನ್ನಪಟ್ಟಣದಲ್ಲಿ ನೆರೆದಿದ್ದರು. ಸುಮಾರು ಒಂದೂವರೆ ಸಾವಿರದಷ್ಟು ಮಹಿಳೆಯರು ಬಲು ಉತ್ಸಾಹದಿಂದ ಜಮಾಯಿಸಿದ್ದರು. ಕಾರ್ಯಕ್ರಮಕ್ಕೆ ಅಗತ್ಯ ಅನುಮತಿಗಳನ್ನೂ ಪಡೆದುಕೊಳ್ಳಲಾಗಿತ್ತು. ನಿರೀಕ್ಷೆಯಂತೆ ಮಹಿಳಾ ಮೆರವಣಿಗೆಯು ಬಹಳ ಜೋರಾಗಿಯೇ ನಡೆಯಿತು.

ಬಹಿರಂಗ ಸಭೆ ಇನ್ನೇನು ಶುರುವಾಗಬೇಕು ಎನ್ನುವಷ್ಟರಲ್ಲಿ ಸಭೆಯ ಬದಲು ಗಲಾಟೆ ಶುರುವಾಯಿತು. ಬಿಜೆಪಿಯ ಸಮೂಹ ಸಂಘಟನೆಯಾದ ಎಸ್‌ಸಿ/ಎಸ್‌ಟಿ ಮಹಿಳಾ ಮೋರ್ಚಾದ ಸುಮಾರು 10-15 ಜನ ತಮ್ಮ ನಾಯಕಿ ಕುಮಾರಿಯ ಸಾರಥ್ಯದಲ್ಲಿ ಸಭೆಯನ್ನು ಹಾಳು ಮಾಡುವುದಕ್ಕೆ ಬಂದೇಬಿಟ್ಟರು. ಕೈಯಲ್ಲಿ ಕಪ್ಪು ಬಾವುಟ ಹಿಡಿದು, ಕೆಟ್ಟದಾಗಿ ಬೈಯುತ್ತಾ ನೇರವಾಗಿ ವೇದಿಕೆಯ ಹತ್ತಿರವೇ ಬಂದರು. ಸಾವಿರಾರು ಜನ ಜಮಾವಣೆಗೊಂಡಿದ್ದ ಈ ಸಭೆಯನ್ನು ಹಾಳುಗೆಡವಲು ಈ 10-15 ಜನರ ತಂಡಕ್ಕೆ ಧೈರ್ಯ ಹೇಗೆ ಬಂತು ಅಂತೀರಾ? ಹೇಗೆಂದರೆ, ಈ ಘನಂದಾರಿ ಕೆಲಸಕ್ಕೆ ಬೆಂಗಾವಲಾಗಿ ಹಿಂದುಹಿಂದು ಪೊಲೀಸರು ನಿಂತಿದ್ದರು! ಈ ಪೊಲೀಸ್ ಬೆಂಗಾವಲು ಪಡೆಗೆ ಸಾರಥ್ಯ ವಹಿಸಿದವರು ಸರ್ಕಲ್ ಇನ್ಸ್‌ಪೆಕ್ಟರ್ ವೆಂಕಟೇಶ್ ಮೂರ್ತಿ ಮತ್ತು ಸಬ್‌ಇನ್ಸ್‌ಪೆಕ್ಟರ್ ಆನಂದ್. ಹೀಗೆ ಸಭೆ ನಡೆಸುವವರಿಗೂ ಮತ್ತು ಸಭೆ ಹಾಳು ಮಾಡುವವರಿಗೂ ತಳ್ಳಾಟ-ನೂಕಾಟದ ಜಟಾಪಟಿ ನಡೆಯುತ್ತಿದ್ದರೆ, ಸಿಪಿಐ ವೆಂಕಟೇಶ್ ಮತ್ತು ಎಸ್‌ಐ ಆನಂದ್ ಮಾತ್ರ ಆ ತಮಾಷೆಯನ್ನು ನೋಡಿ ಮಜಾ ತೆಗೆದುಕೊಳ್ಳುತ್ತಿದ್ದರು.

ಈ ಗಲಾಟೆಯ ಮಧ್ಯೆಯೇ ಸುನಂದಾ ಜಯರಾಮ್ ತಮ್ಮ ಭಾಷಣ ಶುರು ಮಾಡೇಬಿಟ್ಟರು. ಇದನ್ನು ನೋಡಿದ ಕುಮಾರಿ ಕೆಂಡಾಮಂಡಲವಾಗಿ ಹೋದರು, ಪಾಪ ತಮ್ಮ ಮಿಷನ್ ಸಕ್ಸಸ್ ಆಗಲಿಲ್ಲ ಅಂತಾನೋ ಏನೋ. 'ಲೇ ಲೋಫರ್ ಮುಂಡೆ' ಅಂತಾನೇ ತಮ್ಮ ಬೈಗುಳಗಳ ಸುರಿಮಳೆಯನ್ನು ಸುರಿಸೇಬಿಟ್ಟರು. ಸಭೆಗೆ ಬಂದಿದ್ದ ಜನ ಪೊಲೀಸರನ್ನು ಮುತ್ತಿಕೊಂಡು "ನೀವು ಯಾರಿಗೆ ರಕ್ಷಣೆ ಕೊಡ್ತಿದಿರಾ? ಶಾಂತಿಯುತವಾಗಿ ಸಭೆ ನಡೆಸುತ್ತಿರುವ ನಮಗೋ ಅಥವಾ ಅದನ್ನು ಹಾಳು ಮಾಡುತ್ತಿರುವ ಅವರಿಗೋ?'' ಅಂತ ಕೇಳಿದರೆ, ವೆಂಕಟೇಶ್ ಮೂರ್ತಿ ಮತ್ತು ಆನಂದರ ಸಮರ್ಥನೆ ಏನು ಗೊತ್ತೆ? 'ಇದು ಪ್ರಜಾಪ್ರಭುತ್ವ, ನಿಮ್ಮ ಹಾಗೆ ಅವರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿದೆ' ಅಂತ! ಮಹಿಳಾ ಸಮಸ್ಯೆಗಳ ಬಗ್ಗೆ ಭಾಷಣ ಕೇಳಲು ಬಂದ ಮಹಿಳೆಯರು ಪೊಲೀಸರ ಪ್ರಜಾತಂತ್ರ ಕುರಿತ ಭಾಷಣ ಕೇಳಬೇಕಾಯ್ತು ನೋಡಿ.

ಸಭೆ ಮಾತ್ರ ಅರ್ಧಕ್ಕೆ ನಿಂತುಹೋಯ್ತು. ಪೊಲೀಸರೇ ಖುದ್ದಾಗಿ ನಿಂತು ವ್ಯವಸ್ಥಿತವಾಗಿ ಗಲಾಟೆ ನಡೆಸುತ್ತಿರುವಾಗ, ಹಲ್ಲೆ ನಡೆಸುವುದಕ್ಕೂ ಸಿದ್ಧರಾಗಿ ಬಂದಿರುವಾಗ ರಕ್ಷಣೆ ಯಾರಲ್ಲಿ ಕೇಳುವುದು ಅಂತಾನೋ ಏನೋ, ಒಟ್ಟಿನಲ್ಲಿ ಸಭೆ ನಿಂತುಹೋಯಿತು. ಸುನಂದಾ ಜಯರಾಮ್ ವಾಪಸ್ಸು ಹೋಗಲು ಆಟೋ ಹತ್ತಿರ ಹೋದರೆ, ತಕ್ಷಣ ಇನ್ಸ್‌ಪೆಕ್ಟರ್ ಆನಂದ್ "ಅದೋ ಅಲ್ಲಿ ಒಬ್ಬರೇ ಹೋಗ್ತಿದಾರೆ ನೋಡಿ, ಹಿಡಿಯಿರಿ" ಅಂತ ಛೂ ಬಿಟ್ಟದ್ದೇ ತಡ, ಕುಮಾರಿ ನಾಯಕತ್ವದ ಗ್ಯಾಂಗು ಓಡಿಹೋಗಿ ಮುತ್ತಿಗೆ ಹಾಕಿತು. ಸಭೆ ನಡೆಸಲೂ ಬಿಡಲಿಲ್ಲ, ಈಗ ಮನೆಗೆ ಹೋಗಲೂ ಬಿಡಲಿಲ್ಲ.

ಅಂತೂಇಂತೂ ಸಭೆಯನ್ನು ಯಶಸ್ವಿಯಾಗಿ ಹಾಳು ಮಾಡಿದ ತೃಪ್ತಿ ಹಾಗೂ ಸಂತೋಷದೊಂದಿಗೆ ಸಮವಸ್ತ್ರಧಾರಿ ಪೊಲೀಸರು ಮತ್ತು ಕುಮಾರಿ ನಾಯಕತ್ವದ ಗ್ಯಾಂಗ್ ಹೊರಟುಹೋದ ಮೇಲೆ ಮಫ್ತಿ ಪೊಲೀಸರಿಂದ ನೆರೆದ ಮಹಿಳೆಯರಿಗೆ ಮತ್ತೆ ಪ್ರಜಾತಂತ್ರ ಕುರಿತ ಭಾಷಣ "ಅವರೂ ನಿಮ್ಮ ಹಾಗೆ ಪರ್ಮಿಷನ್ ತಗೊಂಡಿದ್ದಾರೆ, ನಿಮ್ಮಂತೆ ಅವರಿಗೂ ಹಕ್ಕಿದೆ; ಬೇಕಾದ್ರೆ ಒಂದು ಕಂಪ್ಲೆಂಟ್ ಕೊಡಿ, ಮುಂದೆ ನೋಡ್ಕೊತೀವಿ" ಇತ್ಯಾದಿ ಇತ್ಯಾದಿ.



ಸುನಂದಾ ಜಯರಾಮ್

ಇಷ್ಟಕ್ಕೂ ಎಸ್‌ಸಿ, ಎಸ್‌ಟಿ ಮಹಿಳಾ ಮೋರ್ಚಾದ ಸದಸ್ಯರಿಗೆ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸುತ್ತಿರುವವರ ಮೇಲೆ ಯಾಕಿಷ್ಟು ದ್ವೇಷ? ಅದಕ್ಕೂ ಒಂದು ಕಾರಣವಿದೆ. ಸಂಘ ಪರಿವಾರದ ಚೆಡ್ಡಿಗಳು ದೇಶದಾದ್ಯಂತ ಹಾಗೂ ಚನ್ನಪಟ್ಟಣದಲ್ಲಿ ನಡೆಸುತ್ತಿರುವ ಅವಾಂತರಗಳನ್ನು 'ಸ್ಪಂದನ' ಹಾಗೂ 'ಜನವಾದಿ ಮಹಿಳಾ ಸಂಘ'ಗಳು ಮೊದಲಿನಿಂದಲೂ ವಿರೋಧಿಸುತ್ತಿವೆ, ಅದರ ವಿರುದ್ಧ ಪ್ರತಿಭಟಿಸುತ್ತಿವೆ. ಕೆಲವು ದಿನಗಳ ಹಿಂದೆ ಚೆಡ್ಡಿಗಳು ದೇಶಾದ್ಯಂತ ವಿರಾಟ್ ಹಿಂದೂ ಮಹೋತ್ಸವ ಆಚರಣೆಯ ಭಾಗವಾಗಿ ಚನ್ನಪಟ್ಟಣದಲ್ಲೂ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಅವರ ವಿರುದ್ಧ ಸಂಘಟನೆಗಳ ಜನರು ದನಿಯೆತ್ತಿದ್ದರು. ಧರ್ಮದ ಹೆಸರಿನಲ್ಲಿ ಸಮಾಜ ಒಡೆಯುವ, ಸಮಾಜದಲ್ಲಿ ಕೋಮು ವಿಷಬೀಜ ಬಿತ್ತುವ ಹಾಗೂ ಆ ಮೂಲಕ ಮುಸ್ಲಿಮರ ದಾಳಿಗೆ ಗುರಿ ಮಾಡುವ ಸಂಘ ಪರಿವಾರದ ತಂತ್ರಗಳನ್ನು ಆ ಎರಡೂ ಸಂಘಟನೆಗಳು ಬಹಿರಂಗವಾಗಿ ಪ್ರತಿಭಟಿಸಿದ್ದವು. ಹಾಗಾಗಿ ಇವರ ವಿರುದ್ಧ ಸೇಡು ತೀರಿಸಿಕೊಳ್ಳಲು ಸಂಘ ಪರಿವಾರದ ಚೆಡ್ಡಿ ಪಟಾಲಂ ಸಮಯ ಕಾಯುತ್ತಿತ್ತು.

ಯಾವಾಗ ಸ್ಪಂದನ ಮತ್ತು ಜನವಾದಿ ಮಹಿಳಾ ಸಂಘದವರು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಿದ್ದಾರೆಂದು ಗೊತ್ತಾಯಿತೋ, ತಕ್ಷಣ ಅದನ್ನು ಹಾಳು ಮಾಡುವ ಪ್ಲಾನ್ ರೆಡಿ ಮಾಡಿದರು. ಸಂಘ ಪರಿವಾರದ ಈ ಪ್ಲಾನ್‌ನ್ನು ಸರ್ಕಲ್ ಇನ್ಸ್‌ಪೆಕ್ಟರ್ ವೆಂಕಟೇಶ್‌ಮೂರ್ತಿ ಮತ್ತು ಸಬ್‌ಇನ್ಸ್‌ಪೆಕ್ಟರ್ ಆನಂದ್‌ರ ಮುಂದಿಟ್ಟರೆ, ಅದಕ್ಕೆ ಅವರು ಅನುಮೋದನೆ ನೀಡಿದರಲ್ಲದೆ ತಾವೂ ಈ ಗೂಂಡಾಪಡೆಗೆ ರಕ್ಷಣೆ ಕೊಟ್ಟು ಕೈ ಜೋಡಿಸುವುದಾಗಿ ಭರವಸೆ ಇತ್ತರು. ಅಂತೆಯೇ ಈ ಪೂರ್ವ ತಯಾರಿಯ ಯೋಜನೆಯನ್ನು ಎಲ್ಲರೂ ಕೂಡಿ ಯಶಸ್ವಿಗೊಳಿಸಿದರು.

ರಾಜ್ಯದಲ್ಲಿ ಒಂದು ಕಡೆ ಅಮಾಯಕನ ಮರ್ಮಾಂಗಕ್ಕೆ ಪೊಲೀಸರು ಬೆಂಕಿ ಇಟ್ಟದ್ದಾರೆ. ಬೆಂಗಳೂರಿನ ಸೆರಗಿನಲ್ಲಿರುವ ಚನ್ನಪಟ್ಟಣದಲ್ಲಿ ಅದೇ ಖಾಕಿ ಪಡೆ ಗೂಂಡಾಗಳಿಗೆ ರಕ್ಷಣೆ ಕೊಟ್ಟು ಕೈ ಮಿಲಾಯಿಸಿದೆ. ಇನ್ನೊಂದು ಕಡೆ ಯಾವ ಕಾರಣವೂ ಇಲ್ಲದೆ ಮಂಗಳೂರಿನ ಪತ್ರಕರ್ತ ಸೀತಾರಾಮ್‌ರವರನ್ನು ಬಂಧಿಸಿ ಹಿಂಸೆ ನೀಡುತ್ತಿದೆ. ಪೊಲೀಸ್ ಇಲಾಖೆಯ ಸುಧಾರಣೆಯ ಬಗ್ಗೆ ಪುಷ್ಕಳವಾಗಿ ಬೊಬ್ಬಿಡುವ ಎಂ.ಪಿ. ಪ್ರಕಾಶ್ ಇದಕ್ಕೆ ಏನು ಹೇಳ್ತಾರೆ?

-ವರದಿಗಾರ

ಸುರಪುರ: ಯುವಕನ ಮರ್ಮಾಂಗಕ್ಕೆ ಬೆಂಕಿ, ಪೊಲೀಸರ ಪೈಶಾಚಿಕ ಕೃತ್ಯ

ಇತಿಹಾಸ ಪ್ರಸಿದ್ಧ ಸುರಪುರದಲ್ಲಿ ಇತ್ತೀಚೆಗೆ ಅದಾವ ಶನಿ ಅಂಟಿಕೊಂಡಿದೆಯೋ ಗೊತ್ತಿಲ್ಲ. ಇಲ್ಲಿನ ನಾಗರಿಕರು ಶಾಸಕ ನರಸಿಂಹ ನಾಯಕನ ನಿರ್ಲಕ್ಷ್ಯ ಹಾಗೂ ಪೊಲೀಸರ ನಿರಂತರ ದೌರ್ಜನ್ಯದಿಂದ ನಲುಗಿ ಹೋಗಿದ್ದಾರೆ.

ಮುಖ್ಯಮಂತ್ರಿ ಕುಮಾರಸ್ವಾಮಿಯ ಮಗ್ಗುಲಿಗೆ ನಿಂತು ಮಾಧ್ಯಮಗಳಿಗೆ ಪೋಜು ಕೊಡುವ ಶಾಸಕ ನರಸಿಂಹ ನಾಯಕ ತಾಲ್ಲೂಕಿನಾದ್ಯಂತ ಬರೀ ಭರವಸೆಗಳನ್ನು ನೀಡಿ ಜನರ ಕಣ್ಣಿಗೆ ಮಣ್ಣೆರೆಚುತ್ತಿದ್ದಾನೆ. ಗಣಿ ಕುಳ ಅನಿಲ್‌ಲಾಡ್‌ನ ನಿಕಟ ಸಂಪರ್ಕ ಪಡೆದಿರುವ ಈ ನರಸಿಂಹ ನಾಯಕ ಅಲಿಯಾಸ್ ರಾಜೂಗೌಡ ರಾಜಧಾನಿಯಲ್ಲಿಯೇ ಕಾಲ ದೂಡುತ್ತಿದ್ದಾನೆ. ಅಂಗನವಾಡಿ ಶಿಕ್ಷಕಿಯರ ನೇಮಕಾತಿಯಲ್ಲಿ ಸಖತ್ತಾಗಿ ದುಡ್ಡು ಮೆಯ್ದಿರುವ ಈ ಆಸಾಮಿ ಯಾವುದೇ ಅಭಿವೃದ್ಧಿಪರ ಕೆಲಸ ಕೈಗೊಂಡಿಲ್ಲ.


ಇಡೀ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದರೂ ಈ ಸುರಪುರ ಸಂಸ್ಥಾನಕ್ಕೆ ಇದುವರೆಗೂ ಸ್ವಾತಂತ್ರ್ಯದ ವಾಸನೆಯಿರಲಿಲ್ಲ. ಕಳೆದ ಚುನಾವಣೆಯಲ್ಲಿ ರಾಜಾ ವೆಂಕಟಪ್ಪ ನಾಯಕ ಎಂಬ ದೊರೆಯನ್ನು ಸೋಲಿಸುವ ಮೂಲಕ ಗಿನ್ನಿಸ್ ದಾಖಲೆ ಸ್ಥಾಪಿಸಿದ್ದ ಈ ಎಳಸು ಹುಡುಗ ರಾಜೂಗೌಡನ ಮೇಲೆ ಬಹಳ ಭರವಸೆ ಇಟ್ಟಿದ್ದರು. ಆದರೆ 'ನೆಚ್ಚಿದ ಎಮ್ಮೆ ಕೋಣ ಈಯಿತು' ಎನ್ನುವಂತೆ ಸದಾ ಹುಡುಗಾಟಿಕೆಯಲ್ಲಿ ತೊಡಗಿರುವ ಈತನಿಂದಾಗಿ ಸುರಪುರದಲ್ಲೀಗ ಸ್ವಾತಂತ್ರ್ಯದ ಉಸಿರು ಬರಿದಾದಂತಾಗಿದೆ.

ಹೇಳುವವರು ಕೇಳುವವರು ಯಾರೂ ಇಲ್ಲದ್ದರಿಂದ ಇಲ್ಲಿನ ಪೊಲೀಸರು ಅಪರಾಧಕ್ಕೆ ಇಂಬು ನೀಡುತ್ತಾ ಪೊಗದಸ್ತಾಗಿ ಮೇಯುವ ಕಾಯಕದಲ್ಲಿ ತೊಡಗಿದ್ದಾರೆ. ಸಾಮಾನ್ಯ ಜನರ ಮೇಲೆ ಅವ್ಯಾಹತವಾಗಿ ದೌರ್ಜನ್ಯ ನಡೆಯುತ್ತಿದ್ದರೂ ತಮಗೂ ಇದ್ಯಾವುದಕ್ಕೂ ಸಂಬಂಧವಿಲ್ಲದಂತೆ ಇಲ್ಲಿನ ಎಸ್ಪಿ ಮಹೇಶ್ ಖಿರ್ಣಕರ್, ಡಿ.ವೈ.ಎಸ್ಪಿ ಜಗಮಯ್ಯನವರು ದಿನ ದೂಡುತ್ತಿದ್ದಾರೆ. ಈ ಮಧ್ಯೆ ಇಲ್ಲಿನ ಪಟ್ಟಣ ಪೊಲೀಸ್ ಠಾಣೆಗೆ ಸುಮಾರು ಒಂದು ವರ್ಷದ ಹಿಂದೆ ಸಿಪಿಐ ಆಗಿ ಬಂದು ವಕ್ಕರಿಸಿರುವ ಎಸ್ಪಿ ಕಟ್ಟಿಮನಿಯಂತೂ, ತಾಲ್ಲೂಕಿನ ಜನರಿಗೆ ಕಂಟಕವಾಗಿದ್ದಾನೆ. ಪೊಲೀಸ್ ಪೇದೆಗಳಿಗೆ, ಮಹಿಳೆಯರಿಗೆ ಮನಬಂದಂತೆ ಮಾತನಾಡುವ ಈತ ರಾಕ್ಷಸ ಪ್ರವೃತ್ತಿಯವನಾಗಿದ್ದಾನೆ.

ಈ ಮಾತನ್ನು ಪುಷ್ಟೀಕರಿಸುವಂತೆ, ಕುಡಿದ ಅಮಲಿನಲ್ಲಿ ಗಲಾಟೆ ಮಾಡಿದ್ದಾನೆ ಎನ್ನಲಾದ ದೇವಾಪುರದ ಯಮುನಪ್ಪ ದೇವಪ್ಪ ಜಾಲಹಳ್ಳಿ (24) ಎಂಬಾತನನ್ನು ವಿಚಾರಿಸಲು ಮಾರ್ಚ್ 7 ರಂದು ಠಾಣೆಗೆ ತಂದು ಕ್ರೂರವಾಗಿ ಹಲ್ಲೆ ನಡೆಸಿದ್ದಲ್ಲದೆ, ಆತನ ಮರ್ಮಾಂಗ ಹಾಗೂ ದೇಹದ ಇತರ ಭಾಗಗಳನ್ನು ಸುಟ್ಟು ಪೈಶಾಚಿಕ ಕೃತ್ಯ ಎಸಗಿದ್ದಾನೆ.

[illegible]

ಚಿತ್ರಹಿಂಸೆಗೊಳಗಾದ ಯಮುನಪ್ಪ ತಾಲ್ಲೂಕಿನ ದೇವಾಪುರ ಗ್ರಾಮದವನು. ಅಷ್ಟಿಷ್ಟು ಕೆಲಸ ಮಾಡಿ ಬಂದ ಹಣದಲ್ಲಿ ಕುಡಿದು ಚಿತ್ತಾಗಿ ಗಲಾಟೆ ಆರಂಭಿಸುತ್ತಿದ್ದ ಈತ ಆ ಸಂದರ್ಭದಲ್ಲಿ ಎಲ್ಲರ ಖಾಂದಾನ್ ಜಾಲಾಡಿ ಬಿಡುತ್ತಿದ್ದ. ಈತನ ಬೈಗುಳ ಕೇಳಿ ತಾಳಲಾರದ ಜನತೆ ಪೊಲೀಸ್ ಠಾಣೆಗೆ ದೂರು ನೀಡಿದರು. ಅವರ ದೂರಿನನ್ವಯ ಸ್ಥಳಕ್ಕೆ ಧಾವಿಸಿದ ಪೊಲೀಸರು ಠಾಣೆಗೆ ಎಳೆತಂದು ಮನಬಂದಂತೆ ಥಳಿಸಿದರು.



ಪೊಲೀಸರ ದೌರ್ಜನ್ಯಕ್ಕೊಳಗಾದ ಯುವಕ

ಕುಡಿದ ಆ ವ್ಯಕ್ತಿಯ ಅಮಲು ಇಳಿಯುತ್ತಿದ್ದಂತೆ ಮಟಮಟ ಮಧ್ಯಾಹ್ನವೇ ಅಮಲೇರಿಸಿಕೊಂಡ ಪೊಲೀಸರು ಕಾಗದದ ಸುರಳಿ ಮಾಡಿ ಬೆಂಕಿ ಹಚ್ಚಿ ಆತನ ಮರ್ಮಾಂಗವನ್ನು ಸುಟ್ಟರು. ಅದನ್ನು ನೋಡುತ್ತ ನಿಂತ ಇತರೆ ಪೊಲೀಸರು ಒಳಗೊಳಗೆ ಕುದು... ಹೋದರು.

ಆ ದಿನ ರಿಮ್ಯಾಂಡ್ ಹೋಮ್‌ನಲ್ಲಿ ಕಾಲ ಕಳೆದ ಯುವಕ ಅದ್ಹೇಗೋ ಸಹಿಸಿಕೊಂಡು ಮರುದಿನ ಬೇಲ್ ತಂದು ಹೊರಬಂದ. ನೇರವಾಗಿ ತಹಶೀಲ್ದಾರ್ ಹಾಗೂ ಶಾಸಕರ ಮನೆಗೆ ಎಡತಾಕಿ ನಡೆದಿದ್ದೆಲ್ಲವನ್ನೂ ವಿವರಿಸಿದ, ಬಿಚ್ಚಿ ತೋರಿಸಿದ. ಯುವಕನ ಮೇಲೆ ಪೊಲೀಸರು ಎಸಗಿದ ಕೃತ್ಯ ಕಂಡ ಶಾಸಕರು ಸಚಿವ ಎಂ.ಪಿ. ಪ್ರಕಾಶರನ್ನು ದೂರವಾಣಿಯಲ್ಲಿ ಸಂಪರ್ಕಿಸಿ ತನಿಖೆಗೆ ಆದೇಶಿಸಿದರು.

ತಕ್ಷಣವೇ ಸ್ಪಂದಿಸಿದಂತೆ ಮಾಡಿರುವ ಮೇಲಧಿಕಾರಿಗಳು ಸ್ಥಳಕ್ಕೆ ಬಂದು ಸಿಪಿಐ ಎಸ್.ಬಿ. ಕಟ್ಟಿಮನಿ, ಪಿಎಸ್‌ಐ ಮಲ್ಲಪ್ಪ ಬಿದರಿಯವರನ್ನು ಅಮಾನತುಗೊಳಿಸಿ ತನಿಖೆ ನಡೆಸಿದ್ದೇವೆ ಎಂದು ಹೇಳಿಹೋಗಿದ್ದಾರೆ.

ಆದರೆ.....

ಇಡೀ ಮಾನವ ಸಮಾಜವೇ ತಲೆತಗ್ಗಿಸುವಂಥ ಪೈಶಾಚಿಕ ಕೃತ್ಯ ಎಸಗಿರುವ ಪೊಲೀಸರು ತಮ್ಮ ಇಲಾಖೆಗೆ ಮತ್ತೆ ಕುಂದುಂಟುಮಾಡಿದ್ದಾರೆ. ತಪ್ಪು ಮಾಡಿರುವ ವ್ಯಕ್ತಿಗೆ ತಕ್ಕ ಶಿಕ್ಷೆ ವಿಧಿಸುವ ಬದಲು ಆತನ ಮರ್ಮಾಂಗಕ್ಕೆ ಕೈ ಹಾಕಿರುವ ಈ ಹೇಯ ಕೃತ್ಯ ನಮ್ಮ ಘನ ಸರ್ಕಾರದ ಆಡಳಿತದ ಕಾರ್ಯವೈಖರಿಗೆ ಕನ್ನಡಿಯಾಗಿದೆ. ಅಂತೆಯೇ ಕುಮಾರನ ಕುಂಡಿ ಕಾಯುತ್ತಿರುವ ಶಾಸಕ ರಾಜೂಗೌಡನಿಗೆ ಇಲ್ಲಿನ ಜನತೆ ಹಿಡಿಶಾಪ ಹಾಕುತ್ತಿದ್ದಾರೆ.

-ವರದಿಗಾರ

ತಲೆಹರಟೆ ತಹಶೀಲ್ದಾರನಿಗೆ ಫ್ಯಾಕ್ಸ್ ಮೂಲಕ ತಲಾಖ್!

ಮುಖ್ಯಮಂತ್ರಿ ಕುಮಾರಸ್ವಾಮಿಗೆ ಏನಾದರೂ ...ರಿ ಹುಷಾರ್... ಹಾಗೊಮ್ಮೆ ಬೈದಿದ್ದು ಜೆಡಿಎಸ್ ...ದ ಜನರಿಗೆ ಗೊತ್ತಾದರೆ 24 ಗಂಟೆಯೊಳಗೆ ನೋ ...ಕ್ವಯರಿ, ನೋ ರಿಪೋರ್ಟ್, ನೋ ನಥಿಂಗ್, ಆನ್ ಸ್ಪಾಟ್ ಸಸ್ಪೆಂಡ್! ಆಫೀಸಿನಿಂದ ಡೈರೆಕ್ಟ್ ಮನೆಗೆ. ...ತ್ತಾಯಿತಾ....?

"ಕುಮಾರಸ್ವಾಮಿಗೆ ಏನ್ ಗೊತ್ತೂ... ...ವನು ಸಿನಿಮಾ ಮಾಡಿದವರು. ಅದೇ ...ಲ್‌ನಲ್ಲಿ ಡೈಲಾಗ್ ಹೇಳಿ ಸಿಳ್ಳೆ, ಕೇಕೆ ...ಸಿಕೊಂಡು ಪಾಪ್ಯುಲರ್ ಆಗಾಕೆ ನೋಡ...ತೆ. ಇದು ಸಿನಿಮಾ ಅಲ್ಲ, ಪಾಲಿಟಿಕ್ಸ್‌ನಲ್ಲಿ ...ಲ್ಲ ನಡೆಯೊಲ್ಲಾ" ಎಂದು ಜನತಾದಳದ ...ಡರ್‌ಗಳ ಮುಂದೆ ಸೀದಾ ಸಾದಾ ಹೇಳಿ ...ಸ ಕಳೆದುಕೊಂಡು ಕೂತವನೆ ಸಿ. ಎಂ. ...ರೇಮಠ ಎಂಬ ಅಧಿಕಾರಿ. ಈತ ಗದಗ ...ಲ್ಲಾಧಿಕಾರಿ ಕಚೇರಿಯಲ್ಲಿ ಉಪಚುನಾವಣಾ ...ಧಿಕಾರಿ ಕಮ್ ಶಿರಹಟ್ಟಿಯ ಹಂಗಾಮಿ ...ಹಶೀಲ್ದಾರ್.


ತಹಶೀಲ್ದಾರ್ ಹಿರೇಮಠ

ಗೊತ್ತು ಗುರಿ ಇಲ್ಲದಂತೆ ಸಾಗಿರುವ ...ಖ್ಯಮಂತ್ರಿಗಳ ಗ್ರಾಮವಾಸ್ತವ್ಯ ಎಂಬ ಹಾಸ್ಯಾಸ್ಪದ ...ರ್ಯಕ್ರಮ ಈ ಬಾರಿ ಗದಗ ಜಿಲ್ಲೆಯ ಶಿರಹಟ್ಟಿ ...ಲ್ಲೂಕಿನ ಸುಗ್ನಹಳ್ಳಿಯಲ್ಲಿತ್ತು, ಫೆಬ್ರವರಿ 28 ರಂದು ...ಲಗಲು ಬರುವ ಕುಮಾರಸ್ವಾಮಿಗೆ ಹಾಸಿಗೆ ರೆಡಿ ...ಾಡಲು ಶಿರಹಟ್ಟಿಯಲ್ಲಿ ತಹಶೀಲ್ದಾರ್ ಇರಲಿಲ್ಲ. ...ದಿದ್ದ ತಹಶೀಲ್ದಾರ್ ರೆಡ್ಡಿ ನಿವೃತ್ತಿ ಹೊಂದಿದ್ದು ಅವರ ...ಗಕ್ಕೆ ಇನ್ನೂ ಯಾರನ್ನೂ ನೇಮಿಸಿಲ್ಲವಾದ್ದರಿಂದ ಆ ...ಗ ಖಾಲಿ ಇತ್ತು, ಹೀಗಾಗಿ ಗದಗಿನ ಜಿಲ್ಲಾಧಿಕಾರಿ ...ಚೇರಿಯಲ್ಲಿ ಉಪಚುನಾವಣಾಧಿಕಾರಿಯಾಗಿ ಕೆಲಸ ...ರ್ವಹಿಸುತ್ತಿದ್ದ ಹಿರೇಮಠನನ್ನು ಹಂಗಾಮಿ ತಹಶೀಲ್ದಾರ್ ...ಂದು ಡಿಸಿ ಜಿ.ಎಂ. ಧನಂಜಯ ತರಾತುರಿಯಲ್ಲಿ ...ಮಿಸಿ ಅವನ ಕೈಯಲ್ಲೊಂದು ಕರ್ಲಾನ್ ಬೆಡ್, ...ದಿಂಬು, ಬೆಡ್‌ಶೀಟ್ ಕೊಟ್ಟು ಕಳುಹಿಸಿದರು.

ಕಣ್ಣಿಗೆ ನಿದ್ದೆ ಹೊಟ್ಟೆಗೆ ಊಟ ಇಲ್ಲದೆ ಹಗಲು ...ತ್ರಿ ನಿಂತು ಕುಮಾರಸ್ವಾಮಿಯ 'ಸ್ವೀಟ್ ಡ್ರೀಮ್ಸ್' ...ರ್ಯಕ್ರಮಕ್ಕೆ ತಯಾರಿ ಮಾಡಿದ ಹಿರೇಮಠನ ಸೇವೆಗೆ ...ಬಹುಮಾನ...ಶ್ರುತಿಯಾಗಿ ಸಿಕ್ಕಿದ್ದು ಸಸ್ಪೆಂಡ್ ಆರ್ಡರ್.

ನಿಜವಾಗಲೂ ಹಿರೇಮಠ ಏನಂದಾ

ಮುಖ್ಯಮಂತ್ರಿಗಳ ವಿಸಿಟ್ ಅಂಡ್ ರೆಸ್ಟ್ ಕಾರ್ಯಕ್ರಮ ...ರಡು ದಿನ ನಡೆಯಿತು. ಆಗ ಜನ ಅಧಿಕಾರಿಗಳ ...ರುದ್ಧ ಸಾಕಷ್ಟು ಕಂಪ್ಲೆಂಟ್ ಮಾಡಿದ್ರು. ಆದರಲ್ಲೂ ...ಶೇಷವಾಗಿ ಕಂದಾಯ ಇಲಾಖೆ ಸಿ.ಎಂ. ಕೆಂಗಣ್ಣಿಗೆ ...ಗುರಿಯಾಗಿತ್ತು, ಡಿ.ಸಿ. ಧನಂಜಯ ಲೆಕ್ಕವಿಲ್ಲದಷ್ಟು ಬಾರಿ ...ಕುಮಾರಸ್ವಾಮಿಯಿಂದ ಉಗಿಸಿಕೊಂಡಿದ್ದರು. ಜನರ ...ಮುಂದೆಯೇ ಇದೆಲ್ಲಾ ನಡೆದಿದ್ದರಿಂದ ಎಲ್ಲರೂ ...ಅಧಿಕಾರಿಗಳಿಗೆ ಛೀಮಾರಿ ಹಾಕೋ ವಾತಾವರಣ ಗದಗ ...ಜಿಲ್ಲೆಯಲ್ಲಿ ಸೃಷ್ಟಿಯಾಗಿತ್ತು.

ಮಾರ್ಚ್ 3ಕ್ಕೆ ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರದಲ್ಲಿ ...ಕುಡಿಯುವ ನೀರಿನ ಸಮಸ್ಯೆ ಕುರಿತು ಪಟ್ಟಣದ ನಾಗರಿಕರು ...ಪ್ರತಿಭಟನೆಯೊಂದನ್ನು ಹಮ್ಮಿಕೊಂಡರು. ಇಪ್ಪತ್ತು ...ದಿನಗಳಿಂದ ಹನಿ ನೀರು ಕಾಣದ ಈ ಜನ ಆವೇಶದಿಂದ ...ಪಂಚಾಯತಿ ಕಚೇರಿಯಲ್ಲಿನ ಸಿಬ್ಬಂದಿಯನ್ನು ಹೊರದಬ್ಬಿ ...ಬಾಗಿಲಿಗೆ ಬೀಗ ಹಾಕಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ...ಸಿ.ಎಂ. ಸಾಹೇಬ್ರು ಹೇಳಿದ್ದರೂ ಸಮಸ್ಯೆ ಬಗೆಹರಿಸದ ...ತಹಶೀಲ್ದಾರ್ ಸ್ಥಳಕ್ಕೆ ಬರಬೇಕೆಂದು ಪಟ್ಟು ಹಿಡಿದರು.

ಜನರ ಒತ್ತಾಯಕ್ಕೆ ಮಣಿದ ಸ್ಥಳೀಯ ಅಧಿಕಾರಿಗಳು ಹಂಗಾಮಿ ತಹಶೀಲ್ದಾರ್ ಆಗಿ ಬಂದಿದ್ದ ಹಿರೇಮಠನನ್ನು ಜನರ ದುನವಿ ಸ್ವೀಕರಿಸಿ ಅವರಿಗೆ ಉತ್ತರ ಕೊಡಲು ಕರೆಸಿದರು. ಆದರೆ ಬಂದಷ್ಟು ಕೆಲಸ ಮಾಡಿ ಹೋಗದ ಈ ಭೂಪ ಜನರೆದುರಿಗೆ ಮೈಕ್ ಹಿಡಿದು "ನೀವೊಂದು ಸ್ಟ್ರೈಕ್ ಮಾಡಿದ್ದೀರಿ. ನೀರಿನ ಸಮಸ್ಯೆ ಅಂದ್ರೆ ಸಣ್ಣದೇನು? ಇಪ್ಪತ್ತು ದಿನದ ಹ್ಯಾಸಿಗೆ ಮೊದಲು ಊರಿಗೆ ಬೆಂಕಿ ಹಚ್ಚಿ ನಂತರ ಪಂಚಾಯತಿಗೆ ಬರಬೇಕು. ನಾನಾಗಿದ್ದರೆ ಹಾಗೆ ಮಾಡುತ್ತಿದ್ದೆ" ಎಂದು ಉದ್ಧಟತನದ ಮಾತು ಆಡಿದ್ದಾನೆ.

ಆಗ ಲಕ್ಷ್ಮೇಶ್ವರದ ಹಿರಿಯರು ತಹಶೀಲ್ದಾರನಿಗೆ "ಸೀದಾ ಮಾತಾಡ್ಲೆ, ಇಲ್ಲಾಂದ್ರ ಕಡಬು ಬೀಳತಾವು" ಎಂದು ಎಚ್ಚರಿಸಿದ್ದಾರಲ್ಲದೆ, ಪೊಲೀಸರನ್ನು ಕರೆಸಿ ಅವರ ಮಧ್ಯಸ್ಥಿಕೆಯಲ್ಲಿ ಮಾತುಕತೆ ನಡೆಸಿ, ಜನರನ್ನು ಶಾಂತಗೊಳಿಸಿ ಕಳುಹಿಸಿದ್ದಾರೆ. ಆನಂತರ ಕುಡಿಯುವ ನೀರಿನ ಸಮಸ್ಯೆ ಕುರಿತು ಊರಿನ ಪ್ರಮುಖರೊಂದಿಗೆ ಪಂಚಾಯತಿ ಕಚೇರಿಯಲ್ಲಿ ಚರ್ಚೆಗೆ ಕುಳಿತಿದ್ದಾನೆ ಹಿರೇಮಠ.

ಹಾವೇರಿ

ಆಗ ಹಿರಿಯರೊಬ್ಬರು "ಏನ್ರಿ ಸಾಹೇಬರೆ, ಮುಖ್ಯಮಂತ್ರಿಗಳು ಸರಿಯಾಗಿ ಕೆಲಸ ಮಾಡ್ರಿ, ಜನರ ಸಮಸ್ಯೆಗೆ ತಕ್ಷಣ ಸ್ಪಂದಿಸಿರಿ ಎಂದು ತಾಕೀತು ಮಾಡಿ ನಾಲ್ಕು ದಿನ ಆಗಿಲ್ಲ. ಆಗಲೇ ನೀವು ಅವರ ಮಾತು ಮರೆತು ನಿಮ್ಮ ಕಾಯಕ ಶುರು ಹಚ್ಚಿಕೊಂಡಿರಲ್ಲಾ, ಹಿಂಗಾದ್ರ ಜನ ಬದಕೋದ್ಯಾಂಗ" ಎಂದು ಪ್ರಶ್ನಿಸಿದ್ದಾರೆ. ಇದಕ್ಕೆ ತಹಶೀಲ್ದಾರ್ ಹಿರೇಮಠ "ಕುಮಾರಸ್ವಾಮಿಗೇನು ಗೊತ್ತು ಸರ್ಕಾರಿ ನೌಕರಿ ಕೆಲಸ? ನಾಯಕರು ಅಧಿಕಾರಿಗಳ ಮೇಲೆ ಹರಿಹಾಯ್ದು ಜನರಿಂದ ಚಪ್ಪಾಳೆ ಗಿಟ್ಟಿಸಿ, ಸಿಳ್ಳೆ-ಕೇಕೆ ಹೊಡೆಸಿಕೊಂಡು ದೊಡ್ಡ ಲೀಡರ್ ಅನಿಸಿಕೊಳ್ಳುತ್ತಾರೆ. ಕುಮಾರನ ಗ್ರಾಮ ವಾಸ್ತವ್ಯ ಒಂದು ರಾಜಕೀಯ ಗಿಮಿಕ್, ಜೆಡಿಎಸ್ ಪಕ್ಷದ ಪ್ರಚಾರ ತಂತ್ರ" ಎಂದು ಹೇಳಿದ್ದಾನೆ. ಈತನ ಮಾತು ಕೇಳಿ ಲಕ್ಷ್ಮೇಶ್ವರದ ಪ್ರಮುಖರು ಬೆಚ್ಚಿ ಬಿದ್ದಿದ್ದಾರೆ. "ಏನಾದರೂ ಆಗಲಿ, ನಮಗೆ ಮೇವುಂಡಿ ತುಂಗಭದ್ರ ಬ್ಯಾರೇಜನಿಂದ ನೀರು ಬಂದರೆ ಸಾಕು. ಅದನ್ನು ಸರಿ ಮಾಡಿ" ಎಂದು ಹೇಳಿ ಜಾಗ ಖಾಲಿ ಮಾಡಿದ್ದಾರೆ. ಆದರೆ ಅಲ್ಲಿದ್ದ ಕುಮಾರಸ್ವಾಮಿಯ ಕಪಿ ಸೈನ್ಯದ ಸದಸ್ಯರು ಅದು ಹೇಗೆ ಸುಮ್ಮನೆ ಹೋದಾರು? ಅವರು ತಕ್ಷಣವೇ ತಮ್ಮ ಕಾರ್ಯತಂತ್ರವನ್ನು ಪ್ರಾರಂಭಿಸಿದ್ದಾರೆ.

ಅಲ್ಲಿದ್ದವರು ಜೆಡಿಎಸ್‌ನವರು

"ನಮ್ಮ ಕುಮಾರಸ್ವಾಮಿಗೆ ಹಿಂಗ್ ಅಂದ್ಯಾ? ನಿನ್ನ ಒಂದ ಕೈ ನೋಡೆಬಿಡತೇವಿ" ಎಂದು ಸ್ಥಳೀಯ ಜಾತ್ಯತೀತ ಜನತಾದಳ ಅಧ್ಯಕ್ಷ ತಿಪ್ಪಣ್ಣ ಸಂಶಿ, ಮಹೇಶ ಹೊಗೆಸೊಪ್ಪಿನ, ವೀರೇಂದ್ರ ಪಾಟೀಲ ಮತ್ತು ಪದ್ಮರಾಜ ಪಾಟೀಲ ಸೇರಿಕೊಂಡು ತಹಶೀಲ್ದಾರ್ ಹಿರೇಮಠನಿಗೆ ಒಂದು ಗತಿ ತೋರಿಸಲು ಮುಂದಾಗಿದ್ದಾರೆ.


ಸ್ಥಳೀಯ ಪತ್ರಕರ್ತರನ್ನು ಕರೆದು ಬೆಳಕು ಹರಿಯೋದ್ರ ಒಳಗೆ ಸುದ್ದಿ ಮಾಡಿ ಕುಮಾರಸ್ವಾಮಿ ಕಿವಿಗೆ ಹಿರೇಮಠನ 'ಡೈಲಾಗ್ ಸ್ಟೈಲ್' ವಿವರಿಸಿದ್ದಾರೆ. ಅಷ್ಟೇ ಅಲ್ಲದೆ, ಪಕ್ಷದ ಲೆಟರ್ ಹೆಡ್‌ನಲ್ಲಿ ಸಂಪೂರ್ಣ ಕಥೆ ಬರೆದು ಪಕ್ಷದ ಧುರೀಣರಿಗೆ ಫ್ಯಾಕ್ಸ್ ಮಾಡಿದ್ದಾರೆ. ಗೃಹ ಸಚಿವ ಎಂ.ಪಿ. ಪ್ರಕಾಶ್, ಎಸ್. ತಿಪ್ಪಣ್ಣ ಮತ್ತು ಹೊರಟ್ಟಿ ನಿದ್ದೆಗಣ್ಣಿನಲ್ಲೇ "ಯಾವನ್ಲೇ ಅವಾ? ನೌಕರಿ ಬ್ಯಾಸರ ಆಗೇತೇನು ಅವನಿಗೆ. ಸಿ.ಎಂ. ಸಾಹೇಬರಿಗೇ ಬೈದಾನಂದ್ರ ನಾಳೆ ಸಸ್ಪೆಂಡ್ ಆಗತಾನೆ" ಎಂದು ಫೋನ್‌ನಲ್ಲೇ ಧಮಕಿ ಹಾಕಿದ್ದಾರೆ.

ಈ ಘಟನೆ ನಡೆದದ್ದು ಮಾರ್ಚ್ 3. ಆದರೆ ಮರುದಿನ ಮಾರ್ಚ್ 4 ರ ಮಧ್ಯಾಹ್ನ ಗದಗ ಜಿಲ್ಲಾಧಿಕಾರಿಗೆ ಹಿರೇಮಠನ ಅಮಾನತು ಆದೇಶ ಬಂದಿದೆ. ಅಶಿಸ್ತಿನ ನಡವಳಿಕೆಯ ಹಿನ್ನೆಲೆಯಲ್ಲಿ ಈ ಕ್ರಮ ಜರುಗಿಸಲಾಗಿದೆ ಎಂದು ಆದೇಶದಲ್ಲಿ ನಮೂದಿಸಲಾಗಿದೆ.

ಧೈರ್ಯ ನನಗಿಲ್ಲ

"ರಾಜ್ಯದ ಮುಖ್ಯಮಂತ್ರಿ ವಿರುದ್ಧ ಅಷ್ಟು ಹಗುರವಾಗಿ ಮಾತನಾಡುವಷ್ಟು ದೊಡ್ಡವ ನಾನಲ್ಲ, ಆ ರೀತಿ ಮಾತನಾಡುವ ಧೈರ್ಯ ಯಾರಿಗಿದೆ ಹೇಳಿ? ಲಕ್ಷ್ಮೇಶ್ವರದ ಜೆಡಿಎಸ್ ಧುರೀಣರ ಮುಂದೆ ನಾನು ಬೈದೇ ಇಲ್ಲ" ಎಂದು ಹಿರೇಮಠ ಅಮಾನತ್ತಿನ ನಂತರ ಹೇಳುತ್ತಿದ್ದಾನೆ. ತನ್ನ ಸರ್ವೀಸಿನುದ್ದಕ್ಕೂ ಸದಾ ಸುದ್ದಿಯಲ್ಲಿರುವ ಹಿರೇಮಠ ಈ ಹಿಂದೆ ರೋಣದಲ್ಲಿದ್ದಾಗ ಅಲ್ಲಿಯ ಚೆಡ್ಡಿ ಶಾಸಕ ಕಳಕಪ್ಪ ಬಂಡಿಗೆ ಸಂಬಂಧಿಸಿದ್ದ ಸಿಲಿಂಡರ್ ವಾಹನವನ್ನು ಸೀಜ್ ಮಾಡಿ, ಇದ್ದದ್ದು ಇಲ್ಲದ್ದು ಸೇರಿಸಿ ಅದನ್ನೊಂದು ದೊಡ್ಡ ಈಷ್ಯೂ ಮಾಡಿದ್ದ. ಕಳಕಪ್ಪ ಬಂಡಿ ಬಹಿರಂಗವಾಗಿ ಈತನೊಂದಿಗೆ ಜಿದ್ದಿಗಿಳಿದು ಕೊನೆಗೆ ಸಸ್ಪೆಂಡ್ ಮಾಡಿಸಿದ್ದ. ನಂತರ ಸಿಂಧಗಿಗೆ ವರ್ಗಾವಣೆಯಾಗಿದ್ದ ಹಿರೇಮಠ ಅಲ್ಲಿಂದಲೂ ಎತ್ತಂಗಡಿ ಆಗಿ ಗದಗಿಗೆ ಚುನಾವಣಾ ಅಧಿಕಾರಿಯೆಂದು ನಿಯುಕ್ತಿಗೊಂಡಿದ್ದ. ಹಿರೇಮಠನಿಗೆ ಎಲ್ಲೂ ಸೇವೆ ಸಲ್ಲಿಸುವ ಯೋಗ ಇಲ್ಲದಂತೆ ಕಾಣಿಸುತ್ತದೆ. ಅಂದಹಾಗೆ ಈತ ಸಿಂಧಗಿಯಲ್ಲಿದ್ದಾಗ ಈತನನ್ನು ಅಲ್ಲಿನ ಜನ "ಕಾಂಗ್ರೆಸ್ ಏಜೆಂಟ್" ಅಂತಾ ಕರೆಯುತ್ತಿದ್ದರಂತೆ.

ಆದರೆ ನಿಜ ವಿಷಯ ಯಾವುದೆಂದರೆ ಮುಖ್ಯಮಂತ್ರಿಯನ್ನು ಹಿರೇಮಠ "ಬೈದ" ಸಂದರ್ಭದಲ್ಲಿ ಅಲ್ಲಿ ಯಾವ ಸ್ಥಳೀಯ ಪತ್ರಕರ್ತರೂ ಇರಲಿಲ್ಲ, ಬರೀ ಜೆಡಿಎಸ್ ಪಕ್ಷದ ಪುಢಾರಿಗಳಿದ್ದರು. ಆದರೆ ತಮ್ಮ ಪಕ್ಷದ ಜನರ ಮಾತಿಗೆ ಜೋತು ಬಿದ್ದ ಮುಖ್ಯಮಂತ್ರಿಗಳು ಹಿರೇಮಠನನ್ನು ಅಮಾನತ್ತುಗೊಳಿಸಿದ್ದಾರೆ. "ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ" ಎಂದು ಹೇಳುತ್ತಿರುವ ಜಿಲ್ಲಾಧಿಕಾರಿ ಧನಂಜಯ ಮುಖ್ಯಮಂತ್ರಿಗಳ ಆಫೀಸಿನಿಂದ ಫ್ಯಾಕ್ಸ್ ಆದೇಶ ಬರುತ್ತಿದ್ದಂತೆ ಹಿರೇಮಠನನ್ನು ಸಸ್ಪೆಂಡ್ ಮಾಡಿದ್ದಾರೆ. ಪಕ್ಷದ ಪುಢಾರಿಗಳು ದೂರಿದರು ಎಂದ ಮಾತ್ರಕ್ಕೆ ಯಾವುದೇ ವಿಚಾರಣೆ ಇಲ್ಲದೆ, ಒಂದು ನೋಟೀಸ್ ಕೂಡ ಇಲ್ಲದೆ ಅಧಿಕಾರಿಯೊಬ್ಬನನ್ನು ಸಸ್ಪೆಂಡ್ ಮಾಡುವುದು ಸರಿಯಾದ ಕ್ರಮವಾ? ಅಥವಾ ಕೋ-ಜಾ ಸರ್ಕಾರದಲ್ಲಿ ಇದೆಲ್ಲ ಸಾಮಾನ್ಯವಾ?


ಶಿರಹಟ್ಟಿ ತಾಲೂಕ ಜಾತ್ಯತೀತ ಜನತಾದಳ
ಶ್ರೀ ತಿಪ್ಪಣ್ಣ ಎಸ್. ಸಂಶಿ
ಅಧ್ಯಕ್ಷರು,
ಲಕ್ಷ್ಮೇಶ್ವರ ಘಟಕ ಜಾತ್ಯತೀತ ಜನತಾದಳ
ಲಕ್ಷ್ಮೇಶ್ವರ-582 116.
ತಾ. ಶಿರಹಟ್ಟಿ ಜಿ. ಗದಗ
ದಿ. 3-3-2007.

-ಹುರಳಿಕುಪ್ಪೆ ವಿನಯ

ಮಿಡ್‌ನೈಟ್ ಮಸಾಲಾ

...ಈ ನೈಟ್ ಹಾಲ್ಟ್ ಕಾರ್ಯಕ್ರಮಗಳು ಶುರುವಾಗುವುದೇ ಮಿಡ್‌ನೈಟ್ ಆದ ನಂತರ. ಹಾಗೆ ಮಧ್ಯ ರಾತ್ರಿ ಹೋಗಿ ಅದು ಹೇಗೆ ಗ್ರಾಮಗಳನ್ನು ಸಾಧಿಸುತ್ತಾರೆ?

ಆದರೆ ಒಂದಂತೂ ನಿಜ. ಕಂದಾಯ ಇಲಾಖೆಯಿಂದ ಅತಿ ಹೆಚ್ಚು ಬೈಗುಳ ತಿಂದಿರುವ ಮುಖ್ಯಮಂತ್ರಿ ಈ ಕುಮಾರಸ್ವಾಮಿ. ಮಧ್ಯರಾತ್ರಿಯ ನಂತರ ಈ ಭೂಪ ಹಳ್ಳಿಹಳ್ಳಿ ತಿರುಗುವುದಕ್ಕೆ ಶುರು ಹಚ್ಚಿಕೊಂಡ ಮೇಲೆ ಈತನನ್ನು ಅನಿವಾರ್ಯವಾಗಿ ಫಾಲೋ ಮಾಡಬೇಕಿರುವ ಸರ್ಕಾರಿ ನೌಕರರು ಮತ್ತು ಅಧಿಕಾರಿಗಳು ಮನೆ ಮಠ ಬಿಟ್ಟು ಅಲೆಯುವಂತಾಗಿದೆ. ಅದಕ್ಕೇ ಅವರ ಹೆಂಡತಿಯರು ಕುಮಾರಸ್ವಾಮಿಗೆ ಹಿಡಿ ಹಿಡಿ ಶಾಪ ಹಾಕುತ್ತಿದ್ದಾರೆ.

ಮುಖ್ಯಮಂತ್ರಿ ಕುಮಾರಸ್ವಾಮಿಯವರ ಗ್ರಾಮ ವಾಸ್ತವ್ಯ ಎಂಬ ಮಿಡ್ ನೈಟ್ ಕಾರ್ಯಕ್ರಮ ಇತ್ತೀಚೆಗೆ ನಡೆದ ಪರಿ ಹೀಗಿದೆ:

ಬಾಗಲಕೋಟೆ ಜಿಲ್ಲೆಯ ಇಂಗಳಗಹಳ್ಳಿಯ ಏಡ್ಸ್ ಪೀಡಿತರ ಮನೆಯಲ್ಲಿ ತಂಗಲು ಕುಮಾರಸ್ವಾಮಿ ನಿಗಧಿಯಾಗಿದ್ದಕ್ಕಿಂತ ಒಂದು ದಿನ ತಡವಾಗಿ ಬಂದರು. ಹಾಗೆ ತಡವಾಗಿ ಬಂದದ್ದೂ ರಾತ್ರಿ ಒಂದು ಗಂಟೆ ಹದಿನೈದು ನಿಮಿಷಕ್ಕೆ. ಅದೇ ರೀತಿ ಬೆಳಗಾವಿಯ ಶೇಂಡೂರಿಗೆ ಬಂದದ್ದೂ ರಾತ್ರಿ ಒಂದು ಗಂಟೆಗೆ. ಇನ್ನು ಹಾವೇರಿಯ ಕಡೂರಿಗೆ ಬಂದದ್ದು ಸೂರ್ಯೋದಯದ ಸಮಯಕ್ಕೆ. ಹಾಗೆ ಬಂದವರೇ ಅವರಿಗೆಂದು ಹಾಸಿದ್ದ ಹಾಸಿಗೆ ಮುಟ್ಟಿ, ಮಲಗೆದ್ದ ಶಾಸ್ತ್ರ ಮಾಡಿದರು. ಬಾಗಲಕೋಟೆಯ ಉತ್ತೂರಿಗೆ 12.30 ಕ್ಕೆ ಬಂದವರೇ "ತುಂಬಾ ಸುಸ್ತಾಗಿದೆ, ಎನರ್ಜಿನೇ ಇಲ್ಲ, ಸಾರಿ. ಪ್ಯಾಕ್‌ಅಪ್" ಎಂದರಂತೆ.

ಮಧ್ಯರಾತ್ರಿಯವರೆಗೂ ತಮ್ಮನ್ನು ಕಾಯಿಸುವ, ತಡವಾಗಿ ಬಂದು ಹಿಂಸೆ ನೀಡುವ ಮುಖ್ಯಮಂತ್ರಿಯನ್ನು ಆತ ಹೋದಲೆಲ್ಲಾ ಜನ ಕ್ಯಾಕರಿಸಿ ಉಗಿಯುತ್ತಿದ್ದಾರೆ. ರಾಜ್ಯದ ಹಿತ ಪಕ್ಕಕ್ಕಿರಲಿ, ತಾವು ಮಲಗುವ ಗ್ರಾಮದ ಜನರ ಹಿತಕ್ಕಾದರೂ ಬೇಗ ಹೋಗಬೇಕು ಅನ್ನೋ ಪರಿಜ್ಞಾನ ಈ ಸಿ.ಎಂ.ಗೆ ಇಲ್ಲ.

ನಿಜವಾಗಿಯೂ ಕುಮಾರಸ್ವಾಮಿಗೆ ಗ್ರಾಮಗಳ ಸ್ಥಿತಿ ಸುಧಾರಿಸಬೇಕು, ಗ್ರಾಮೀಣಾ ಭಾಗದ ರೈತರ ಸಮಸ್ಯೆಗಳಿಗೆ ಸ್ಪಂದಿಸಬೇಕು ಅನ್ನೋ ಆಸಕ್ತಿ ಇದ್ದರೆ ಅವರು ಹಳ್ಳಿಗಳಿಗೆ ಹಗಲಿನಲ್ಲಿ ಭೇಟಿ ನೀಡಲಿ, ಜನರೊಂದಿಗೆ ಚರ್ಚಿಸಿ ಅವರ ಸಮಸ್ಯೆಗಳಿಗೆ ಕಿವಿ ಕೊಡಲಿ, ಇರುಳಾಗುವ ಮುನ್ನ ಜನತಾದರ್ಶನ ಮಾಡಲಿ. ಹಾಗೆ ಮಾಡಿದಾಗ ಅತಿಹೆಚ್ಚು ಜನರ ಸಮಸ್ಯೆಗಳನ್ನು ಬಗೆಹರಿಸುವುದು ಸುಲಭವಾಗುತ್ತದೆ.

ಕುಮಾರಸ್ವಾಮಿಯವರ ಈ ರಾತ್ರಿ ಗಿಮಿಕ್‌ನಿಂದಾಗಿ ಸರ್ಕಾರಿ ನೌಕರರ ಗೋಳು ನೋಡಲಾಗದೇ ತಹಶೀಲ್ದಾರ್ ಸಿ.ಎಂ. ಹಿರೇಮಠ "ಇದೆಲ್ಲ ರಾಜಕೀಯ ಗಿಮಿಕ್, ಪಾಲಿಟಿಕಲ್ ಗೇಮ್" ಎಂದಿದ್ದರೆ ಆಶ್ಚರ್ಯಪಡಬೇಕಿಲ್ಲ.

ಇಷ್ಟಕ್ಕೂ ವೃದ್ಧಾಪ್ಯ ವೇತನ, ರೇಷನ್ ಕಾರ್ಡ್ ಅರ್ಜಿಗಳನ್ನು ಸ್ವೀಕರಿಸಲು ಸಿಎಂ ಹೋಗಬೇಕಾ? ಡಿ.ಸಿ, ಎಸಿ, ತಹಶೀಲ್ದಾರ್, ಬಿಡಿಓಗಳು ಕೈಲೇ ಈ ಕೆಲಸವನ್ನು ಮಾಡಿಸಲಾಗುವುದಿಲ್ಲವಾ?

ಓಟು ಕೊಟ್ಟು ಗೆಲ್ಲಿಸಿದವರಿಗೆ ಚೆನ್ನಾಗಿ ನೀರು ಕುಡಿಸ್ತಿದ್ದಾನೆ ಶಾಸಕ ರಾಯರೆಡ್ಡಿ!


ಯಲಬುರ್ಗಾ ಮಂದಿಗೆ ಈಗ ನಿತ್ಯ ಶಿವರಾತ್ರಿ. ...ವು ಓಟು ಕೊಟ್ಟು ಗೆಲ್ಲಿಸಿದ ಶಾಸಕ ಬಸವರಾಜ ...ರಾಯರೆಡ್ಡಿ ಜನರನ್ನು ನಿತ್ಯರಾತ್ರಿ ನಿದ್ದೆಗೆಡುವಂತೆ ಮಾಡಿದ್ದಾನೆ. ಇದರ ಪರಿಣಾಮವಾಗಿ ರಾತ್ರಿ ...ಹೊತ್ತು ನಿದ್ದೆ ಮಾಡಬೇಕಾದ ಜನ ...ಬದ್ಧವಾಗಿ ರಾತ್ರಿಯಲ್ಲಿ ನಿಶಾಚರಿಗಳಂತೆ ...ಅಲೆಯುತ್ತ ಕುಡಿಯುವ ನೀರಿಗಾಗಿ ...ಪರದಾಡಬೇಕಿದೆ.



ಯಲಬುರ್ಗಾ ಮಂದಿಗೆ ಈಗ ...ಹಗಲು. ಇನ್ನು ಕೆಲವರಿಗೆ ರಾತ್ರಿ ...ವ್ಯತ್ಯಾಸ ಗೊತ್ತಾಗುತ್ತಿಲ್ಲ, ಆದರೆ ...ಕ ರಾಯರೆಡ್ಡಿ ಮಾತ್ರ ಬೆಂಗಳೂರಿನ ...[illegible]... ಯಲಬುರ್ಗಾ ... ಮಾತ್ರ ... ಮೇಲೆಯೇ ಜನ, ... [illegible] ..., ಸೈಕಲ್ ..., ರಿಕ್ಷಾ, ಟೆಂಪೋ ..., ಟ್ರ್ಯಾಕ್ಟರ್, ...

ಕುಮಾರ ಸ್ವಾಮಿ ಕೊಟ್ಟಿರುವ ಸೈಕಲ್‌ಗಳು ಹೀಗೆ ವಿವಿಧ ವಾಹನ ಗಳನ್ನು ಬಾಡಿಗೆ ಪಡೆದು ನೀರು ತರುತ್ತಾರೆ ಶಾಸಕ ರಾಯರೆಡ್ಡಿಯನ್ನು ಜಪಿಸುತ್ತ ಅಲ್ಲಲ್ಲಿ ಶಪಿಸುತ್ತ. ತಾಲ್ಲೂಕು ಕೇಂದ್ರವಾಗಿರುವ ಯಲಬುರ್ಗಾಕ್ಕೆ ಕುಡಿಯುವ ನೀರಿನ ಪೂರೈಕೆ ಮೂಲಗಳೇ ಯಾವುದಂತೂ ಗೊತ್ತಿಲ್ಲ. ಮೊದಲೆಲ್ಲ ಸುತ್ತಲಿನ ಕೆರೆಗಳಿಂದ ಕುಡಿಯುವ ನೀರಿನ ಸರಬರಾಜು ಆಗುತ್ತಿತ್ತು, ಆದರೆ ಈಗ ಅದೇ ಕೆರೆಗಳು ಶಾಲಾ ಮಕ್ಕಳಿಗೆ ಕ್ರಿಕೆಟ್ ಮೈದಾನಗಳಾಗಿವೆ. ಹೀಗಾಗಿ ಸದ್ಯಕ್ಕೆ ಯಲಬುರ್ಗಾಕ್ಕೆ ನೀರಿನ ಮೂಲಗಳು ಇರುವುದು ಐದೇ ಜಾಗಗಳಲ್ಲಿ, ಕೊಪ್ಪಳ ರಸ್ತೆಯಲ್ಲಿ ನಳ್ಳಿ, ಪೊಲೀಸ್ ಠಾಣೆಯ ಹತ್ತಿರದ ನಳ್ಳಿ, ಬಸವೇಶ್ವರ ದೇವಸ್ಥಾನದ ನಳ್ಳಿ, ರೈತರ ತೋಟಗಳಲ್ಲಿನ ಬೋರ್‌ವೆಲ್‌ಗಳು.

ಇಷ್ಟೆಲ್ಲ ನೀರಿನ ತೊಂದರೆ ಇದ್ದರೂ ಪಟ್ಟಣ ಪಂಚಾಯತ್ ಕಣ್ಣು ಮುಚ್ಚಿ ಕುಳಿತಿದೆಯಾ? ಅಂತ ಕೇಳಬಹುದು ನೀವು. ಆದರೆ ಇಲ್ಲಿ ಪಟ್ಟಣ ಪಂಚಾಯತಿಯೇ ಬರ್ಬಾದಾಗಿದ್ದು, ಸೂಪರ್ ಸೀಡ್ ಆಗಿ ನಾಲ್ಕು ತಿಂಗಳಾಗಿದೆ ಕೇಳೋದಿರಲಿ, ಬಾಯಿ ಬಡ್ಕೊಂಡರೂ ಕೇಳೋರಿಲ್ಲ ಅಲ್ಲಿ! ಇನ್ನು ಪಟ್ಟಣ ಪಂಚಾಯ್ತಿಗೆ ಶಾಸಕ ರಾಯರೆಡ್ಡಿಯ ತಿನ್ನುವ ಕೈ-ತೊಳಕೊಳ್ಳೋ ಕೈ ಆಗಿರುವ ತಹಶೀಲ್ದಾರನೇ ಆಡಳಿತಾಧಿಕಾರಿ, ಚೀಫ್ ಆಫೀಸರ್ ಇಲ್ಲದೆ ಶಿರಸ್ತೇದಾರನೇ ಚೀಫ್ ಆಫೀಸರು. ಇವರಿಗೆ ತಮ್ಮದೇ ತೊಳಕೊಳ್ಳೋಕೆ ಪುರುಸೊತ್ತಿಲ್ಲ, ಇನ್ನು ಪಟ್ಟಣ ಪಂಚಾಯತಿಯ ನೀರಿನ ವಿಭಾಗದಲ್ಲಿದ್ದ ಜೆ.ಇ. ಹುದ್ದೆ ಖಾಲಿ ಖಾಲಿ.



ಇದಿಷ್ಟು ಸತ್ಯ ಅರಿತು ರೋಸಿಹೋದ ಯಲ ಬುರ್ಗಾ ಜನ ತಾವೇ ಎರಡು ತಿಂಗಳ ಹಿಂದೆ ಯಲಬುರ್ಗಾ ಬಂದ್ ಆಚರಿಸಿದಾಗ, ಎಚ್ಚೆತ್ತ ಶಾಸಕ ರಾಯರೆಡ್ಡಿ ಬಂದ್‌ಗೆ ಪ್ರತಿಯಾಗಿ ಬರೀ ಇನ್ನೂರು ಜನರಿದ್ದ 'ಬೃಹತ್' ಪ್ರತಿಭಟನಾ ರ್‍ಯಾಲಿ ಮಾಡಿ ರಾಜ್ಯ ಸರ್ಕಾರ ಸಮಸ್ಯೆಗಳನ್ನು ಬಗೆಹರಿಸದಿದ್ದರೆ ಕೊಪ್ಪಳ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಕೂರುತ್ತೇನೆ ಅಂತ ರೀಲ್ ಬಿಟ್ಟ! ರೀಲ್ ಬಿಟ್ಟು ಎರಡು ತಿಂಗಳಾಯಿತು ಮೊನ್ನೆ ಕಾಣಿಸಿ ಕೊಂಡ ರಾಯರೆಡ್ಡಿ ಶಾಲೆಯ ಕಟ್ಟಡಗಳನ್ನು ಉದ್ಘಾಟಿಸುತ್ತ, ಚಪ್ಪಾಳೆ ಪಡೆಯುತ್ತ ಬಾಯಿಗೆ ಬಂದದ್ದನ್ನು ಹೇಳುತ್ತ ಹೊರಟಿದ್ದಾನೆ. ಇನ್ನು ಜಿಲ್ಲಾಧಿಕಾರಿ ನದೀನ್‌ರಾಜ್ ಸಿಂಗ್ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾದರೆ ಜಿಲ್ಲಾಡಳಿತ ಸಮೃದ್ಧವಾಗಿದೆ ಅಂತ ಹೇಳುತ್ತಿದ್ದಾನೆ. ಆದರೆ ಒಮ್ಮೆಯೂ ಯಲಬುರ್ಗಾದ ಸಮಸ್ಯೆಯತ್ತ ಗಮನಹರಿಸಿಲ್ಲ.

ಮೊದಲೆಲ್ಲ ಅಭಿವೃದ್ಧಿ ಹರಿಕಾರ, ಚಾಣಾಕ್ಷ ಎಂದು ಹೆಸರಾದ ರಾಯರೆಡ್ಡಿ ಜಿಲ್ಲಾ ಕಾಂಗ್ರೆಸ್ಸನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಹೋಗಿ ಮುಗ್ಗರಿಸಿ, ಅತಂತ್ರವಾಗಿ ಜನರ ಜಾತಿಯ ಸೆಂಟಿಮೆಂಟ್‌ಗಳೊಂದಿಗೆ ಆಟವಾಡುತ್ತಿದ್ದಾನೆ. ಇಂತಹ ಶಾಸಕನಿಗೆ ಜಿಲ್ಲಾ ಮಂತ್ರಿ ಇಕ್ಬಾಲ್ ಅನ್ಸಾರಿ, ಬಸವರಾಜ ರಾಯರೆಡ್ಡಿ ದೇಶದಲ್ಲಿಯೇ ಮಾದರಿ ಶಾಸಕ ಎಂದು ಸರ್ಟಿಫಿಕೆಟ್ ನೀಡಿ ತನ್ನ ಸಾಚಾತನ ಮೆರೆದಿದ್ದಾನೆ. ಇಂತಹ ಅನ್ಸಾರಿಯನ್ನು ಸರ್ಕಾರಿ ಕಾರ್ಯಕ್ರಮಕ್ಕೆ ಕರೆಯದೇ ಉದ್ಧಟತನ ತೋರಿದ್ದ ಶಾಸಕ ರಾಯರೆಡ್ಡಿ, ಇಬ್ಬರ ಬೆಂಬಲಿಗರೂ ಮಾರಾಮಾರಿಯವರೆಗೂ ಬಂದಿದ್ದರು. ಇಂದು ಅದೇ ಶಾಸಕನಿಗೆ ಮಂತ್ರಿ, ಶಹಬ್ಬಾಸ್‌ಗಿರಿ ಕೊಡುತ್ತಾನೆಂದರೆ ಅನ್ಸಾರಿ ಇನ್ನೆಂತಹ ಜನವಿರೋಧಿ ... ಲೆಕ್ಕ ಹಾಕಿ ಯಲಬುರ್ಗಾ ಮಂದಿ ಎಷ್ಟೇ ಬಾಯಿ ಬಡಿದುಕೊಳ್ಳಲಿ. ... [illegible] ... ಗುಟುಕು

-[illegible]

ಜಾನಪದದಲ್ಲಿ ಸೀತೆ

ನನ್ನ ಮೊದಲು ಗಮನವನ್ನು ಸೆಳೆದದ್ದು ಗಿರಿಯಮ್ಮನ 'ಲವಕುಶ ಕಾಳಗ'ವನ್ನ ನೀವು ಈ ಮೂಲಕ ನಮ್ಮೆಲ್ಲರ ಕುತೂಹಲಕ್ಕೆ ಪಾತ್ರವಾಗಿರುವ ಗೀತೆಯು ಬಿ.ವಿ. ವೀರಭದ್ರಪ್ಪನವರು ಈಗ 'ಜಾನಪದ ಜಾತಕ'ವನ್ನು ಮುಂದಿಟ್ಟು ಸೀತಾಲಕ್ಷ್ಮಣರ ಬಗ್ಗೆ ಇಷ್ಟು ಬೆಳಕು ಚೆಲ್ಲುವ ಉಪಕಾರ ಮಾಡಿದ್ದಾರೆ:

ಪೂರ್ವಕಾಲದಲ್ಲಿ ವಾರಣಾಸಿಯಲ್ಲಿ ದಶರಥರಾಜನು ಬೀಗಿಲೊಳಗಾಗದೆ ಧರ್ಮಪೂರ್ವಕ ರಾಜ್ಯಭಾರ ಮಾಡುತ್ತಿದ್ದನು. ಅವನಿಗಿದ್ದ 16,000 ಹೆಂಡತಿಯರಲ್ಲಿ ಪಟ್ಟದ ರಾಣಿಗೆ ಇಬ್ಬರು ಗಂಡುಮಕ್ಕಳು ಮತ್ತು ಒಬ್ಬ ಮಗಳು ಜನಿಸಿದರು. ಜ್ಯೇಷ್ಠ ಪುತ್ರನ ಹೆಸರು ರಾಮಪಂಡಿತ. ಎರಡನೆಯವನ ಹೆಸರು ಲಕ್ಷ್ಮಣಕುಮಾರ ಮತ್ತು ಮಗಳ ಹೆಸರು ಸೀತಾದೇವಿ. ಸ್ವಲ್ಪ ಕಾಲದಲ್ಲಿ ಪಟ್ಟದ ರಾಣಿ ಕಾಲವಾದಳು. ಅವಳು ಗತಿಸಿದ ನಂತರ ಬಹುಕಾಲ ರಾಜನು ಶೋಕದಿಂದಿದ್ದನು. ಅಮಾತ್ಯರು ಸಮಾಧಾನ ಹೇಳಿದ ಮೇಲೆ ರಾಜ ಎಚ್ಚರಗೊಂಡು ಅವರ ಕರ್ಮಗಳನ್ನು ಮಾಡಿ ಮತ್ತೊಬ್ಬಳನ್ನು ಪಟ್ಟದ ರಾಣಿಯನ್ನಾಗಿ ಮಾಡಿಕೊಂಡ. ಅವಳು ರಾಜನಿಗೆ ಪ್ರಿಯಳೂ ಮತ್ತು ಮನೋರಂಜಕಳೂ ಆದಳು. ಅನಂತರ ಅವಳು ಗರ್ಭಿಣಿಯಾಗಿ ಬಯಕೆಗಳನ್ನು ಹೊಂದಿ, ಕೊನೆಗೆ ಗಂಡು ಮಗುವನ್ನು ಹೆತ್ತಳು. ಮಗುವಿಗೆ ಭರತಕುಮಾರನೆಂದು ನಾಮಕರಣ ಮಾಡಿದರು. ಪುತ್ರವಾತ್ಸಲ್ಯದಿಂದ ರಾಜ ಇವಳೊಡನೆ 'ಭದ್ರೆ, ನಿನಗೆ ವರ ಕೊಡುವೆ. ಕೇಳಿಕೋ' ಎಂದನು. ಅವಳು ವರವನ್ನು ಸ್ವೀಕರಿಸಿ ಕುಮಾರನಿಗೆ ಏಳು ವರ್ಷಗಳಾಗುವ ವೇಳೆಗೆ ರಾಜ ಸನ್ನಿಧಿಗೆ ಬಂದು 'ದೇವಾ, ನನ್ನ ಕುಮಾರನಿಗಾಗಿ ವರವನ್ನು ದಯಪಾಲಿಸಿದಿರಿ. ಈಗ ಅದನ್ನು ನೀಡಬೇಕು' ಎಂದು ಭಿನ್ನವಿಸಿಕೊಂಡಳು.

'ಭದ್ರೆ, ತೆಗೆದುಕೋ.'

'ದೇವಾ, ನನ್ನ ಮಗನಿಗೆ ರಾಜ್ಯವನ್ನು ನೀಡಬೇಕು.'

ರಾಜ ಚೆರಳಿಂದ ಬೆದರಿಸುತ್ತಾ 'ದುಷ್ಟಳೆ, ನೀನು ನಾಶವಾಗುವೆ! ನನ್ನ ಇಬ್ಬರು ಕುಮಾರರು ಅಗ್ನಿಜ್ವಾಲೆಯಂತೆ ಪ್ರಕಾಶಿಸುತ್ತಿದ್ದಾರೆ. ಅವರನ್ನು ಬಿಟ್ಟು ನಿನ್ನ ಕುಮಾರನಿಗೆ ರಾಜ್ಯವನ್ನು ಯಾಚಿಸುವೆಯಾ?' ಎಂದರು. ಅವಳು ಹೆದರಿ ಶಯ್ಯಾಗೃಹವನ್ನು ಸೇರಿ ಹಾಸಿಗೆ ಹಿಡಿದಳು. ಆನಂತರ ಅವಳು ಮಾತುಮಾತಿಗೆ ಕುಮಾರನಿಗೆ ರಾಜ್ಯಬೇಕೆಂದು ಯಾಚಿಸುತ್ತಿದ್ದಳು. ಅವಳ ವರವನ್ನು ನೆರವೇರಿಸದೆ ರಾಜ ತನ್ನಲ್ಲಿ 'ಸ್ತ್ರೀಯರಿಗೆ ಕೃತಜ್ಞತೆ ಇಲ್ಲ, ಅವರು ದ್ರೋಹವನ್ನು ಚಿಂತಿಸುತ್ತಾರೆ. ಮೋಸದಿಂದ ರಾಜಮುದ್ರಿಕೆಯನ್ನು (ವಿಷ) ಹಾಕಿ ನನ್ನ ಕುಮಾರರನ್ನು ಸಂಹರಿಸುವರಲ್ಲವೆ?' ಎಂದು ಸಂದೇಹ ತಾಳಿದನು. ಕುಮಾರರನ್ನು ಅಪ್ಪಿಕೊಂಡು ವಿಷಯವನ್ನು ವಿವರಿಸಿ 'ನೀವು ಇಲ್ಲೇ ಇದ್ದುದಾದರೆ ಅಪಾಯ ತಪ್ಪಿದ್ದಲ್ಲ, ನೀವು ಯಾವುದಾದರು ಸಾಮಂತ ರಾಜ್ಯದಲ್ಲಾಗಲಿ, ಅರಣ್ಯದಲ್ಲಾಗಲಿ ವಾಸವಾಗಿರಿ. ನನ್ನ ನಂತರ ನೀವು ಹಿಂತಿರುಗಿ ವಂಶ ಪರಂಪರಾಗತ ರಾಜ್ಯವನ್ನು ಸ್ವೀಕರಿಸಿ' ಎಂದನು.

ನಂತರ ರಾಜನು ಜ್ಯೋತಿಷಿಗಳನ್ನು ಕರೆಸಿ ತನ್ನ ಆಯಸ್ಸನ್ನು ಕುರಿತು ಕೇಳಿದನು. ಇನ್ನು 'ಹನ್ನೆರಡು ವರ್ಷ' ಎಂದು ಅವರು ಹೇಳಿದರು. ಆಗ ರಾಜನು ಕುಮಾರರನ್ನು ಕುರಿತು 'ಮಕ್ಕಳಿರಾ, ನೀವು ಇಂದಿನಿಂದ ಹನ್ನೆರಡು ವರ್ಷಗಳ ನಂತರ ಹಿಂತಿರುಗಿ ಬಂದು ರಾಜ್ಯಭಾರ ಮಾಡಿರಿ' ಎಂದು ಹೇಳಲು ಅವರು 'ಹಾಗೆಯೇ ಆಗಲಿ' ಎಂದು ರಾಜಭವನದೊಳಗಿನವರು ಕಣ್ಣೀರು ಸುರಿಸುತ್ತಿರಲು ನಗರವನ್ನು ಬಿಟ್ಟು ಹೊರಟರು. 'ನಾನು ಸಹ ಸೋದರರರೊಡನೆ ಹೋಗುತ್ತೇನೆ' ಎಂದು ಸೀತಾದೇವಿ ತಂದೆಗೆ ನಮಸ್ಕರಿಸಿ ಕಣ್ಣೀರಿನೊಡನೆ ಹೊರಟಳು. ತಮ್ಮೊಡನೆ ಬರುವ ಜನರನ್ನು ಹಿಂದಕ್ಕೆ ಕಳಿಸಿ ಅವರು ಹಿಮಾಲಯಕ್ಕೆ ನಡೆದರು. ನೀರು ಹಣ್ಣು ಹಂಪಲುಗಳು ಸುಲಭವಾಗಿ ಸಿಗುವ ಸ್ಥಳದಲ್ಲಿ ಅವರು ಆಶ್ರಮ ಕಟ್ಟಿಕೊಂಡು ಕಂದಮೂಲ ಫಲಗಳಿಂದ ಜೀವನ ನಡೆಸುತ್ತಿದ್ದರು. ಲಕ್ಷ್ಮಣಪಂಡಿತ ಮತ್ತು ಸೀತಾದೇವಿಯರು ರಾಮಪಂಡಿತನನ್ನು ಕುರಿತು 'ನೀನು ನಮಗೆ ಪಿತೃಸಮಾನನಾಗಿದ್ದೀಯೆ, ಆದ್ದರಿಂದ ಆಶ್ರಮದಲ್ಲಿ ಇರು. ನಾವು ಕಂದಮೂಲ ಫಲಾದಿಗಳನ್ನು ತಂದು ನಿನ್ನನ್ನು ಪೋಷಿಸುತ್ತೇವೆ' ಎಂದು ಹೇಳಲು ರಾಮಪಂಡಿತನು ಆಶ್ರಮದಲ್ಲೇ ಇರುತ್ತಿದ್ದನು. ಅವರಿಬ್ಬರು ಕಂದಮೂಲ ಫಲಾದಿಗಳನ್ನು ತಂದು ನೀಡಿ ಆತನ ಸೇವೆ ಮಾಡುತ್ತಿದ್ದರು.


ಇತ್ತ ದಶರಥ ಮಹಾರಾಜ ಪುತ್ರಶೋಕದಿಂದ ಒಂಭತ್ತನೆಯ ವರ್ಷದಲ್ಲೇ ಮರಣ ಹೊಂದಿದನು. ಅಪರ ಕರ್ಮಗಳು ನಡೆದ ಮೇಲೆ ಭರತಕುಮಾರ ಅಭಿಷೇಕಕ್ಕೆ ಅಮಾತ್ಯರು ಒಪ್ಪಲಿಲ್ಲ, 'ರಾಜ್ಯ ಚಕ್ರಾಧಿಪತಿ ಅರಣ್ಯದಲ್ಲಿ ವಾಸಿಸುತ್ತಿದ್ದಾನೆ' ಎಂದು ಅವರೆನ್ನಲು ಭರತಕುಮಾರನು 'ರಾಮಪಂಡಿತನನ್ನು ವನದಿಂದ ಕರೆತಂದು ಪಟ್ಟಾಭಿಷೇಕ ಮಾಡಿಸೋಣ' ಎಂದು ಚಿಂತಿಸಿ ಪಂಚ ರಾಜಲಾಂಛನಗಳು, ಚತುರಂಗ ಬಲ ಸಮೇತನಾಗಿ ಹೊರಟು ರಾಮಪಂಡಿತನ ನಿವಾಸವನ್ನು ಸಮೀಪಿಸಿ, ಸ್ವಲ್ಪ ದೂರದಲ್ಲೇ ಶಿಬಿರ ಹಾಕಿಸಿದನು. ಲಕ್ಷ್ಮಣ ಪಂಡಿತ ಮತ್ತು ಸೀತೆ ಅರಣ್ಯದೊಳಗೆ ಹೋಗಿದ್ದ ಸಮಯದಲ್ಲಿ ಭರತಕುಮಾರನು ರಾಮಪಂಡಿತನ ಆಶ್ರಮ ಸೇರಿ, ಸುಪ್ರತಿಷ್ಠಿತವಾದ ಸುವರ್ಣ ವಿಗ್ರಹದಂತೆ ನಿಶ್ಚಿಂತೆಯಿಂದ ಕುಳಿತಿದ್ದ ರಾಮಪಂಡಿತನನ್ನು ನೋಡಿದನು. ನಂತರ ಸಮೀಪಕ್ಕೆ ತೆರಳಿ ನಮಸ್ಕರಿಸಿ ಒಂದು ಪಕ್ಕದಲ್ಲಿ ನಿಂತುಕೊಂಡು ರಾಜನ ಮರಣ ವಾರ್ತೆಯನ್ನು ತಿಳಿಸಿ, ಅಮಾತ್ಯರೊಡನೆ ರಾಮನ ಪಾದಗಳಿಗೆ ಬಿದ್ದು ರೋದನ ಮಾಡತೊಡಗಿದನು. ರಾಮಪಂಡಿತನು ಚಿಂತಿಸಿಲ್ಲ, ರೋದಿಸಲಿಲ್ಲ, ಆತನ ಆಕೃತಿಯಲ್ಲಿ ವಿಕಾರ ತೋರಲಿಲ್ಲ, ಸಾಯಂಕಾಲಕ್ಕೆ ಸೀತಾಲಕ್ಷ್ಮಣರು ಕಂದಮೂಲ ಫಲಾದಿಗಳನ್ನು ತೆಗೆದುಕೊಂಡು ಬಂದರು. ರಾಮನು ತನ್ನಲ್ಲಿ 'ಈತನು ಚಿಕ್ಕವನು. ನನಗಿರುವಷ್ಟು ದೃಢತೆ ಅವನಿಗಿಲ್ಲ, ತಂದೆಯ ಮರಣ ವಾರ್ತೆಯನ್ನು ನೇರವಾಗಿ ಹೇಳಿದರೆ ಶೋಕೋದ್ವೇಗ ಉಂಟಾಗಿ ಹೃದಯ ಸ್ತಂಭನವಾದರೂ ಆಗಬಹುದು. ಇವರಿಬ್ಬರನ್ನು ಜಲಾಶಯಕ್ಕೆ ಕಳಿಸಿ ಈ ವೃತ್ತಾಂತವನ್ನು ತಿಳಿಸುವೆನು' ಎಂದು ಆಲೋಚಿಸಿ, ಎದುರಿಗಿರುವ ನೀರಿನತ್ತ ತೋರಿಸಿ 'ನೀವು ಬಹಳ ದಣಿದು ಬಂದಿದ್ದೀರಿ. ನೀರಿನಲ್ಲಿ ಸ್ನಾನ ಮಾಡಿ' ಎಂದು ಈ ಗಾಥೆಯನ್ನು ಉಸುರಿದನು:

'ಲಕ್ಷ್ಮಣಾ ಸೀತಾ ನೀರೊಳಗಿಳಿಯಿರಿ.'

ಅವರು ನೀರಿನೊಳಕ್ಕೆ ನಡೆದು ನಿಂತುಕೊಂಡರು. ನಂತರ ರಾಮಪಂಡಿತನು ವೃತ್ತಾಂತವನ್ನು ವಿವರಿಸುತ್ತಾ ಶೇಷಗಾಥೆಯನ್ನು ಉಸುರಿದನು:

'ನಮ್ಮ ತಂದೆ ದಶರಥ ಮಹಾರಾಜನು
ಗತಿಸಿದ ಸಂಗತಿಯನ್ನು ಹೇಳಲು ಭರತನಿಂದು....'

ತಂದೆಯ ಮರಣವಾರ್ತೆಯನ್ನು ಕೇಳಿ ಅವರು ಮೂರ್ಛೆ ಹೋದರು. ಎರಡನೆಯ ಸಾರಿ ಮೂರ್ಛೆ ಹೋದರು. ಮೂರನೆ ಸಾರಿ ಸಹ ಅವರು ಮೂರ್ಛೆ ಹೋಗಲು ಅಮಾತ್ಯರು ಅವರನ್ನು ನೀರಿನೊಳಗಿಂದ ಹೊರಕ್ಕೆ ಕರೆತಂದು ಕುಳ್ಳಿರಿಸಿದರು. ಭರತಕುಮಾರನು 'ತಂದೆಯ ಮರಣವಾರ್ತೆಯನ್ನು ಕೇಳಿ ಸೋದರ ಲಕ್ಷ್ಮಣ ಮತ್ತು ಸೋದರಿ ಸೀತೆ ದುಃಖವನ್ನು



ಕ್ರಿಕೆಟ್: ಕರಿಯರು ಮತ್ತು ಬಿಳಿಯರ ನಡುವಿನ ಯುದ್ಧ



ಅವರಿಗೆ ಕ್ರಿಕೆಟ್ ಎಂಬುದು ತಮ್ಮನ್ನು ಸುತ್ತುವರೆದ ವಸಾಹತುಶಾಹಿ ಮತ್ತು 'ಬಿಳಿ ಶ್ರೇಷ್ಠ'ತೆಯ ಬಂಧನಗಳನ್ನು ಮುರಿದು ಹಾಕುವುದಕ್ಕಾಗಿನ ಒಂದು ಸಾಧನವಾಗಿತ್ತು. ಬಿಳಿ ಮನುಷ್ಯನನ್ನು ತನ್ನದೇ ಆಟದಲ್ಲಿ ಸೋಲಿಸುವ ಒಂದು ಅವಕಾಶ ಮತ್ತು ಆಯುಧವಾಗಿತ್ತು.

1974 ರಿಂದ ಮೊದಲುಗೊಂಡು ಸುಮಾರು ಎರಡು ದಶಕಗಳ ಕಾಲ ಕ್ರಿಕೆಟ್ ಜಗತ್ತನ್ನು ಬೇರೆಲ್ಲ ದೇಶಗಳಿಗಿಂತ ಮಿಗಿಲಾಗಿ ಆಳಿದ್ದು ವೆಸ್ಟ್‌ಇಂಡೀಸ್. ಇದು ಕ್ರಿಕೆಟ್ ಆಡುವ ದೇಶಗಳಲ್ಲೆಲ್ಲಾ ಅತ್ಯಂತ ಚಿಕ್ಕ ಮತ್ತು ಕಡುಬಡತನದ ದೇಶ; ಇದು ಕರೀಬಿಯನ್ ಸಮುದ್ರದಲ್ಲಿನ ಚಿಕ್ಕ ಪುಟ್ಟ ದ್ವೀಪ ರಾಷ್ಟ್ರಗಳ ಸಮುಚ್ಚಯ.

ಆಳುವ ಬಿಳಿಯರು ಕರೀಬಿಯನ್ ದ್ವೀಪಗಳ ಕಪ್ಪು ಮತ್ತು ವರ್ಣೀಯ ಜನರನ್ನು 40 ರ ದಶಕದ ತನಕ ವ್ಯವಸ್ಥಿತವಾಗಿ ಕ್ರಿಕೆಟ್ ಲೋಕದಿಂದ ಹೊರಗಿಟ್ಟ ವಾಸ್ತವಾಂಶವನ್ನು ಪರಿಗಣಿಸಿದರೆ ವೆಸ್ಟ್‌ಇಂಡೀಸ್‌ನವರ ಈ ಸಾಧನೆ ಸಣ್ಣದೇನೂ ಅಲ್ಲ. 70 ರ ದಶಕದ ಹೊತ್ತಿಗೆ ವೆಸ್ಟ್‌ಇಂಡೀಸ್ ಇಡೀ ಪರಿಸ್ಥಿತಿಯನ್ನೇ ತಿರುವು ಮುರುವು ಮಾಡಿಬಿಟ್ಟಿತು. ಅವರು 1974 ರಲ್ಲಿ ವಿಶ್ವಕಪ್‌ನ್ನು ಗೆದ್ದದ್ದು ಇಡೀ ಜಗತ್ತಿಗೆ ಒಂದು ವಿಸ್ಮಯಕಾರಿ. ಅದ್ಭುತ ಚಮತ್ಕಾರವೇ ಆಗಿತ್ತು, ಆದರೆ ಈ ಅದ್ಭುತ ಚಮತ್ಕಾರ 1979 ರಲ್ಲಿ ಮತ್ತೊಮ್ಮೆ ಮರುಕಳಿಸಿದಾಗ ಇಡೀ ಬಿಳಿ ಜಗತ್ತಿಗೆ ಕಪ್ಪುಶಕ್ತಿಯ ಬಗ್ಗೆ ಒಂದೆರಡು ಅಂಶಗಳು ಅರಿವಿಗೆ ಬಂದವು. ಇದು ರೋಮ್ ಸಾಮ್ರಾಜ್ಯಕ್ಕೆ ಸವಾಲೊಡ್ಡಿ ಅದನ್ನು ಕಿತ್ತೊಗೆದ ಗುಲಾಮಿ ಬಂಡಾಯಕ್ಕೆ ಸರಿಸಮಾನವಾದುದೇ ಆಗಿತ್ತು,

ಈ ಹೊತ್ತು ನಾವು 'ಶ್ರೇಷ್ಠ ಕ್ರಿಕೆಟಿಗ' ಪಟ್ಟ ಬ್ರಿಯಾನ್ ಲಾರಾಗೆ ಸಿಗುತ್ತೋ ಅಥವಾ ಸಚಿನ್ ತೆಂಡೂಲ್ಕರ್‌ಗೆ ಸಿಗುತ್ತೋ ಎಂಬ ಕೊನೆಯಿಲ್ಲದ ಮತ್ತು ಅರ್ಥವಿಲ್ಲದ ಚರ್ಚೆಯಲ್ಲಿ ನಿರತರಾಗಿರುತ್ತೇವೆ. 1974 ರಿಂದ 1994 ರ ವರೆಗಿನ ಆ ಎರಡು ದಶಕಗಳಲ್ಲಿ ವೆಸ್ಟ್‌ಇಂಡೀಸ್‌ನ ಪ್ರತಿಯೊಬ್ಬ ಆಟಗಾರರೂ ಇಂದಿನ ಕ್ರಿಕೆಟ್ ಹೀರೋಗಳಿಗಿಂತ ಹೆಚ್ಚು ಶ್ರೇಷ್ಠರಾಗಿದ್ದರು.

ಅವರಿಗೆ ಕ್ರಿಕೆಟ್ ಎಂಬುದು ತಮ್ಮನ್ನು ಸುತ್ತುವರೆದ ವಸಾಹತುಶಾಹಿ ಮತ್ತು 'ಬಿಳಿ ಶ್ರೇಷ್ಠ'ತೆಯ ಬಂಧನಗಳನ್ನು ಮುರಿದು ಹಾಕುವುದಕ್ಕಾಗಿನ ಒಂದು ಸಾಧನವಾಗಿತ್ತು. ಬಿಳಿ ಮನುಷ್ಯನನ್ನು ತನ್ನದೇ ಆಟದಲ್ಲಿ ಸೋಲಿಸುವ ಒಂದು ಅವಕಾಶ ಮತ್ತು ಆಯುಧವಾಗಿತ್ತು. ಗೆಲುವು ಆತ್ಮಗೌರವವಾಗಿತ್ತು. ಹಣ ಮತ್ತು ಕೀರ್ತಿ ಬಹುಶಃ ರೋಮ್‌ನಲ್ಲಿ ಆರ್ಭಟಿಸುವ ಜನಸ್ತೋಮ ರೋಮ್ ಸಾಮ್ರಾಜ್ಯದ ಕತ್ತಿ ಮಲ್ಲರಿಗೆ ಎಸೆದ ತುಚ್ಛ ತುಣುಕುಗಳಂತಿದ್ದವು.

ಕ್ರೀಡೆಯಲ್ಲಿ ರಾಜಕೀಯವನ್ನೇಕೆ ಬೆರೆಸುತ್ತಿದ್ದೀರಿ? ಕೇವಲ ಒಂದು ಆಟದಲ್ಲಿ ನೀವು ಅತಿಯಾದದ್ದನ್ನೇ ನೋಡುತ್ತಿಲ್ಲವೆ? ಇಷ್ಟಕ್ಕೂ ಅದು ಸಭ್ಯ ಜನರ ಆಟ ಅಲ್ಲವೆ? -ಎಂದೆಲ್ಲಾ ನೀವು ಪ್ರಶ್ನಿಸಬಹುದು. ನಾವು ನಮ್ಮ ಸುಖದಾಯಕ ರೂಮುಗಳಿಂದಲೇ ಕ್ರಿಕೆಟನ್ನು ನೋಡಿ ಆನಂದಿಸುತ್ತೇವಾದ್ದರಿಂದ ಎಲ್ಲ ಆಟಗಾರರು ಮತ್ತು ಇತರರೆಲ್ಲರೂ ಇದನ್ನು ಒಂದು ಕ್ರೀಡೆಯಾಗಿ ಮಾತ್ರವೇ ನೋಡುತ್ತಾರೆಂದು ನಾವು ನಂಬುತ್ತೇವೆ. ಆದರೆ ನಮ್ಮ ಆಧುನಿಕ ಆಟಗಾರರಲ್ಲಿನ ಕೆಲವರು ಅದನ್ನು ಕೇವಲ ಹಣವನ್ನು ಸೃಜಿಸುವ ಒಂದು ಯಂತ್ರವನ್ನಾಗಿ ಮಾತ್ರ ನೋಡುತ್ತಾರೆ. ಏಕೆಂದರೆ ಅದು ಅವರಿಗೆ ದೊಡ್ಡ ಮಟ್ಟದ ಪಂದ್ಯ ಶುಲ್ಕವನ್ನು ತಂದುಕೊಡುತ್ತದೆ ಮಾತ್ರವಲ್ಲ, ಕೋಟ್ಯಂತರ ರೂಪಾಯಿಗಳ ಜಾಹೀರಾತು ಗುತ್ತಿಗೆಗಳೂ ದೊರೆಯುತ್ತವೆ. ದೂರದರ್ಶನ ಮತ್ತು ಮುದ್ರಣ ಮಾಧ್ಯಮಗಳಲ್ಲಿಂದು ಅತಿಹೆಚ್ಚು ಸಂಭಾವನೆ ಪಡೆಯುವ ಜನರಲ್ಲಿ ಕೆಲವರೆಂದರೆ ಕಾಮೆಂಟರಿ ನಿರೂಪಕರು ಮತ್ತು ಕ್ರೀಡಾ ಅಂಕಣಕಾರರೇ. ಅವರು ಅಷ್ಟು ಮೊತ್ತದ ಹಣವನ್ನು ಗಳಿಸುತ್ತಿದ್ದಾರೆಂದರೆ ತಾವು ಆಟವನ್ನು ಆನಂದಿಸುತ್ತಿದ್ದೇವೆಂದು ಅವರು ನಂಬಲೇಬೇಕೆಂದು ನನಗೆ ಅನ್ನಿಸುತ್ತದೆ. ಅವರು ವ್ಯಾಪಾರ ಮತ್ತು ಆನಂದಗಳನ್ನು ಯಾವುದೇ ನಾಚಿಕೆ ಇಲ್ಲದೇ ಬೆರೆಸುತ್ತಿದ್ದಾರೆಂದೇ ಹೇಳಬೇಕು.

ವಾಸ್ತವ ಏನೆಂದರೆ, ಕ್ರಿಕೆಟ್ ಕೇವಲ ಒಂದು ಆಟವಾಗಿ ಎಂದೂ ಇರಲೇ ಇಲ್ಲ, ಡಾನ್ ಬ್ರಾಡ್ಮನ್‌ನ ದಿನಗಳಲ್ಲೂ ಕೂಡ ಅದು ಕ್ರೀಡಾ ಮನೋಭಾವಕ್ಕಿಂತ ವಿವಾದದಂತಿದ್ದುದೇ ಹೆಚ್ಚು. ಡೊಗ್ಲಾಸ್ ಜಾರ್ಡಿನ್ ನಾಯಕತ್ವದ ಇಂಗ್ಲೆಂಡ್ ತಂಡ (1932-33 ರ ಟೆಸ್ಟ್ ಸರಣಿಗಳಲ್ಲಿ) ಆಸ್ಟ್ರೇಲಿಯನ್ನರನ್ನು 'ಇಂಗ್ಲೆಂಡಿನಿಂದ ಗಡೀಪಾರು ಮಾಡಿದ ಕ್ರಿಮಿನಲ್ಲುಗಳನ್ನೊಳಗೊಂಡ ಅಧೀನ ರಾಷ್ಟ್ರ' ಎಂದೇ ಪರಿಗಣಿಸಿತ್ತು. ಖುದ್ದು ಜಾರ್ಡಿನ್ ಬ್ರಾಡ್ಮನ್‌ನನ್ನು ಒಬ್ಬ "ಯಕಶ್ಚಿತ್ ಸೂಳೆಮಗ" ಎಂದು ಜರಿದು ಹರೋಲ್ಡ್ ಲಾರ್‌ವುಡ್‌ನ ದೇಹಘಾತುಕ ಅಪಾಯಕಾರಿ ಬೌಲಿಂಗನ್ನು ಬಳಸಿದ. ಮೇಲ್ವರ್ಗದಿಂದ ಬಂದಿದ್ದ ಹಾಗೂ ಆಕ್ಸ್‌ಫರ್ಡ್‌ನಲ್ಲಿ ಓದಿದ ಆಸಾಮಿ ಜಾರ್ಡಿನ್ 'ಇಂಗ್ಲಿಷ್ ಶ್ರೇಷ್ಠತೆ'ಯ ಭಾವ ಹೊಂದಿದ್ದ. ಅವನು ಆಸ್ಟ್ರೇಲಿಯನ್ನರನ್ನು ದ್ವೇಷಿಸಿದ. ಅಂತೆಯೇ ಅದಕ್ಕೆ ಪ್ರತಿಯಾಗಿ ಆಸ್ಟ್ರೇಲಿಯನ್ನರೂ ಅವನನ್ನು ದ್ವೇಷಿಸಿದರು. ಅಂತಹ ಸಂದರ್ಭಗಳಲ್ಲಿ ಆ ಎರಡೂ ತಂಡಗಳಿಗೆ 'ಜಯ' ಎಂಬುದರ ಅರ್ಥ ಏನಾಗಿದ್ದಿರಬಹುದು ಎಂದು ನೀವೇ ಊಹಿಸಬಹುದು.

ಅತ್ಯುತ್ತಮ ಕ್ರಿಕೆಟ್ ಮತ್ತು ಶ್ರೇಷ್ಠ ಆಟಗಾರರು ಅಂತಹ ಸಂಘರ್ಷಯುಕ್ತ ಹಿತಾಸಕ್ತಿಗಳಿಂದಲೇ ಬಂದಿರಬಹುದೆಂದು ನನಗೆ ಅನ್ನಿಸುತ್ತದೆ. ಬ್ರಾಡ್ಮನ್ ಇನ್ನಷ್ಟು ಶ್ರೇಷ್ಠ ಆಟಗಾರನಾದ. ಏಕೆಂದರೆ 'ಅನಕ್ಷರಸ್ಥ ಮತ್ತು ಅಶಿಸ್ತಿನ ಜನಜಂಗುಳಿ'ಯನ್ನು (ಜಾರ್ಡಿನ್ ಆಸ್ಟ್ರೇಲಿಯನ್ನು ಕರೆದದ್ದು ಹಾಗೆ) ನಾಗರಿಕರನ್ನಾಗಿ ಮಾಡುವುದು ತನ್ನ ಕರ್ತವ್ಯವೆಂದು ಭಾವಿಸಿದ್ದ ಜಾರ್ಡಿನ್ ಎಂಬ ನಾಮಾಂಕಿತವುಳ್ಳ ಜಂಬದ ಇಂಗ್ಲಿಷ್ ಮನುಷ್ಯನಿಗೆ ಬ್ರಾಡ್ಮನ್ ಸವಾಲೊಡ್ಡಿದ.

ವೆಸ್ಟ್‌ಇಂಡೀಸ್‌ನ ಕ್ರಿಕೆಟ್ 19 ನೇ ಶತಮಾನದಿಂದ 1930-40 ರ ದಶಕದ ತನಕ ಬಿಳಿ ವಸಾಹತುಶಾಹಿಗಳ ಆಧಿಪತ್ಯ ವಲಯವಾಗಿತ್ತು. ಯಾವಾಗ ವೆಸ್ಟ್‌ಇಂಡೀಸ್ ಕ್ರಿಕೆಟ್ ತಂಡದ ಫ್ರಾಂಕ್ ವೊರೆಲ್, ಕ್ಲೈಡ್ ವಾಲ್‌ಕಾಟ್ ಮತ್ತು ಎವರ್ಟನ್ ವೀಕ್ಸ್ ಎಂಬ ಮೂವರು ದಿಗ್ಗಜರು 30 ರ ದಶಕದಲ್ಲಿ ವಸಾಹತು ಮನಸ್ಥಿತಿಯನ್ನು ಒಡೆಯುವುದಕ್ಕೆ ಪ್ರಾರಂಭಿಸಿದರೋ ಆಗ ಈ ಮಾದರಿ ರೂಪಾವಳಿಯ ಮೇಲೆ ಮೊದಲ ದಾಳಿಯೂ ಆರಂಭವಾಯಿತು. ಆದರೆ ಅವರ ಕೊಡುಗೆ ಇದ್ದುದು ಕಪ್ಪು ಜನಾಂಗ ಕೂಡ ಬಿಳಿಯರಷ್ಟೇ ಸಮರ್ಥವಾಗಿ ಅಥವಾ ಅದಕ್ಕಿಂತಲೂ

ಡಾ. ಪ್ರೋ ಲಂಕಿ ರಾಮಮೂರ್ತಿಯವರ 13 ಸೀತಾಯಣ



ಸಹಿಸಲಾರದವರಾದವರು. ರಾಮಪಂಡಿತನು ಮಾತ್ರ ಶೋಕಿಸಿಯಾಗಲಿಲ್ಲ, ದುಃಖಿತನಾಗಲಿಲ್ಲ. ಈತನು ಶೋಕರಹಿತನಾಗಿರಲು ಕಾರಣವೇನೋ ಕೇಳುವೆನು' ಎಂದುಕೊಂಡು ಈ ಗಾಥೆಯನ್ನು ಉಸುರಿದನು:

ಶೋಕಿಸಲು ತಪ್ಪುನಾವದು ನಿನಗೆ
ದುಃಖ ಬರದಿರಲು ಕಾರಣವೇನು ರಾಮ?
ತಂದೆ ಗತಿಸಿದ ವಾರ್ತೆಯನು ಕೇಳಿ
ಬರಲಿಲ್ಲವೇಕೆ ನಿನಗೆ ದುಃಖ?

ತಾನು ಶೋಕರಹಿತನಾಗಿರಲು ಕಾರಣವನ್ನು ಹೇಳುತ್ತಾ ಅನಿತ್ಯಾ ಸ್ವರೂಪವನ್ನು ವಿವರಿಸುತ್ತಾ ಆತನು ಈ ಗಾಥೆಯನ್ನು ಉಸುರಿದನು:

ಎಷ್ಟು ವಿಲಾಪಿಸಿದರು ಕೂಡ ಯಾರ
ಜೀವವು ನಿಲ್ಲದೋ ಅವರಿಗಾಗಿ
ಬುದ್ಧಿವಂತನು ತಾನು ಗೋಳಿಡುವುದೇಕೆ?

....

ಅಲ್ಲಿ ನೆರೆದಿದ್ದ ಜನರು ಅನಿತ್ಯತೆಯನ್ನು ಮತ್ತು ಧರ್ಮೋಪದೇಶವನ್ನು ಗ್ರಹಿಸಿ ಶೋಕರಹಿತರಾದರು. ಆಗ ಭರತಕುಮಾರನು ರಾಮಪಂಡಿತನಿಗೆ ನಮಸ್ಕರಿಸಿ 'ವಾರಣಾಸಿ ರಾಜ್ಯ ಪರಿಪಾಲನೆ ಮಾಡುವುದು' ಎಂದು ಕೇಳಿಕೊಂಡನು.

'ಲಕ್ಷ್ಮಣಕುಮಾರ ಮತ್ತು ಸೀತಾದೇವಿಯನ್ನು ಕರೆದುಕೊಂಡು ಹೋಗಿ ರಾಜ್ಯ ಪರಿಪಾಲನ ಮಾಡುವುದು' ಎಂದು ರಾಮನು ಹೇಳಲು-

'ದೇವಾ, ಹಾಗಾದರೆ ತಾವು?' ಭರತನು ಕೇಳಿದನು.

'ತಮ್ಮಾ, ಹನ್ನೆರಡು ವರ್ಷಗಳ ನಂತರ ನೀನು ರಾಜ್ಯವನ್ನು ಸ್ವೀಕರಿಸಬೇಕೆಂದು ತಂದೆ ಹೇಳಿದ್ದಾರೆ, ನಾನೀಗಲೇ ಅಲ್ಲಿಗೆ ಹೋದರೆ ಆಜ್ಞೆಯನ್ನು ಪಾಲಿಸಿದಂತಾಗುವುದಿಲ್ಲ, ಉಳಿದ ಮೂರು ವರ್ಷಗಳು ಕಳೆದ ಮೇಲೆ ಬರುತ್ತೇನೆ.'

'ಅಲ್ಲಿಯವರೆಗೆ ಯಾರು ರಾಜ್ಯಭಾರ ನಡೆಸಬೇಕು?

'ನೀನು ನಡೆಸು'

'ನಾನು ನಡೆಸಲಾರೆ'

'ನಾನು ಬರುವವರೆಗೂ ಈ ಪಾದುಕೆಗಳು ರಾಜ್ಯಭಾರ ಮಾಡುತ್ತವೆ' ಎಂದು ರಾಮಪಂಡಿತನು ತನ್ನ ತೃಣಪಾದುಕೆಗಳನ್ನು ತೆಗೆದುಕೊಟ್ಟನು. ಅವರು ಮೂವರ ಪಾದುಕೆಗಳನ್ನು ತೆಗೆದುಕೊಂಡು ರಾಮಪಂಡಿತನಿಗೆ ನಮಸ್ಕರಿಸಿ ಪರಿವಾರದೊಡನೆ ವಾರಣಾಸಿ ಸೇರಿದರು. ಮೂರು ವರ್ಷಗಳ ಕಾಲ ಪಾದುಕೆಗಳನ್ನು ಪ್ರತಿನಿಧಿಯಾಗಿ ನಿಲ್ಲಿಸಿ ರಾಜ್ಯಭಾರ ಮಾಡಿದರು. ಅಮಾತ್ಯರು ತೃಣಪಾದುಕೆಗಳನ್ನು ಸಿಂಹಾಸನದ ಮೇಲೆ ಇಟ್ಟು ಅತ್ತ ದೂರು ತಂದವರಿಗೆ ತೀರ್ಪು ನೀಡುತ್ತಿದ್ದರು. ತೀರ್ಪು ಸರಿಯಿಲ್ಲದಿದ್ದರೆ ಪಾದುಕೆಗಳು ಪರಸ್ಪರ ಹೊಡೆದಾಡುತ್ತಿದ್ದವು. ನಂತರ ಸರಿಯಾದ ತೀರ್ಪು ನೀಡಿದಾಗ ಅವು ಶಾಂತವಾಗುತ್ತಿದ್ದವು. ರಾಮಪಂಡಿತನು ಮೂರು ವರ್ಷಗಳ ಬಳಿಕ ಅರಣ್ಯ ಬಿಟ್ಟು ವಾರಣಾಸಿ ಸೇರಿ ಉದ್ಯಾನವನ್ನು ಪ್ರವೇಶಿಸಿದನು. ಆತನ ಆಗಮನದ ಸೂಚನೆಯನ್ನು ತಿಳಿದುಕೊಂಡ ಲಕ್ಷ್ಮಣಕುಮಾರನು ರಾಮನಲ್ಲಿಗೆ ಬಂದು, ಸೀತೆಯನ್ನು ಪಟ್ಟದ ರಾಣಿ ಮಾಡಿ ರಾಮ ಸೀತೆಯರಿಗೆ ರಾಜ್ಯವನ್ನು ಒಪ್ಪಿಸಿದನು. ಹೀಗೆ ಪಟ್ಟಾಭಿಷಿಕ್ತನಾದ ಬೋಧಿಸತ್ವನು ಅಲಂಕೃತವಾದ ರಥವನ್ನು ಹತ್ತಿ ಅನೇಕ ಅನುಯಾಯಿಗಳೊಡನೆ ನಗರಪ್ರದಕ್ಷಿಣೆ ಮಾಡಿ ಸುಚಂದ್ರ ಪ್ರಾಸಾದದ ಮೇಲಂತಸ್ತು ಸೇರಿ 19,000 ವರ್ಷ ಧರ್ಮಾನುಸಾರವಾಗಿ ರಾಜ್ಯಭಾರ ಮಾಡಿ ಕೊನೆಗೆ ಸ್ವರ್ಗಗಾಮಿಯಾದನು.

('ದಶರಥನ ಜಾತಕ'ದ ಆಯ್ದ ಭಾಗ)

ಇಲ್ಲಿ ಸೀತೆ, ಲಕ್ಷ್ಮಣನೊಂದಿಗೆ, 'ನೀನು ನಮಗೆ ಪಿತೃಸಮಾನ' ಎನ್ನುತ್ತಾಳೆ-ವಾಲ್ಮೀಕಿ ರಾಮಾಯಣದ ಸೀತೆ, ಅನಸೂಯೆಗೆ, ರಾಮನು ತನ್ನನ್ನು 'ತಂದೆ'- 'ಮಾತೃವತ್ ಪಿತೃವತ್ ಪ್ರಿಯಃ' (ಅ.ಉ. 118.4)-ಯಂತೆ ನೋಡಿಕೊಳ್ಳುತ್ತಿದ್ದಾನೆ ಎನ್ನುವಂತೆಯೆ. ರಾಮನ ಈ 'ತಂದೆ'ತನ, ವೈರಾಗ್ಯ ಸೀತೆಯ ಸಂಬಂಧದ ನೆಲೆಯಲ್ಲಿ ಗಮನಾರ್ಹವಾದುದು: ಸೀತೆ ರಾಮನು ಅಂತಃಪುರ ಸ್ತ್ರೀಯರಲ್ಲಿ, ದಶರಥ ಒಮ್ಮೆ ಮಾತ್ರ 'ಕಣ್ಣೆಟ್ಟು ನೋಡಿದ ಸಾಮಾನ್ಯ ಸ್ತ್ರೀಯರಲ್ಲೂ' ತೋರುವ ವೈರಾಗ್ಯ, ಅವರನ್ನು ತಾಯಿಯಂತೆ ಕಾಣುವ ಚರ್ಯೆ (ಅ.ಉ. 118, 5-9) ಇವು ರಾಮನಲ್ಲಿನ ವೈರಾಗ್ಯವಿಶೇಷ, ಕಾಮಪ್ರವೃತ್ತಿಯೇ ಇಲ್ಲದಿರಬಹುದಾದ, 'ತಂದೆ'ಯಂತಹ ಕಾಮವಿಲ್ಲದ ಪ್ರೇಮದ ಒತ್ತನ್ನು ಕೊಡುತ್ತಿದೆ. ಈ ಕಾಮ ಸಾಹಿತ್ಯದ ಬಗ್ಗೆ ಇನ್ನೂ ಪುಷ್ಟಿಕೊಡುವ ಸೀತೆಯ ನಿಷ್ಠುರ ವಾಕ್ಯಗಳನ್ನು ಗಮನಿಸಬೇಕು-'ಪುರುಷ ವಿಗ್ರಹದ ಸ್ತ್ರೀ', ಶೈಲೂಷ ಇತ್ಯಾದಿ. ಅಲ್ಲದೆ, ರಾಮನ ಸೌಂದರ್ಯ ವಿಶೇಷ 'ಗಂಡಸರ ದೃಷ್ಟಿಯನ್ನೂ, ಚಿತ್ತವನ್ನೂ ಅಪಹರಿಸುವಂತಹುದು' 'ಪುಂಸಾಂದೃಷ್ಟಿ ಚಿತ್ತಾಪಹಾರಿಣಂ' (ಅಯೋಧ್ಯ, 3, 29). ಸೀತೆ ರಾಮನನ್ನು ಶೈಲೂಷನೆನ್ನುವುದು, ಛಾಯಾ ಜೀವಿ ಎನ್ನುವುದೂ ವಾಲ್ಮೀಕಿಯೇ ಅವನ ಸೌಂದರ್ಯ 'ಪುಂಸಾಂದೃಷ್ಟಿ ಚಿತ್ತಾಪಹಾರಿಣಂ' ಎನ್ನುವುದು ತುಂಬಾ ಗಂಭೀರವಾದ ಗಮನಾರ್ಹ ವಿಷಯಗಳು. ಇನ್ನು ಜಾತಕ ಕಥೆಯಲ್ಲಿ ದಶರಥ ಸತ್ತ ಮೇಲಂತೂ ರಾಮನು 'ತಂದೆ'ಯೇ ಆಗಿಬಿಡುತ್ತಾನೆ. ಆ 'ತಂದೆ'ತನವನ್ನು ಸ್ಥಾಪಿಸಲು, ನಿಜಗೊಳಿಸಲು, ರಾಮನು-ರಾಮಪಂಡಿತನು, ಅಂದರೆ ತಿಳಿವಿನ ವಿಶೇಷನು, ವಿರಾಗಿಯು-ಲಕ್ಷ್ಮಣ ಸೀತೆಯರನ್ನು ಜೊತೆಗೆ ಸ್ನಾನಕ್ಕಿಳಿಸಿ, ಅವರನ್ನು ಭಾವದಲ್ಲಿ ಒಂದಾಗಿಸಿ, ತಂದೆಯ ಸಾವನ್ನು ಕೇಳಿ ಇಬ್ಬರೂ ಮೂರು ಬಾರಿ ಮೂರ್ಛೆಹೋಗುವ ಭಾವೈಕ್ಯತೆಯಲ್ಲಿ, ಅನುಭೂತಿಯ ಸಮಾಗಮದಲ್ಲಿ, ಅವರನ್ನು 'ಸತಿಪತಿ'ಗಳನ್ನಾಗಿ ಮಾಡುತ್ತಾನೆ. ಆ ಸತಿಪತೀತ್ವವನ್ನು ಪುಷ್ಟೀಕರಿಸಲು ರಾಮನು ಅವರಿಬ್ಬರನ್ನೂ ಮದುವೆಯ ವಧೂವರರು ಜೊತೆಗೆ ಸ್ನಾನಪಾನ ಮಾಡುವಂತೆ, ಸ್ನಾನ ಮಾಡಿಸುತ್ತಿದ್ದಾನೆ-ಧಾರೆ ಎರೆಯುತ್ತಿದ್ದಾನೆ, 'ಮದುವೆ' ಮಾಡಿಸುತ್ತಿದ್ದಾನೆ, ಅಲ್ಲವೇ? ರಾಮಪಂಡಿತನು ಇಬ್ಬರನ್ನೂ ಜೊತೆಗೆ, ಒಂದೇ ನೀರಿನ ಕೊಳದಲ್ಲಿ ಕೈಕೈ ಹಿಡಿದು ಸ್ನಾನ ಮಾಡುವಂತೆ ಮಾಡುವ ಕಾರ್ಯವಿಶೇಷ ಅಪೂರ್ವವಲ್ಲವೇ?

ಸೀತಾಲಕ್ಷ್ಮಣರು ಜೊತೆ ಜೊತೆಯಾಗಿರುವ, ರಾಮನೊಬ್ಬನೇ ತಾಪಸಿಯಂತೆ ಒಂಟಿಯಾಗಿರುವ, ಈ ಸನ್ನಿವೇಶ ರಾಮಾಯಣದಲ್ಲೂ ಲಕ್ಷ್ಮಣನು ಸೀತೆಯನ್ನು ಸೇವಿಸುವುದು, ಹೂ ಹಂಪಲುಗಳನ್ನು ತಂದುಕೊಡುವುದು, ರಕ್ಷಿಸುವುದು, ರಕ್ಷಣೆಯಲ್ಲಿ ಕಾದಾಡುವುದು, ಸೀತೆ ಬೆಂಕಿಗೆ ಬೀಳುವ ಮುಂದೆ ಬೆಂಕಿ ಮಾಡುವುದು, ಸೀತಾಪರಿತ್ಯಾಗದಲ್ಲಿ ಸೀತೆಯನ್ನು ಕಾಡಿಗೆ ಕರೆದುಕೊಂಡು ಹೋಗುವುದು-ಈ ಎಲ್ಲಾ ಕ್ರಿಯೆಗಳು ಲಕ್ಷ್ಮಣನನ್ನು ಕಾಯಕದ ಶ್ರೀಮಂತನನ್ನಾಗಿಯೂ, ಸೀತೆಯ ಆತ್ಮೀಯನಾಗಿಯೂ, ಒಡನಾಡಿಯಾಗಿಯೂ, ಶುಶ್ರೂಷೆ ಮಾಡುವ ಶೇವಕಿಂಕರನಾಗಿಯೂ, ಆರಾಧಕನಾಗಿಯೂ ಮಾಡುತ್ತವೆ, ಅಲ್ಲವೇ?

'ಜಾತಕ ಕಥೆ' ಸೀತಾಲಕ್ಷ್ಮಣರ ಅನ್ಯೋನ್ಯತೆಯನ್ನು ಅವರಿಬ್ಬರೂ ರಾಜ್ಯಕ್ಕೆ ಮರಳಿ ಒಟ್ಟಾಗಿರುವಲ್ಲಿ ಪುಷ್ಟೀಕರಿಸುತ್ತದೆ. ರಾಮನು ಕೊನೆಯಲ್ಲಿ ರಾಜ್ಯಕ್ಕೆ ಮರಳಿದಾಗ ಲಕ್ಷ್ಮಣನು 'ರಾಮನಲ್ಲಿಗೆ ಬಂದು ಸೀತೆಯನ್ನು ಪಟ್ಟದ ರಾಣಿ ಮಾಡು'ತ್ತಾನೆ: ಅಂದರೆ ಅದರ ಇಂಗಿತ ಅವಳು ಪಟ್ಟದ ರಾಣಿಯಾಗಿರಲಿಲ್ಲ-ರಾಣಿಯಾಗಿದ್ದರಲು ಸಾಕು, ಲಕ್ಷ್ಮಣನ ಒಡನಾಡಿಯಾಗಿ ಎಂದಾಗುತ್ತದೆ, ಅಲ್ಲವೇ? ಸೀತೆ ಒಡಹುಟ್ಟಿದ ರಾಮನನ್ನು ಕೂಡಿದಂತೆ, ಒಡಹುಟ್ಟಿದ ಲಕ್ಷ್ಮಣನನ್ನು ಕೂಡಿರಲು ಸಾಧ್ಯವಿದೆಯಲ್ಲವೇ?

ಒಟ್ಟಿನಲ್ಲಿ ಜಾತಕ ಕಥೆ, ವಾಲ್ಮೀಕಿ ರಾಮಾಯಣದ ಸೀತಾಲಕ್ಷ್ಮಣವನ್ನೇ, ಪ್ರೇಮಾನುಭೂತಿ, ಅನ್ಯೋನ್ಯತೆ, ಆಪ್ತತೆಗಳನ್ನೇ ಸಾರುತ್ತದೆ. ಪುಷ್ಟೀಕರಿಸುತ್ತದೆ, ಅಲ್ಲವೇ? ಹಾಗೆಯೇ ಜಾತಕ ರಾಮನಂತೆಯೇ, ವಾಲ್ಮೀಕಿ ರಾಮನೂ, ಅಷ್ಟೇ ಪ್ರಾಮಾಣಿಕವಾಗಿ ಜಟೆಕಟ್ಟಿ, ನಾರುಬಟ್ಟೆಯುಟ್ಟ 'ತಾಪಸಿ', 'ಪಂಡಿತ' ಅವನು ರಾಮಾಯಣದಲ್ಲಿ ಮಾಡುವುದೇ ತಾಪಸಿಗಳ ಸಂರಕ್ಷಣೆ; ಕೊನೆಗೆ ರಾಮಾಯಣದ ಅಂತ್ಯದಲ್ಲಿ ಅವನು, ಮಹಾಪ್ರಸ್ಥಾನದಲ್ಲಿ ನಿಲ್ಲುವುದು ಸಂಪೂರ್ಣ ತಾಪಸಿಯಾಗಿಯೇ- 'ಶ್ರೀ ರಾಮನು ಸೂಕ್ಷ್ಮಾಂಬರಧಾರಿಯಾಗಿ ಕೈಯಲ್ಲಿ ದರ್ಭೆಗಳನ್ನು ಹಿಡಿದು ಕೇವಲ ಓಂಕಾರವನ್ನು ಜಪಿಸುತ್ತ ಅರಮನೆಯಿಂದ ನಿರ್ಗಮಿಸಿದನು' (ಉತ್ತರಕಾಂಡ 109, 3-4).

ಹೀಗೆ ಜಾನಪದಗಳು, ಜಾತಕಗಳು ವಾಲ್ಮೀಕಿ ರಾಮಾಯಣದ ಇಂಗಿತಗಳೇ. ಈ ಜಾನಪದದ ಜಾತಕದ ಸಾಮಾನ್ಯರೇ ಸಹಜಾರ್ಥ ಮುಗ್ಧರು, ಮುಕ್ತ ಸಹೃದಯರು, ರಾಮ ಸೀತೆಗೇನಾಗಬೇಕೆಂಬ ಪ್ರಾಮಾಣಿಕ ಪ್ರಶ್ನಿಗರು.

ಜಾನಪದವು ಜೀವನವೇ, ಜೀವನದ ಪರಿಪಾಕವೇ ಆಗಿ ಬಾಳಿನ ಸತ್ಯ ಕಾವ್ಯವಾಗಿದೆ. ಕವಿಯಾದವನು ತನ್ನ ಪ್ರತಿಭೆಯಲ್ಲಿ ಗ್ರಹಿಸುವುದು ಜನತೆ ತನ್ನ ಜನಜೀವನದಲ್ಲಿ ಇನ್‌ಸ್ಟಿಂಕ್ಟ್‌ನ್ ಆಗಿ ಗ್ರಹಿಸುವುದನ್ನೇ, ಅಲ್ಲವೇ?

ಹೆಳವನಕಟ್ಟೆ ಗಿರಿಯಮ್ಮನ ಜಾನಪದವೂ, ಜಾತಕವೂ ಲೋಕಗೀತಗಳಾಗಿ ವಾಲ್ಮೀಕಿ ರಾಮಾಯಣದ ಇಂಗಿತವನ್ನೂ, ಒಳತೋಟಿಯನ್ನೂ ಕಂಡುಕೊಂಡ ಕಾಣ್ಕೆಗಳಾಗಿವೆ.

ಆ ಕಾಣ್ಕೆ ನಮ್ಮದೂ ಆದೀತು, ಸತ್ಯದರ್ಶನ ನಮ್ಮ ಸಾಕ್ಷಾತ್ಕಾರವೂ ಆದೀತು. ನಾವು ಮಗುವಿನಂತೆ ಮುಗ್ಧರಾಗಿ, ಮುಕ್ತರಾಗಿ ವಾಲ್ಮೀಕಿ ರಾಮಾಯಣವನ್ನು ಓದಿದರೆ, ರಾಮ ಸೀತೆಗೇನಾಗಬೇಕು? ಎಂದು ಪ್ರಾಮಾಣಿಕರಾಗಿ ಕೇಳಿದರೆ -ಅಲ್ಲವೇ?

(ಮುಂದುವರೆಯುತ್ತದೆ)

ಉತ್ತಮವಾಗಿ ಆಟವಾಡಬಲ್ಲರು ಎಂಬುದನ್ನು ತಮ್ಮ ದೇಶದ ಜನರಿಗೆ ತೋರಿಸಿಕೊಟ್ಟದ್ದರಲ್ಲಿ.


ಆದರೆ ತದನಂತರದಲ್ಲಿ ಬಂದ ಬದಲಾವಣೆಗಳೇ ವೆಸ್ಟ್‌ಇಂಡೀಸ್‌ರನ್ನು ಬದಲಿಸಿದ್ದು. 50 ಮತ್ತು 60 ರ ದಶಕದಲ್ಲಿ ಆ ದ್ವೀಪಗಳಲ್ಲಿ ಕ್ರಿಕೆಟ್‌ನ್ನು ತಮ್ಮ ವಿಮೋಚನೆಯೊಂದಿಗೆ ಬೆಸೆಯಲಾಯಿತು. ಸಾಹತುಶಾಹಿ ಸುಧಾರಣೆಗಳಿಗೆ ಅದೊಂದು ರಾಜಕೀಯ ಯೋಜನೆಯಾಗಿತ್ತು, ಪರಿಣಾಮವಾಗಿ, ರಾಷ್ಟ್ರಪ್ರಭುತ್ವದ, ಅಂದರೆ ಇಂದಿನ ವೆಸ್ಟ್‌ಇಂಡೀಸ್ ಉಗಮವಾಯಿತು. ಅಂತೆಯೇ ಕ್ರಿಕೆಟ್ ಕೂಡ ಸಾಹತುಶಾಹಿ ವಿರೋಧಿ ಹೋರಾಟದ ಒಂದು ಸಂಕೇತವಾಗಿ ಜೊತೆಜೊತೆಯಲ್ಲಿಯೇ ಬೆಳೆಯಿತು.

ಐಸಾಕ್ ವಿವಿಯನ್ ಅಲೆಕ್ಸಾಂಡರ್ ರಿಚರ್ಡ್ಸ್ ಈ ರಾಜಕೀಯ ಪ್ರಜ್ಞೆಯ ಸೃಷ್ಟಿಯೇ ಆಗಿದ್ದರು.


ಜಗತ್ತು ಆತನ ರಾಜಕೀಯವನ್ನು ನಿರ್ಲಕ್ಷಿಸಿದರೂ ಅಥವಾ ಅದರ ಬಗ್ಗೆ ಮಾತನಾಡದಿರುವುದಕ್ಕೆ ತೀರ್ಮಾನಿಸಿದ್ದರೂ, ಅತ್ಯಂತ ಜನಾಂಗವಾದಿ ಕ್ರಿಕೆಟಿಗರಿಗೂ ಮತ್ತು ಕಾಮೆಂಟರಿ ವರದಿಗಾರರಿಗೂ ಆತನ ಕ್ರಿಕೆಟನ್ನು ಮಾತ್ರ ನಿರ್ಲಕ್ಷಿಸಲು ಸಾಧ್ಯವಾಗಲಿಲ್ಲ, ಇಂಗ್ಲಿಷರು ಬರೆದ ಉತ್ತಮ ಬ್ಯಾಟಿಂಗ್ ಬಗೆಗಿನ ಎಲ್ಲಾ ಸಾಂಪ್ರದಾಯಿಕ ನಿಯಮಾವಳಿಗಳನ್ನು ವಿವ್ ಮುರಿದು ಹಾಕಿದ. 'ಸಭ್ಯಸ್ಥನ ಆಟ'ವನ್ನು ಆಡುವ ಒಬ್ಬ ಬ್ಯಾಟ್ಸ್‌ಮನ್ ಮಾಡಬೇಕಿರುವಂತೆ ಆತ ಎಂದೂ ನಾಜೂಕಿನವನಂತೆ ತೋರ್ಪಡಿಸಿಕೊಳ್ಳುವುದಕ್ಕೇ ತನ್ನ ಕೆಲಸವನ್ನಾಗಿಸಲು ಪ್ರಯತ್ನಿಸಲಿಲ್ಲ.

ಈ ಕಾರಣಕ್ಕಾಗಿಯೇ ಆತ ಬ್ಯಾಟಿಂಗ್ ಕ್ರೀಸ್‌ಗೆ ಹೋಗುತ್ತಿದ್ದರೆ ಅದು ವಿಶೇಷ ಒಂದು ರೀತಿಯ ಗರ್ವಕ್ಕೆ ಪ್ರತೀಕವಾದ ಆತ್ಮಸ್ಥೈರ್ಯವನ್ನು ಹೇಳುತ್ತಿತ್ತು, 1979 ರ ವಿಶ್ವಕಪ್ ಫೈನಲ್‌ನಲ್ಲಿ (ಇದರಲ್ಲಿ ರಿಚರ್ಡ್ಸ್ 137 ರನ್‌ಗಳ ಸ್ಕೋರ್ ಮಾಡಿದ್ದ) ಹೆಂಡ್ರಿಕ್ಸ್‌ನ ಕೊನೆಯ ಬೌಲ್‌ನಲ್ಲಿ ಸಿಕ್ಸ್ ಬಾರಿಸಿದ್ದು ಆತ ನಿರೂಪಿಸಲು ಹೊರಟದ್ದೆಲ್ಲವನ್ನೂ ಹೇಳುತ್ತದೆ.

ಕೊನೆಯ ಓವರ್ ಆರಂಭವಾದಾಗ ವೆಸ್ಟ್‌ಇಂಡೀಸ್ ಎಂಟು ವಿಕೆಟ್‌ಗಳನ್ನು ಕಳೆದುಕೊಂಡಿತ್ತು, ಆಗ ರಿಚರ್ಡ್ಸ್ ಜೊತೆಗಾರನಾಗಿ ಆ್ಯಂಡಿ ರಾಬರ್ಟ್ಸ್ ಮಾತ್ರ ಉಳಿದುಕೊಂಡಿದ್ದ. ಹೆಂಡ್ರಿಕ್ಸ್ 60 ನೆಯ (ಆ ದಿನಗಳಲ್ಲಿ ಏಕದಿನ ಪಂದ್ಯಗಳನ್ನು 60 ಓವರುಗಳಿಗಾಗಿ ಆಡಲಾಗುತ್ತಿತ್ತು) ಮತ್ತು ಕೊನೆಯ ಓವರ್‌ನ ಮೊದಲ ಬಾಲನ್ನು ಎಸೆದಾಗ ರಿಚರ್ಡ್ಸ್‌ನ ಸ್ಕೋರು 123. ತನ್ನ ಜೊತೆಗಾರ ರಾಬರ್ಟ್ಸ್‌ನಿಗೆ ಒಂದು ಹೊಡೆತಕ್ಕೂ ಅವಕಾಶ ಕೊಡದೆ ಆತ ಮೊದಲ ಐದು ಬಾಲ್‌ಗಳಲ್ಲಿ 8 ರನ್ನುಗಳನ್ನು ಕಿತ್ತುಕೊಂಡ.



ಆ ಇನ್ನಿಂಗ್ಸ್‌ನ ಕೊನೆಯ ಬಾಲ್‌ಗೆ ಆತ ಏನು ಮಾಡಬಹುದೆಂದು ಯಾರೂ ಊಹಿಸಿರಲಿಲ್ಲ, ಹೆಂಡ್ರಿಕ್ಸ್ ಆಫ್ ಸ್ಟಂಪ್‌ನ ಹೊರಗಡೆ ನಿಖರವಾದ ಬೌಲಿಂಗ್ ಮಾಡಿದ, ಅಲ್ಲದೆ ಪ್ರಾರ್ಥಿಸಿಕೊಂಡಿರಲೂಬಹುದು. ರಿಚರ್ಡ್ಸ್ ಆಫ್ ಸ್ಟಂಪ್‌ನಿಂದ ಸಾಕಷ್ಟು ಹೊರನಡೆದು (ಆಫ್‌ಸ್ಟಂಪ್‌ನಿಂದ ಕನಿಷ್ಠ ಒಂದು ಅಡಿ) ಫುಲ್‌ಟಾಸ್ ಬಾಲನ್ನು ಹಿಡಿದು (ಏಕೆಂದರೆ ಆತ ಕ್ರೀಸ್‌ನಿಂದ ಸಾಕಷ್ಟು ದೂರ ಹೋಗಿದ್ದ) ಜೋರಾಗಿ ಬಾರಿಸಿ ಒಂದು ಸೊಗಸಾದ ದೊಡ್ಡ ಸಿಕ್ಸರ್ ಪಡೆದ!



ಈ ಪಂದ್ಯದ ರೆಕಾರ್ಡಿಂಗ್‌ನ್ನು ನಾನು ಇತ್ತೀಚೆಗೆ ನೋಡಿದೆ. ಇಂಗ್ಲಿಷ್ ಜನಸ್ತೋಮ ನಿಶ್ಶಬ್ದತೆಯಿಂದ ನಿಬ್ಬೆರಗಾಗಿತ್ತು, ಇಂಗ್ಲೆಂಡಿನಲ್ಲಿನ ಕಪ್ಪು ಜನಸ್ತೋಮ ಮಾತ್ರ ತಮ್ಮ ಕಡೆಯವನೊಬ್ಬ ಆಗ ತಾನೆ ಒಬ್ಬ ಇಂಗ್ಲಿಷನವನಿಗೆ ಮಾಡಿದ ಆ ಅವಹೇಳನವನ್ನು ಹುಚ್ಚಾಪಟ್ಟೆಯಾಗಿ ಆಚರಿಸಿದರು. ಜನಾಂಗೀಯವಾಗಿ ವಿಭಜನೆಗೊಂಡ ಬ್ರಿಟನ್‌ನಲ್ಲಿ ಆ ಏಕೈಕ ಹೊಡೆತದಿಂದ ಬಿಳಿಯರ ಗರ್ವಕ್ಕೆ ಏನೆಲ್ಲಾ ಆಗಿದ್ದಿರಬಹುದೆಂದು ಊಹಿಸಲಾಗುವುದಿಲ್ಲ, ತಾನೇನು ಮಾಡುತ್ತಿದ್ದೇನೆಂದು ರಿಚರ್ಡ್‌ಗೆನೇ ಗೊತ್ತಿರಲಿಲ್ಲ ಎಂದೇನೂ ಅಲ್ಲ, ಪ್ರಪಂಚದಲ್ಲಿ ತಾನು ಆಡಿದಲ್ಲೆಲ್ಲಾ ತೀಕ್ಷ್ಣ ಜನಾಂಗೀಯ ತಾರತಮ್ಯವನ್ನು ಅನುಭವಿಸಿದ ರಿಚರ್ಡ್ ಸುನಾಮಿಯ ವಿಧ್ವಂಸಕಾರಿ ರಭಸದೊಂದಿಗೆ ಆ ಎಲ್ಲಾ ಚುಚ್ಚು ನುಡಿಗಳಿಗೆ ತಕ್ಕ ಉತ್ತರವನ್ನು ಕೊಟ್ಟ. ತಾನು ಬಡಿದು ಹಾಕುತ್ತಿರುವುದು ಬಾಲ್ ಅಲ್ಲವೇನೋ, ಬದಲಾಗಿ ಪೀಳಿಗೆಗಳಿಂದ 'ಕರಿಯ ನಿಕೃಷ್ಟ'ನೆಂದು ಕರೆಸಿಕೊಳ್ಳುತ್ತಿದ್ದ ಸಂಕೇತವೇನೋ ಎಂಬಂತಿತ್ತು.

ವೆಸ್ಟ್‌ಇಂಡೀಸ್ ದ್ವೀಪ ಸಮುಚ್ಚಯಗಳಲ್ಲಿನ ಸಮೃದ್ಧ ದ್ವೀಪ ಜಮೈಕಾವನ್ನು IMF ತನ್ನ ಗುಲಾಮನನ್ನಾಗಿ ಮಾಡಿಕೊಂಡಾಗ ವೆಸ್ಟ್‌ಇಂಡೀಸ್‌ನ ಚರಿತ್ರೆಯಲ್ಲಿ ರಿಚರ್ಡ್ ಕೂಡ ಒಂದು ಹಂತಕ್ಕೆ ಬಂದು ನಿಂತ. ತೈಲೋತ್ಪನ್ನ ಮಾಡುತ್ತಿದ್ದ ಟ್ರಿನಿಡಾಡ್ ತೈಲದ ಬೆಲೆಯನ್ನು ಹೆಚ್ಚಿಸಬೇಕೆಂಬ OPEC ನ ನಿರ್ಧಾರದಿಂದ ತತ್ತರಿಸುತ್ತಿತ್ತು, ಕರೀಬಿಯನ್ ಆರ್ಥಿಕತೆ ಕಳೆಗುಂದಿದಂತೆ ಕಾಣುತ್ತಿತ್ತು; ಜನರ ಮನಸ್ಥೈರ್ಯವೂ ತುಂಬಾ ಕುಸಿದಿತ್ತು, ಸ್ವಾತಂತ್ರ್ಯ ಮತ್ತು ರಾಷ್ಟ್ರ ನಿರ್ಮಾಣದ ಕನಸು ಮಂಕಾಗುತ್ತಿತ್ತು, ಕ್ರಿಕೆಟ್ ವಲಯದಲ್ಲೂ ಕೂಡ ಆಸ್ಟ್ರೇಲಿಯವು ವೆಸ್ಟ್‌ಇಂಡೀಸನ್ನು ಇನ್ನಿಂಗ್ಸ್‌ನಲ್ಲಿ ಬಗ್ಗು ಬಡಿದಿತ್ತು,

'ಮಹಾಕುಸಿತ'ದ ಕುಸಿತದಿಂದ ಆಸ್ಟ್ರೇಲಿಯವನ್ನು ಹೇಗೆ ಬ್ರಾಡ್ಮನ್ ಮೇಲೆತ್ತಿದನೋ, ಹಾಗೆಯೇ ರಿಚರ್ಡ್ಸ್ ವೆಸ್ಟ್‌ಇಂಡೀಸ್‌ಗೆ ಹೊಸ ಚೈತನ್ಯದೊಂದಿಗೆ ಜೀವ ತುಂಬಿದ. ಕಪ್ಪು ಚಳವಳಿಯೊಂದಿಗೆ ಮತ್ತು ತನ್ನ ಆಫ್ರಿಕಾ ಮೂಲದೊಂದಿಗೆ ತನ್ನನ್ನು ಗುರುತಿಸಿಕೊಳ್ಳಬೇಕೆಂಬ ಒಂದೇ ಕಾರಣಕ್ಕೆ ತಾನು ರೈಸ್ಟಾಫೇರಿಯನ್ ಆಗಿರದಿದ್ದರೂ ಆಟವಾಡಿದ ಕಡೆಯಲ್ಲೆಲ್ಲಾ ರೈಸ್ಟಾಫೇರಿಯನ್ ಬೆವರು ಪಟ್ಟಿಯನ್ನು ಆತ ಧರಿಸುತ್ತಿದ್ದ (ಆತ ಎಂದೂ ಹೆಲ್ಮೆಟ್ ಧರಿಸಲಿಲ್ಲ).

ವಿವ್‌ನ ರಾಜಕೀಯ ಪ್ರಜ್ಞೆ ಕಪ್ಪು ಶಕ್ತಿಯ ದೃಢ ಸಮರ್ಥನೆಯ ಆಚೆಗೂ ಹೋಯಿತು. ಮಾನವಹಕ್ಕುಗಳ ಚಳವಳಿಯನ್ನು ಸ್ಥಾಪಿಸಿದ ತನ್ನ ಅಣ್ಣ ಡೊನಾಲ್ಡ್ ಡೊನ್ನಿಮಿಚ್‌ನಿಂದಲೂ ಆತ ಬಹಳವಾಗಿ ಪ್ರೇರಣೆಗೊಂಡ. 'ಸಾಮಾಜಿಕ ಮಾಲೀಕತ್ವ ಮತ್ತು ನಿಯಂತ್ರಣ' ಎಂಬ ಹೊಸ ವ್ಯವಸ್ಥೆಯೊಂದಿಗೆ ವೆಸ್ಟ್‌ಇಂಡೀಸ್ ಮಾನವ ಬೆಳವಣಿಗೆ ಮತ್ತು ಮಾನವ ಹಕ್ಕುಗಳ ವಿಚಾರದಲ್ಲಿ ಇಡೀ ಜಗತ್ತಿಗೇ ಒಂದು ಮಾದರಿಯಾಗಬಲ್ಲದು ಎಂದು ಈ ಚಳುವಳಿ ಗಾಢವಾಗಿ ನಂಬಿತ್ತು, ಅವರು ಜನಾಂಗೀಯ ಮತ್ತು ವರ್ಗ ದಮನರಹಿತವಾದ ಸಮಾಜದ ಕನಸು ಕಂಡರು. ಇದು ವಾಸ್ತವದಲ್ಲಿ 'ಅಮೆರಿಕಾದ ಕಪ್ಪು ಚಳವಳಿ'ಯ ತತ್ವಾದರ್ಶಗಳಿಗಿಂತ ಎಷ್ಟೋ ಮುಂದೆ ಬಂದಿತ್ತು, 1993 ರಲ್ಲಿ ಪ್ರತಿಭಟನಾ ಮೆರವಣಿಗೆಯೊಂದರ ಮೇಲೆ ಅಧಿಕಾರಿಗಳು ಗುಂಡು ಹಾರಿಸಿದ್ದನ್ನು ಪ್ರತಿಭಟಿಸಿ ವಿವ್ ರಸ್ತೆಗಿಳಿದ. ಬೇರೆ ಮಾತಿನಲ್ಲಿ ಹೇಳುವುದಾದರೆ, ಅವನು ಶುದ್ಧ ರಾಷ್ಟ್ರೀಯತೆಯಿಂದಾಚೆಗೆ ಬಹುದೂರ ಸಾಗಿದ್ದ. ಕಪ್ಪು ಚರ್ಮ ಬಿಳಿ ಮುಸುಕನ್ನೂ ಧರಿಸಬಲ್ಲದೆಂದು ಆತ ಗುರುತಿಸಿದ್ದ.

ರಿಚರ್ಡ್ಸ್ ತನ್ನ ಕ್ರಿಕೆಟ್‌ನ್ನೂ ತದನಂತರ ತನ್ನ ಬದುಕನ್ನೂ ಕಟ್ಟಿದ್ದು ಈ ತತ್ವಾದರ್ಶಗಳ ಮೇಲೆಯೇ. ಕ್ರಿಕೆಟ್ ಎಂಬುದು ಅವರ ಅಂತರಾಳದ ಭಾವನೆಗಳ ಅಭಿವ್ಯಕ್ತಿಯಾಗಿತ್ತೇ ಹೊರತು ಜೀವನಾಧಾರದ ಮೂಲವೂ ಅಲ್ಲ, ಜೀವನ ಪಥವೂ ಅಲ್ಲ, ಅಥವಾ ವ್ಯಾಪಾರವೂ ಅಲ್ಲ.

ಈಗಲೂ ನೀವು ಗವಾಸ್ಕರ್ ಮತ್ತು ಬಾರ್‌ರ ಬಗ್ಗೆಯೇ ಮಾತನಾಡಬಯಸುತ್ತೀರಾ?

-ಯೋಕರ್ ಎಲ್ಲಪ್ಪ

(೧ನೇ ಪುಟದಿಂದ)

ಮಾಡಿದೆ ಎನ್ನಿಸಿತು.." (ಪು. 65.. ಲಕ್ಷ್ಮಿ ಆಮಿರ ಳೊಂದಿಗೆ ಇಸ್ಲಾಮ್ ಕಟ್ಟುಪಾಡುಗಳ ವಿರುದ್ಧ ಮಾತಾಡಲು ಪ್ರಾರಂಭಿಸಿದಾಗ)

"..ವಲ್ಗಾರಿಟಿಯಲ್ಲ, ವೆಜಿಟೇರಿಯನ್ ಆದೋಳಿಗೆ ಮಾತ್ರ ಹೀಗೆ ಗಂಡನಿಂದ ತಿಂಗಳುಗಟ್ಟಲೆ ದೂರವಿರಲು ಸಾಧ್ಯ.." (ಪು. ೬೬..ಆಮೀರ ಹೇಳುವುದು ಲಕ್ಷ್ಮಿಯನ್ನು ದೂರ ಮಾಡುತ್ತಾ.)

"..ಪ್ರೊಫೆಸರ್ ನೀವು ಗಿಳಿಯ ಉಚ್ಚಾರಣೆ ಮಾಡ್ತಿರೋದು ತಪ್ಪು, ಆಮೀರ-ಗುಲಾಮರೆಂಬ ವ್ಯತ್ಯಾಸವೇ ಇಸ್ಲಾಂ ಸಮಾಜದ ಮೂಲ ಲಕ್ಷಣ.." (ಪು.156)

"ಮಾತಾಜಿ, ಅಲ್ಲಾ..ಅಂದು ನಿಲ್ಲಿಸಿದರಲ್ಲ.. ಬಡತನವನ್ನಪ್ಪಿ ಬದುಕಬೇಕು ಅನ್ನೋದೇ ಬ್ರಾಹ್ಮಣ ಜಾತಿಯ ಧರ್ಮವಲ್ಲವೇ? ಮೊದಲಿನಿಂದ ಕಾಡಿನಲ್ಲಿ ಪರ್ಣಕುಟಿ ಕಟ್ಟಿಕೊಂಡು ವಿದ್ಯೆ ಕಲಿತು ವಿದ್ಯಾದಾನ ಮಾಡಿಕೊಂಡಿದ್ದ ಜಾತಿಯಲ್ಲವೇ ಇದು? ಈ ಜಾತಿಯನ್ನು ನಾಶ ಮಾಡಿದರೆ ಮಾತ್ರ ಹಿಂದೂಗಳನ್ನು ಸಂಪೂರ್ಣವಾಗಿ ಮುಸಲ್ಮಾನರನ್ನಾಗಿ ಪರಿವರ್ತಿಸಬಹುದು ಅಂಥಾ ನವಾಬರು, ಸುಲ್ತಾನರು, ಸುಬೇದಾರರು, ಬಾದಶಾರರು ನಮ್ಮನ್ನ ಸೆರೆ ಹಿಡಿಸಿದರು. ಇಕ್ಕಳದಲ್ಲಿ ಬಾಯಿ ಅಗಲಿಸಿ ಅದ್ರೊಳಕ್ಕೆ ಕ್ಯಾಕರಿಸಿ ಉಗಿದು ಜಾತಿ ಕೆಡಿಸಿದರು. ಕತ್ತಿಯಿಂದ ಕುತ್ತಿಗೆ ಕತ್ತರಿಸಿ ಕೊಂದರು. ನಮ್ಮ ಪೂರ್ವಿಕರು ಹಳ್ಳಿಗಳಿಗೆ ಓಡಿ ಹೋಗಿ ಪುರಾಣ ಪುಣ್ಯ ಕಥೆಗಳ ಪ್ರವಚನ ಮಾಡಿ ನಮ್ಮ ಧರ್ಮ ಉಳಿಸಿದೆವು. ಆಂಗ್ರೇಜಿಗಳು ಬಂದ ಮೇಲೆ ಈ ಜಾತಿಯನ್ನು ಮುರಿದರೆ ಹಿಂದೂಸ್ಥಾನಿಯರನ್ನ ಕಿರಿಸ್ತಾನೀಯರನ್ನಾಗಿ ಮಾಡಬಹುದಂಥ ಹಿಕ್ಮತ್ ಮಾಡಿದರು. ಆಂಗ್ರೇಜಿಗಳು ಹೋದ ಮೇಲೆ ಹಿಂದೂಸ್ಥಾನಿ ರಾಜಕಾರಣಿಗಳೆ ನಮ್ಮ ಮೇಲೆ ದ್ವೇಷದ ಉರಿ ಹಚ್ಚುತ್ತಾ ಓಟು ಕಮಾಯಿಸುತ್ತಿದ್ದಾರೆ..." (ಪು. 181.. ಕಾಶಿಯಲ್ಲಿ ಟಾಂಗ ಓಡಿಸುವ ಬ್ರಾಹ್ಮಣನ ಪಾತ್ರದ ಮಾತು)

"ಅವನು ಹೇಳಿದುದರಲ್ಲಿ ಅವಳಿಗೆ ಇತಿಹಾಸ ಕಾಣತೊಡಗಿತು. ದೇವಸ್ಥಾನಗಳೆಲ್ಲಾ ನಾಶಗೊಂಡ ಮೇಲೆ, ಅರ್ಚಕ ವರ್ಗವನ್ನು ಕೊಚ್ಚಿ ಕೊಂದ ಮೇಲೆ ಅಥವಾ ಪೂಜಿಸಲು ಮೂರ್ತಿ ಮಂದಿರಗಳೆ ಇಲ್ಲವಾಗಿ ಅವರೆಲ್ಲಾ ಹಳ್ಳಿ ಕಾಡುಗಳನ್ನು ಸೇರಿದ ಮೇಲೆ ಹಿಂದೂ ಧರ್ಮವು ಊರೂರು ತಿರುಗುವ ಕಥಾನಕದ ಮೂಲಕ ಬದುಕುಳಿಯಿತು..... ಅದು ಮತ್ತೊಂದು ವಿಧದಲ್ಲಿ ಶಕ್ತಿಶಾಲಿಯಾಯಿತು. ಇಡೀ ಭಾರತದಲ್ಲಿ ಭಕ್ತಿ ಮಾರ್ಗ ಉಕ್ಕಿ ಹರಿಯಿತು. ಎಂದು ಅವಳು ಮೆಲುಕು ಹಾಕುತ್ತಿರುವಾಗ ರಿಕ್ಷಾ ಮುಂದೆ ಸಾಗುತ್ತಿತ್ತು" (ಪು. 182)


"..ಮೂಲ ವಿಶ್ವನಾಥ ಮಂದಿರವನ್ನು ಔರಂಗಜೇಬ ಬಾದ್‌ಶಾ ಒಡೆಸಿ ಅದೇ ಗೋಡೆ, ತೊಲೆ ಬೋದಿಗೆಗಳಿಗೆ ಗುಂಬಜ್ ಹಾಕಿಸಿ ಕಟ್ಟಿಸಿದ್ದು 1669ರಲ್ಲಿ.." (ಪು. 182)

ಇದು ಭೈರಪ್ಪನವರು ಕಲ್ಪನೆ ಮತ್ತು ಇತಿಹಾಸವನ್ನು ಬೆರೆಸುವ ರೀತಿ. ಯಾವುದಕ್ಕೆ ಸತ್ಯದ ಮತ್ತು ಇತಿಹಾಸದ ಪುರಾವೆಯಿಲ್ಲವೋ ಅವನ್ನು ಸ್ವಗತವಾಗಿಸಿ ಮತ್ತೊಂದು ಸಂದರ್ಭದಲ್ಲಿ ಅದನ್ನು ಅರೆಸತ್ಯದೊಂದಿಗೆ ಬೆರೆಸುವ ಕುತಂತ್ರವಿದು. ಅಥವಾ ಅದನ್ನು ಪ್ರತಿಪಾದಿಸುವ ಹಿಂದೂತ್ವವಾದಿ ಇತಿಹಾಸಕಾರರು ತೋರುವ ಪುರಾವೆಯನ್ನು ಮಾತ್ರ ಎತ್ತಿಹಿಡಿಯುವುದು ಮತ್ತು ಅದಕ್ಕೆ ಪ್ರತಿಯಾಗಿ ಇತರ ಇತಿಹಾಸಕಾರರು ತೋರುವ ಸತ್ಯವನ್ನು ಅವರ್ಣಗೊಳಿಸಿಬಿಡುವುದು ಅಥವಾ ವಿಕ್ಷೇಪಿಸಿಬಿಡುವುದು..!!

ಅಷ್ಟು ಮಾತ್ರವಲ್ಲ, ಇಲ್ಲಿ ಇರುವುದು ಕೇವಲ ಮುಸ್ಲಿಂ ಭಂಜನೆ ಮಾತ್ರವಲ್ಲ, ಬ್ರಾಹ್ಮಣ್ಯದ ವಿಜೃಂಭಣೆ ಸಹ ಜೊತೆಜೊತೆಗಿದೆ. ಬ್ರಾಹ್ಮಣ್ಯದ ವಿರುದ್ಧ ಹುಟ್ಟಿಬಂದ ಭಕ್ತಿಪಂಥವನ್ನು ಬ್ರಾಹ್ಮಣ್ಯದ ಪುನರುತ್ಥಾನ ಭಜನೆಯಲ್ಲಿ ಸೇರಿಸಿಕೊಂಡುಬಿಡುವ ನವ ಬ್ರಾಹ್ಮಣ್ಯವೂ ಇದೆ.

"ಮರಾಠರ ಉದಯವಾಗದೇ ಭರತ ಖಂಡವು ನೇರವಾಗಿ ಮುಸ್ಲಿಮರಿಂದ ಬ್ರಿಟಿಷರಿಗೆ ಹಸ್ತಾಂತರವಾಗಿದ್ದರೆ ಕಾಶಿ ಉಳಿಯುತ್ತಿತ್ತೇ? ಹಿಂದೂಗಳಿಗೆ ಪುನಃ ಜೀವ ಬರುತ್ತಿತ್ತೇ?.." (ಪು. 183)

ಈ ರೀತಿ ಭೈರಪ್ಪನವರ ಸತ್ಯದ ವಿಕ್ಷೇಪ ಮತ್ತು



ದ್ವೇಷದಾನಾವರಣ 270 ಪುಟಗಳುದ್ದಕ್ಕೂ ಸಾಗುತ್ತದೆ. ಸಂಘಪರಿವಾರದ ಇತಿಹಾಸ ಪಠ್ಯದಂತೆ ಗೋಚರಿಸುವ ಈ ತಥಾಕಥಿತ ಕಾದಂಬರಿಯಲ್ಲಿ ಹಲವಾರು ದ್ವಂದ್ವಗಳು ಇವೆ. ಮೇಲಿನ ಉದಾಹರಣೆಯಲ್ಲಿ ಸ್ಪಷ್ಟವಾಗುವಂತೆ ಹಿಂದೂ ಧರ್ಮವನ್ನು ಅದರ ಲಾಂಛನ ನಂಬಿಕೆಗಳನ್ನು ವೈಜ್ಞಾನಿಕ ಪರಿಶೋಧನೆಗೆ ಕಿಂಚಿತ್ತೂ ಒಡ್ಡದ ಭೈರಪ್ಪ ಇಸ್ಲಾಂ ಧರ್ಮವನ್ನು ಮತ್ತು ಮುಸ್ಲಿಮರನ್ನು ಹೀಗಳೆಯಲು ತನ್ನ ಧರ್ಮಕ್ಕೆ ಅನ್ವಯಿಸದ ವೈಜ್ಞಾನಿಕತೆಯನ್ನೂ ಬಳಸುವ ಹಿಪೋಕ್ರಸಿಯನ್ನು ತೋರುತ್ತಾರೆ. ಉದಾಹರಣೆಗೆ ತನ ಗಂಡ ಆಮಿರ ಮತ್ತು ಮಗನೊಂದಿಗೆ ವಾದ ಇಡುವಾಗ ಲಕ್ಷ್ಮಿ ಉದ್ದಕ್ಕೂ ವಿಜ್ಞಾನವನ್ನು, ಮಾತ್ರವಲ್ಲ ಸಮಾಜವಾದವನ್ನು ಬಳಸುವುದು ಕುಚೋದ್ಯದಂತೆ ತೋರುತ್ತದೆ..

"ಬೇಟಾ, ನೀನು ಅಮೆರಿಕದಲ್ಲಿ ಪೆಟ್ರೊ ಕೆಮಿಕಲ್ ಇಂಜಿನಿಯರಿಂಗ್‌ನಲ್ಲಿ ಎಂ.ಎಸ್. ಮಾಡಿದವನು. ಭೂಮಿಯ ಒಳಗೆ ಪೆಟ್ರೋಲ್ ಹ್ಯಾಗೆ ಉತ್ಪತ್ತಿಯಾಯಿತು ಹೇಳು?.... ಭೂಗೋಳಶಾಸ್ತ್ರವು ವಿವರಿಸುವ ಸತ್ಯವನ್ನು ನೀನು ಅಲ್ಲಾಹುವಿನ ಕೃಪೆಗೆ ಇಳಿಸಿ ಅರೇಬಿಯಾದ ಮುಲ್ಲಾಗಳಂತೆ ಮಾತಾಡ್ತಿದೀಯಲ್ಲ" (ಪು. 140)


"ತನ್ನ ಮಗ ನಜೀರನಲ್ಲಿ... ವೈಜ್ಞಾನಿಕ ಉದಾರ ಭಾವನೆಯನ್ನು ತರಲು ಒಂದೆರಡು ದಿನ ಸಾಲುವುದಿಲ್ಲ.. ಮತಧರ್ಮದ ನಂಬಿಕೆಗಾಗಿ ತಂದೆ ತಾಯಿಯನ್ನು ಬಲಿಕೊಡು ಎಂದು ಪ್ರವಾದಿಗಳೆ ಹೇಳಿರುವ ಧರ್ಮ ಇದು ಎಂದು ನೆನಪು ಬಂತು.." (ಪು. 141)

ಎಲ್ಲಕ್ಕಿಂತ ಹೆಚ್ಚಾಗಿ ದೇಶದೆಲ್ಲೆಡೆ ಇದೇ ಸಂಘಪರಿವಾರದವರೇ ಜಜ್ಜರಾ, ಖೈರ್ಲಾಂಜಿ ಇನ್ನಿತ್ಯಾದಿ ಕಡೆಗಳಲ್ಲಿ ಸ್ವಾಭಿಮಾನಿ ದಲಿತರನ್ನು ಕೊಚ್ಚಿ ಕೊಂದು ಹಾಕುತ್ತಾ ಅತ್ಯಂತ ಅಸಹ್ಯಕರ ರೀತಿಯಲ್ಲಿ ಮನುವಾದವನ್ನು, ಅಸ್ಪೃಶ್ಯತೆ ಮತ್ತು ಜಾತಿವಾದವನ್ನು ಆಚರಿಸುತ್ತಿರುವಾಗ ಶ್ರೀಮಾನ್ ಭೈರಪ್ಪನವರು ಯಾವ ಎಗ್ಗೂಸಿಗ್ಗೂ ಇಲ್ಲದೆ "ಮನುವು ಮಾಡಿದ ತಪ್ಪನ್ನು ಹಿಂದೂ ಸಮಾಜವು ಅರಿತುಕೊಂಡು ಹಿಂದೂ ಸಮಾಜವು ನೂರು ವರ್ಷಗಳಿಂದ ತಿದ್ದಿಕೊಳ್ಳುತ್ತಿಲ್ಲವೇ? ದಲಿತರಿಗೆ ಮತ್ತು ಹಿಂದುಳಿದವರಿಗೆ ರಕ್ಷಣೆ ನೀಡಿ ಅವರನ್ನು ಅಗೌರವದಿಂದ ಕಾಣುವವರಿಗೆ ಕಠಿಣ ಶಿಕ್ಷೆ ವಿಧಿಸಿ ದೇವಸ್ಥಾನಗಳಲ್ಲಿ ಪೂಜಾರಿಗಳಾಗಿ ನೇಮಿಸುವ ಅವಕಾಶ ಕಲ್ಪಿಸುವ ಮೂಲಕ..?" (ಪು. 247) ಎಂದು ಕೇಳುವ ದಾರ್ಷ್ಟ್ಯವನ್ನು ತೋರುತ್ತಾರೆ.

ಇವೆಲ್ಲವನ್ನು ಅವರು ದ್ವೇಷವಲ್ಲ ಸತ್ಯದ ದರ್ಶನ ಎಂದು ಹೇಳುತ್ತಾರೆ. ಕೊನೆಗೆ ತಮ್ಮ ವಾದದ ಸಮರ್ಥನೆಗೆ ಸ್ವಾಮಿ ವಿವೇಕಾನಂದರ ಭಾಷಣವೊಂದನ್ನೂ ಬಳಸುತ್ತಾರೆ. ಆದರೆ ಅದೇ ಭಾಷಣದ ಕೊನೆಯಲ್ಲಿ ವಿವೇಕಾನಂದ ಆಡಿರುವ ಮತ್ತೊಂದು ನುಡಿಯನ್ನು ಮರೆತು ಬಿಟ್ಟಿದ್ದಾರೆ..

"..ಅಪ್ರಜ್ಞೆ, ಪ್ರಜ್ಞೆ ಮತ್ತು ಪ್ರಜ್ಞಾತೀತ ಸ್ಥಿತಿಗಳು ಒಂದು ಸ್ಥಿತಿಯು ಮೇಲಿನ ಸ್ಥಿತಿಗೆ ಬೆಳೆಯುವ ಒಂದೇ ಮನಸ್ಸಿನ ಮೂರು ಸ್ಥಿತಿಗಳು.... ಸಹಜ ಪ್ರವೃತ್ತಿಯು ವಿಚಾರವಾಗಿ ವಿಕಾಸವಾಗುತ್ತದೆ. ವಿಚಾರವು ಅತೀತಪ್ರಜ್ಞೆಯಾಗಿ ಬೆಳೆಯುತ್ತದೆ. ಯಾವ ಒಂದು ಸ್ಥಿತಿಯೂ ಮತ್ತೊಂದು ಸ್ಥಿತಿಯನ್ನು ವಿರೋಧಿಸುವುದಿಲ್ಲ. ಅತೀತ ಪ್ರಜ್ಞೆ ವಿಚಾರವನ್ನೆಂದೂ ವಿರೋಧಿಸುವುದಿಲ್ಲ. ಅದನ್ನು ಪೂರ್ಣಗೊಳಿಸುತ್ತದೆ..ಅದರೊಡನೆ ಸಮರಸವಾಗುತ್ತದೆ.."

ಆದರೆ ಭೈರಪ್ಪನವರ ಅಪ್ರಜ್ಞೆ ವಿಚಾರದ ಮೆಟ್ಟಿಲನ್ನೇ ಹತ್ತದೆ ಪ್ರಜ್ಞೆಯ ಮಜಲನ್ನು ತಲುಪಿರುವುದರಿಂದ ಅದು ಇನ್ನೊಂದು ಹೆಜ್ಜೆ ಬೆಳೆದು ಪ್ರಜ್ಞಾತೀತವಾಗುವ ಬದಲು ದ್ವೇಷವಾಗಿ ಪಾತಾಳಕ್ಕೆ ಮುಟ್ಟಿದೆ. ಲೋಕಕ್ಕೆ, ಮನುಷ ಸಹಜ ಅಂತಃಕರಣಕ್ಕೆ ಕಿಚ್ಚು ಹಚ್ಚಿ ಫ್ಯಾಸಿಸ್ಟ್ ನರಕವನ್ನು ಸೃಷ್ಟಿಸುವ ಮನುಷ್ಯದ್ವೇಷಿ ಪಡೆಯ ಸೈದ್ಧಾಂತಿಕ ನಾಯಕನನ್ನಾಗಿಸಿದೆ. ಕನ್ನಡದ ಸಾರಸ್ವತ ವಲಯ ಇದನ್ನು ಧಿಕ್ಕರಿಸಿದರೆ ಕನ್ನಡದ ಹಿರಿಮೆ ಹೆಚ್ಚುತ್ತದೆ.



ಕಡಲ ದಡದ
ಮರಳ ರಾಶಿಯ ಮುಂದೆ ನಿಂತಾಗ
ಮನುಷ್ಯರಿಗೇನಲ್ಲ ಕನಸುಗಳು
ಮೂಡುತ್ತವೆ;
ಮರಳಲ್ಲಿ ಕಟ್ಟುತ್ತಾರೆ
ತಮಗೊಂದು ಪುಟ್ಟಮನೆ
ಮನೆಗೊಂದು ಹೂದೋಟ
ತೋಟದ ದಡದಲ್ಲಿ ಹರಿಯುವ ಹೊಳೆ
ಹಿಂಬದಿಯಲಿ ಆಕಾಶದೆತ್ತರ
ನಿಂತ ಹಿಮಾಲಯ

ಮರಳಿಗೆ ಅಷ್ಟು ಹೊಳಪಿಲ್ಲ
ಕಟ್ಟಿದಷ್ಟೆ ಸಲೀಸಾಗಿ ಇಳಿಯುವುದು ತಳಕ್ಕೆ
ಅವರು
ತಾವಿಲ್ಲದ ವೇಳೆ ಬಂದು ಯಾರೋ
ತುಳಿವ ಭಯಕ್ಕೆ
ತಾವೇ ಕಟ್ಟಿದ ಎಲ್ಲವ ತಾವೇ
ತುಳಿದುಹಾಕುತ್ತಾರೆ

ಹಿಂತಿರುಗುವಾಗ
ಮರೆಯದೆ ಉಕ್ಕುವ ಕಡಲ ನೋಡುತ್ತಾರೆ
ಬಿಡಿ ಬಿಡಿ ಮರಳು
ಕಡಲಷ್ಟು ಪರಿಪೂರ್ಣವಲ್ಲ

ಮನುಷ್ಯ ದೈವವಾಗುವ ಕೊಂಡಿ
ಕಳಚಿದ್ದು ಇಲ್ಲಿಂದಲೇ.....

ಆರ್. ಸುಧೀಂದ್ರಕುಮಾರ

ಅರ್ಥಪೂರ್ಣವಾಗಿ ಆಚರಣೆಯಾದ ಲಂಕೇಶರ ಹುಟ್ಟುಹಬ್ಬ



ಮಾರ್ಚ್ 8ರಂದು ನಡೆದ ಲಂಕೇಶ್ ವಾರ ಪತ್ರಿಕೆಯ ದ್ವಿತೀಯ ವಾರ್ಷಿಕೋತ್ಸವ ಮತ್ತು ಗೈಡ್‌ನ ಮೊದಲ ವಾರ್ಷಿಕೋತ್ಸವ ಲಂಕೇಶರ ಹುಟ್ಟುಹಬ್ಬ ತುಂಬ ಅರ್ಥಪೂರ್ಣವಾಗಿತ್ತು. ವೇದಿಕೆಯಲ್ಲಿದ್ದ ಜಿ. ರಾಮಕೃಷ್ಣ, ಕೆ. ಮರುಳಸಿದ್ದಪ್ಪ, ಕಿ.ರಂ. ನಾಗರಾಜ, ಸಾರಾ ಅಬೂಬಕ್ಕರ್, ಬಳಿದಾಳೆ ಈಶ ಎಲ್ಲರೂ ಚೆನ್ನಾಗಿ ಮಾತನಾಡಿದರು. ಅಲ್ಲಿ ನೆರೆದಿದ್ದ ಎಲ್ಲ ಸೃಜನಶೀಲ ಮನಸ್ಸುಗಳು ಸಾವಧಾನದಿಂದ ಕುಳಿತು ಸಮಾರಂಭದಲ್ಲಿ ಭಾಗಿಯಾಗಿ ನಂತರ ಚಿತ್ರಾ ಪಾಲೇಕರ್‌ರ ಮರಾಠಿ ಚಿತ್ರ 'ಮಾತಿಮಾಯ್' ಚಿತ್ರವನ್ನು ವೀಕ್ಷಿಸಿದರು. ಲಂಕೇಶರ ಹುಟ್ಟುಹಬ್ಬದ ದಿನದಂದು ಅವರ ಕುಟುಂಬ ಈ ಚಿತ್ರಕ್ಕೆ ಪ್ರಶಸ್ತಿಯನ್ನು ನೀಡಿದ್ದು ಮತ್ತು ಪ್ರದರ್ಶಿಸಿದ್ದು ಲಂಕೇಶರಿಗೆ ನೀಡಿದ ಹುಟ್ಟುಹಬ್ಬದ ಕೊಡುಗೆಯಂತಿತ್ತು.

-ಸಿ. ಶಿವಕುಮಾರ್,
ತುಮಕೂರು

7.3.2007ರ ಲಂಕೇಶ್ ಸಂಚಿಕೆಯ 19ನೇ ಪುಟದಲ್ಲಿ "ಕ್ರೇಜಿ ಜೊತೆ ಕೇಜಿ" ಬರಹ ಓದಿದೆ. ಆ ಬರಹದಲ್ಲಿ ರವಿಚಂದ್ರನ್‌ರವರು ಒಂಬತ್ತು ವರ್ಷಗಳ ಬಳಿಕ ಜಗ್ಗೇಶ್ ಜೊತೆ ಅಭಿನಯಿಸುತ್ತಿರುವ ಬಗ್ಗೆ ಬರೆದಿದ್ದೀರಿ. ಆದರೆ ರವಿಚಂದ್ರನ್ ಮತ್ತು ಜಗ್ಗೇಶ್ ಈ ಎರಡು ವರ್ಷಗಳ ಹಿಂದೆ 'ರಾಮಕೃಷ್ಣ' ಎಂಬ ಚಿತ್ರದಲ್ಲಿ ಒಟ್ಟಾಗಿ ಅಭಿನಯಿಸಿದ್ದಾರೆ. ತಾವು ಪರಿಶೀಲಿಸಬೇಕು.

-ಎಚ್. ಭೀಮರಾವ್ ವಾಷ್ಠರ್ (ಶಾಸ್ತ್ರಿ),
ಸುಳ್ಯ.

'ಲಂಕೇಶ್' ಬಹಳ ಚೆನ್ನಾಗಿ ಮೂಡಿಬರುತ್ತಿದೆ. ಕತೆ, ಕವನ, ಶ್ರೇಷ್ಠ ಸಾಹಿತಿಗಳ ಅನುಭವಗಳು ಪ್ರತಿಯೊಂದು ಲೇಖನವು ವಿಶಿಷ್ಟವಾದ ರೀತಿಯಲ್ಲಿ ಒಳಗೊಂಡಿದೆ ಜೊತೆಗೆ ಎಲ್ಲರ ಮನ ಸೂರೆಗೊಂಡಿದೆ. ಒಟ್ಟಾರೆ ಪತ್ರಿಕೆ ಸಮೃದ್ಧವಾದ ಸಂಚಿಕೆಯಾಗಿ ಹೊರಹೊಮ್ಮುತ್ತಿದೆ ಎಂದು ಹೇಳಲು ಅತಿಯಾದ ಸಂತೋಷವಾಗುತ್ತಿದೆ.

ಹೀಗೇ 'ಲಂಕೇಶ್' ಅತಿ ಶ್ರೇಷ್ಠ ಮಟ್ಟದಲ್ಲಿ ಬೆಳೆದು ಸದಾ ಎಲ್ಲಾ ವರ್ಗದವರಿಗೆ ಹೆಮ್ಮರವಾಗಿ ಬೆಳೆಯಲೆಂದು ನನ್ನ ಮನಃಪೂರ್ವಕವಾಗಿ ಆಶಿಸುತ್ತೇನೆ.

ಪತ್ರಿಕೆಯಲ್ಲಿ ಮೊದಲಿನಂತೆ ಸೂಕ್ತಿಗಳನ್ನು ಪ್ರಕಟಿಸಬೇಕೆಂದು ತಮ್ಮಲ್ಲಿ ವಿನಂತಿ.


-ಶ್ರೀ ಪಾಂಡುರಂಗ ಸಾಲವಾಡಗಿ
ಬಸವನಗರ, ವಿಜಾಪುರ

ಮಾರ್ಚ್7, 2007ರ ಪತ್ರಿಕೆಯಲ್ಲಿ ವಿಶೇಷ ಲೇಖನ ಶ್ರೀ ಕೆ.ಆರ್. ವಿದ್ಯಾಧರ, ಮಡಿಕೇರಿ ಅವರ 'ವೇಟೆಚೇಗವ ಮತ್ತು ಬ್ರಾಹ್ಮಣ' ಓದಿ ಗಾಬರಿಯಾಯಿತು.


ಹೌದು; ವೈದಿಕ ಬ್ರಾಹ್ಮಣರ ತಂತ್ರಕ್ಕೆ ಬಲಿಯಾಗಿ ತುಳುನಾಡಿನ ಜಾನಪದವೇ ನಾಶವಾಗುತ್ತಾ ಇವೆ. ಒಂದೆರಡು ವರ್ಷದಲ್ಲಿ ಸಂಪೂರ್ಣ ನಾಶವಾಗುವ ಅಪಾಯ ಎದ್ದು ತೋರುತ್ತಿದೆ. ಬ್ರಾಹ್ಮಣರ ಸಲಹೆಯಂತೆ ಭೂತಾರಾಧನೆಯನ್ನು ನಿಲ್ಲಿಸುವಂತೆ ಹೇಳಿ ಅದರ ಬದಲಿಗೆ ದೇವಕ್ರಿಯೆಯಲ್ಲಿ ಬ್ರಾಹ್ಮಣರು ಅದನ್ನು ಮುಗಿಸಿ ಕಿಸೆ ತುಂಬಿಸಿಕೊಂಡು ಹೋಗುತ್ತಾರೆ. ಕೊಡಗು, ದಕ್ಷಿಣ ಕನ್ನಡ ಮತ್ತು ಕೇರಳದ ಜನ ನಂಬಿಕೊಂಡು ಬಂದ ಭೂತಾರಾಧನೆಯನ್ನು ಜಾನಪದ ರೀತಿಯಲ್ಲಿ ನಡೆಸಿಕೊಂಡು ಬಂದಲ್ಲಿ ಮುಂದಿನ ಜನಾಂಗಕ್ಕೆ ನೋಡುವ, ಪಾಲಿಸುವ ಅವಕಾಶ ಉಳಿಸಿಕೊಂಡು ಬರಬೇಕು. ಈ ಭಾಗದ ಭೂತಾರಾಧನೆಯಂತಹ ಜಾನಪದ ಅದ್ಭುತವಾದ ಕಲೆ ಬೇರೆಲ್ಲೂ ನೋಡಸಿಗದು.

ಇಂತಹ ಲೇಖನವನ್ನು ಪ್ರಕಟಿಸಿದ ನಿಮಗೂ, ಲೇಖಕರಿಗೂ ನನ್ನ ವಂದನೆಗಳು.

-ಟಿ. ಸೋನಾ. ಬೆಂಗಳೂರು



'ಪಾಲ್ಕೆ ಪ್ರಶಸ್ತಿ ಅಂದ್ರೇನು?' ಅಂತ ಕೇಳಿದ್ದರು ಅಪ್ಪಾಜಿ



ನಿರೂಪಣೆ: ಸದಾಶಿವ ಶೆಣೈ

ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಆನಂದ್, ಓಂ, ನಮ್ಮೂರ ಮಂದಾರ ಹೂವೇ, ಜನುಮದ ಜೋಡಿ..... ಈ ನಾಲ್ಕೂ ಚಿತ್ರಗಳು ನನ್ನ ವೃತ್ತಿ ಜೀವನದಲ್ಲಿ ಪ್ರಮುಖ ಮೈಲಿಗಲ್ಲುಗಳು. ಈ ನಾಲ್ಕೂ ಚಿತ್ರಗಳನ್ನು, ಅವುಗಳ ನಿರ್ದೇಶಕರನ್ನು ನಾನು ಎಂದೂ ಮರೆಯಲು ಸಾಧ್ಯವಿಲ್ಲ. ಹಾಗೆ ನೋಡಿದರೆ ನನ್ನ ಕೆರಿಯರ್ ಗ್ರಾಫ್ ಈ ನಾಲ್ಕೂ ಚಿತ್ರಗಳ ಆಧಾರದ ಮೇಲೆ ನಿಂತಿದೆ. 'ಆನಂದ್' ಚಿತ್ರದ ಶಿವಣ್ಣನೇ ಬೇರೆ, 'ಓಂ' ಶಿವಣ್ಣನೇ ಬೇರೆ, 'ನಮ್ಮೂರ ಮಂದಾರ ಹೂವೆ'ಯಲ್ಲಿದ್ದ ಶಿವಣ್ಣನೇ ಬೇರೆ, 'ಜನುಮದ ಜೋಡಿ'ಯ ಶಿವಣ್ಣನಂತೂ ಕಂಪ್ಲೀಟ್ ಡಿಫರೆಂಟ್!

ನೀವೇ ಒಮ್ಮೆ ನೋಡಿ. ನಾನು ಅಂಬೆಗಾಲಿಟ್ಟು ಚಿತ್ರರಂಗಕ್ಕೆ ಬಂದಾಗ ಮಾಡಿದ್ದು 'ಆನಂದ್'. ಆಗಿನ್ನೂ ನನಗೆ ನಟನೆಯ ಗಂಧ-ಗಾಳಿ ಗೊತ್ತಿರಲಿಲ್ಲ. 'ಓಂ' ನಲ್ಲಿ ಭೂಗತ ಲೋಕದ ಪಾತಕಿಯಾಗಿ ಹೇಗೆ ನಟಿಸಿದೆ ನೆಂಬುದು ನಿಮಗೆ ಗೊತ್ತು. ಆನಂತರ 'ನಮ್ಮೂರ ಮಂದಾರ ಹೂವೆ' ಚಿತ್ರದಲ್ಲಿ ಲವರ್ ಬಾಯ್‌ಆಗಿ ಲವಲವಿಕೆಯಿಂದ ನಟಿಸಿದೆ. 'ಜನುಮದ ಜೋಡಿ'ಯಂತೂ ಜನಪದ ಸೊಗಡಿನ ಚಿತ್ರ, ಇದರಲ್ಲಿ ಪಾಶ್ಚಾತ್ಯ ನೃತ್ಯ ರೌಡಿಸಂ, ಹೀರೋಯಿಸಂಗೆ ಅವಕಾಶವೇ ಇರಲಿಲ್ಲ. ಹೀಗೆ ಚಿತ್ರದಿಂದ ಚಿತ್ರಕ್ಕೆ ನಿಮ್ಮ ಪ್ರೀತಿಯ ಶಿವಣ್ಣ ಬದಲಾಗುತ್ತಾ ಹೋದ. ಇದರೊಂದಿಗೆ ನನ್ನ ನಟನೆಯಲ್ಲಿ ಬದಲಾವಣೆಯನ್ನು, ಪ್ರಬುದ್ಧತೆ ಕಾಣಿಸಿಕೊಂಡಿದ್ದು ನನ ಅರಿವಿಗೂ ಬಂದಿತ್ತು. ಬಹುಶಃ ನಾನು ಪೂರ್ವ ಜನ್ಮದಲ್ಲಿ ಪುಣ್ಯ ಮಾಡಿದ್ದರಿಂದ ಅಪ್ಪಾಜಿಯ ಮಗನಾಗಿ ಹುಟ್ಟಿದೆ. ಆ ಕಾರಣಕ್ಕೋ ಏನೋ ನನಗೆ ಅನೇಕ ಒಳ್ಳೊಳ್ಳೆಯ ನಿರ್ದೇಶಕರು ಸಿಕ್ಕಿ ನನ್ನಿಂದ ಒಳ್ಳೆಯ ಪಾತ್ರಗಳನ್ನು ಮಾಡಿಸಿದರು. ಆದುದರಿಂದ ನನ್ನ ವೃತ್ತಿಜೀವನವನ್ನು ಸುಂದರವಾಗಿ ರೂಪಿಸಿದ ಕೀರ್ತಿ ಅಪ್ಪಾಜಿ ಮತ್ತು ವರದಪ್ಪನವರನ್ನು ಹೊರತುಪಡಿಸಿದರೆ ಉಪೇಂದ್ರ, ದೇಸಾಯಿ ಮತ್ತು ನಾಗಾಭರಣ ಅವರಿಗೆ ಸಲ್ಲುತ್ತದೆ.

ಇಲ್ಲೊಂದು ವಿಶೇಷವನ್ನು ನೀವು ಗಮನಿಸಬೇಕು. ಈ ಮೂರೂ ತರಹದ ಪಾತ್ರಗಳನ್ನು ನಾನು ಮೊದಲ ಮೂರು ಚಿತ್ರಗಳಲ್ಲೇ ನಿರ್ವಹಿಸಿಬಿಟ್ಟಿದ್ದೆ. ನೀವೊಮ್ಮೆ ನೋಡಿ 'ಆನಂದ್', 'ರಥಸಪ್ತಮಿ', 'ಮನಮೆಚ್ಚಿದ ಹುಡುಗಿ' ಈ ಮೂರೂ ಚಿತ್ರಗಳಲ್ಲಿನ ಪಾತ್ರದ ವೈವಿಧ್ಯತೆಗಳನ್ನು ನೀವು ಗಮನಿಸಿ. ಜೊತೆಗೆ 'ರಣರಂಗ'ವನ್ನು ನೆನಪಿಸಿಕೊಳ್ಳಿ. ಅವೆಲ್ಲವನ್ನೂ ಒಟ್ಟು ಸೇರಿಸಿದರೆ 'ಓಂ', 'ನಮ್ಮೂರ ಮಂದಾರ ಹೂವೆ' ಮತ್ತು 'ಜನುಮದ ಜೋಡಿ' ನೆನಪಾಗುವುದಿಲ್ಲವೇ? ಬಹುಶಃ ಈ ಕಾರಣಕ್ಕೇ ಅಭಿಮಾನಿಗಳು ನನ್ನನ್ನು 'ಹ್ಯಾಟ್ರಿಕ್ ಹೀರೋ' ಎಂದು ಕರೆದಿರಬಹುದು. ಒಂದು ಚಿತ್ರ ಯಶಸ್ವಿಯಾದ ಕೂಡಲೇ ಅದೇ ಮಾದರಿಯ ಮತ್ತೊಂದು ಚಿತ್ರವನ್ನು ನಾನು ಎಂದೂ ಮಾಡೇ ಇಲ್ಲ. ಆ ಥರ ಗೆಲುವಿನ ಸೂತ್ರಕ್ಕೆ ನಾನು ಅಂಟಿಕೊಂಡವನೇ ಅಲ್ಲ. ವೈವಿಧ್ಯಮಯ ಪಾತ್ರಗಳನ್ನು ಮಾಡುವುದೆಂದರೆ ನನಗೆ ಎಲ್ಲಿಲ್ಲದ ಉತ್ಸಾಹ. ಅದರಲ್ಲೂ 'ಜನುಮದ ಜೋಡಿ'ಯಂತಹ ಡೀ-ಗ್ಲಾಮರೈಸ್ಡ್ ಪಾತ್ರ ಜನ ಇಷ್ಟಪಟ್ಟಮೇಲೆ ನಾನು ನನ್ನ ಪಾತ್ರಗಳ ಆಯ್ಕೆ ಬಗ್ಗೆ ಇನ್ನಷ್ಟು ಎಚ್ಚರಿಕೆ ವಹಿಸಲು ಆರಂಭಿಸಿದೆ. 'ಜನುಮದ ಜೋಡಿ'ಯಲ್ಲಿ ಯಾವ ಪಾಶ್ಚಾತ್ಯ ನೃತ್ಯವಿದೆ? ಹೀರೋಯಿಸಂ ತೋರಿಸುವ ಫೈಟಿಂಗ್ ಇದೆಯೇ? ಐಟಂ ಸಾಂಗ್ ಇದೆಯೇ? ಇದ್ಯಾವುದೂ ಇಲ್ಲದಿದ್ದರೂ ಕರ್ನಾಟಕದ ಮೂಲೆ ಮೂಲೆಯಲ್ಲಿ ಜನ ಇದನ್ನು ಸ್ವಾಗತಿಸ ಲಿಲ್ಲವೇ? ಹೀಗೆ ಆಲೋಚಿಸುತ್ತಿರುವಾಗಲೇ ನಾನು ರೀಮೇಕ್ ಚಿತ್ರಗಳನ್ನು ಯಾಕೆ ಮಾಡಬೇಕು ಎಂದೂ ಚಿಂತಿಸಲು ಸಾಧ್ಯವಾಗಿದ್ದು.

ಪಾಲ್ಕೆ ಪ್ರಶಸ್ತಿ ಲಭಿಸಿದಾಗ, ''ಇದೇನು ಪಾಲ್ಕೆ ಪ್ರಶಸ್ತಿ?'' ಎಂದು ಅಪ್ಪಾಜಿ ನನ್ನನ್ನು ಮುಗ್ಧವಾಗಿ ಕೇಳಿದ್ದು ಇನ್ನೂ ನೆನಪಿದೆ. ನಿಜ ಹೇಳುತ್ತೇನೆ, ಅಪ್ಪಾಜಿ ಇಂತಹ ವಿಷಯದಲ್ಲಿ ನಿಜಕ್ಕೂ ಮುಗ್ಧರು. ಆ ಮುಗ್ಧತೆಯೇ ಅವರ ಬಂಡವಾಳ ಎಂದರೆ ತಪ್ಪಾಗದು. ಅವರ ಮುಗ್ಧತೆಯನ್ನು ಹಿಂಬಾಲಿಸಿಕೊಂಡು ಡಾಕ್ಟರೇಟ್, ಪದ್ಮಶ್ರೀ ಪ್ರಶಸ್ತಿಗಳು ಬಂದವೆ ವಿನಃ ಅವರು ಎಂದೂ ಪ್ರಶಸ್ತಿಯ ಬೆನ್ನತ್ತಿದವರೇ ಅಲ್ಲ.

'ಓಂ' ಮತ್ತು 'ನಮ್ಮೂರ ಮಂದಾರ ಹೂವೆ' ಚಿತ್ರದ ಯಶಸ್ಸು ನನ್ನ ಅಭಿಮಾನಿಯ ಬಳಗವನ್ನು ದುಪ್ಪಟುಗೊಳಿಸಿತು. 'ಜನುಮದ ಜೋಡಿ' ಸಮಯದಲ್ಲಂತೂ ಚಿತ್ರೀಕರಣವನ್ನು ನೋಡಲು ದಿನನಿತ್ಯ ಸಾವಿರಾರು ಜನ ಸೇರುತ್ತಿದ್ದರು. ಪ್ರತಿದಿನ ಕನಿಷ್ಠ ಐದು ಸಾವಿರ ಅಭಿಮಾನಿಗಳ ಜೊತೆ ನಾನು ಫೋಟೋ ತೆಗೆಸಿಕೊಳ್ಳುತ್ತಿದ್ದೆ. ಮಧ್ಯಾಹ್ನ ಲಂಚ್ ಬ್ರೇಕ್ ಮತ್ತು ಸಾಯಂಕಾಲ ಕಾಫಿ ಸಮಯದಲ್ಲಿ ನನಗೆ ಫೋಟೋ ತೆಗೆಸಿಕೊಳ್ಳುವುದೇ ಕೆಲಸವಾಗಿತ್ತು. ಆ ತರಹ ಫೋಟೋ ತೆಗೆಯಲು ಆ ಊರಲ್ಲಿ ಇಬ್ಬರು ಹುಡುಗರಿದ್ದರು. ಅದರಲ್ಲಿ ಒಬ್ಬ ಅಭಿಮಾನಿಗಳ ಜೊತೆ ನನ್ನ ಫೋಟೋ ತೆಗೆದೇ ಹೊಸ ಬೈಕನ್ನು ಖರೀದಿಸಿದ, ಅದರ ಮೇಲೆ 'ಜನುಮದ ಜೋಡಿ' ಅಂತಲೂ ಬರೆಸಿಕೊಂಡ! ಮತ್ತೊಬ್ಬ ಫೋಟೋಗ್ರಾಫರ್ ಫೋಟೋ ತೆಗೆದ ಹಣದಲ್ಲೇ ಒಂದು ಮನೆಯನ್ನು ಕಟ್ಟಿಸಿದ. ಅಂದರೆ ಆ ದಿನಗಳಲ್ಲಿ ಎಷ್ಟು ಜನ ಅಭಿಮಾನಿಗಳು ಸೆಟ್ಟಿಗೆ ಬರುತ್ತಿದ್ದರು ಎಂದು ನೀವೇ ಊಹಿಸಿಕೊಳ್ಳಿ.

ಹಿಂದೊಮ್ಮೆ ಚಿಕ್ಕಮಗಳೂರಿನಲ್ಲಿ ಶೂಟಿಂಗ್ ಮಾಡುತ್ತಿದ್ದಾಗ ರಾತ್ರಿ ಹನ್ನೆರಡು ಗಂಟೆಗೆ ಒಂದು ರಾತ್ರಿ ಬಸ್ ತುಂಬಾ ಜನ ಬಂದು ಅಪ್ಪಾಜಿಯನ್ನು ನಿದ್ದೆಯಿಂದ ಎಬ್ಬಿಸಿ ಅವರೊಂದಿಗೆ ಫೋಟೋ ತೆಗೆಸಿಕೊಂಡಿದ್ದನ್ನು ನಾನು ಗಮನಿಸಿದ್ದೆ. ಆಗ ಯಾರೊಂದಿಗೂ ಬೇಸರಿಸಿಕೊಳ್ಳದೆ ಅಷ್ಟೂ ಜನರೊಂದಿಗೆ ಅಪ್ಪಾಜಿ ನಗುನಗುತ್ತಾ ಫೋಟೋಗೆ ಪೋಜು ಕೊಟ್ಟು ರಾತ್ರಿ ಎರಡೂವರೆ ಗಂಟೆಗೆ ಮತ್ತೆ ಮಲಗಿದ್ದರು. ಅಪ್ಪಾಜಿಯ ತಾಳ್ಮೆ ಮತ್ತು ವಿನಯತೆ ನೆನೆಸಿಕೊಂಡು ನಾನು ಕೂಡಾ 'ಜನುಮದ ಜೋಡಿ' ಶೂಟಿಂಗ್ ಸಮಯದಲ್ಲಿ ಎಲ್ಲರೊಂದಿಗೆ ಗಂಟೆಗಟ್ಟಲೆ ಫೋಟೋ ತೆಗೆಸಿಕೊಂಡೆ. ಅಪ್ಪಾಜಿ ಥರ ನನ್ನ ಮೇಲೂ ಅಭಿಮಾನಿಗಳು ಪ್ರೀತಿ ತೋರಿಸಿದ್ದನ್ನು ನೋಡಿ ನನಗೆ ಒಂಥರಾ ಖುಷಿ ಆಗಿತ್ತು.

'ಜನುಮದ ಜೋಡಿ' ಚಿತ್ರೀಕರಣದ ಸಂದರ್ಭದಲ್ಲೇ ಅಪ್ಪಾಜಿಗೆ ಪಾಲ್ಕೆ ಪ್ರಶಸ್ತಿ ದೊರೆಯಿತು. ನಮ್ಮ ಮನೆಯವರೆಲ್ಲರೂ ಆಗ ದೆಹಲಿಗೆ ಹೋಗಿದ್ದರು. ಆದರೆ ನಾನು ಮಾತ್ರ ಕಾಯಕವೇ ಕೈಲಾಸ ಎಂದು ಶೂಟಿಂಗ್‌ನಲ್ಲೇ ಮಗ್ನನಾಗಿದ್ದೆ. ಇದನ್ನೂ ನನಗೆ ಕಲಿಸಿದ್ದು ಅಪ್ಪಾಜಿ.


ಅಪ್ಪಾಜಿ ಪಾಲ್ಕೆ ಪ್ರಶಸ್ತಿ ಪಡೆದ ದಿನ ನಾವು ಜಾತ್ರೆಯ ಚಿತ್ರೀಕರಣದಲ್ಲಿ ಮಗ್ನರಾಗಿದ್ದೆವು. ಅಂದು ಶೂಟಿಂಗ್ ಬೇಗಬೇಗ ಮುಗಿಸಿ ನಾಲ್ಕೂವರೆಗೆಲ್ಲಾ ಪ್ಯಾಕಪ್ ಮಾಡಿದ್ದೆವು. ನಾನು ಬೆಟ್ಟದ ಮೇಲಕ್ಕೇ ಒಂದು ದೊಡ್ಡ ಟೀವಿಯನ್ನು ತರಿಸಿದೆ. ಅಲ್ಲಿ ಸಿಗ್ನಲ್ ಸಿಗದಿದ್ದ ಕಾರಣ ಒಂದು ದೊಡ್ಡ ಆ್ಯಂಟೆನಾ ಹಾಕಿಸಿದೆ. ಈ ಸುದ್ದಿ ಗೊತ್ತಾದ ಕೂಡಲೇ ಅಕ್ಕಪಕ್ಕದ ಹಳ್ಳಿಗಳಿಂದ ಸುಮಾರು ಐದು ಸಾವಿರ ಜನ ಬೆಟ್ಟದ ಮೇಲೆ ಜಮಾಯಿಸಿದರು. ಅಪ್ಪಾಜಿ ಪ್ರಶಸ್ತಿ ಪಡೆಯುವ ದೃಶ್ಯವನ್ನು ನೋಡಿದಾಕ್ಷಣ ಆ ಹಳ್ಳಿಯವರೆಲ್ಲಾ ಸಂತೋಷದಿಂದ ಕುಣಿದು ಕುಪ್ಪಳಿಸಿದರು. ನಾನೂ ಅವರೊಂದಿಗೆ ಕುಣಿದಾಡಿದೆ. ಅಂದು ಜಾತ್ರೆಯ ಒಳಗೊಂದು ಜಾತ್ರೆಯ ಸಂಭ್ರಮ ಸೃಷ್ಟಿಯಾಯಿತು. ಬಹುಶಃ ನಾನೂ ದೆಹಲಿಗೆ ಹೋಗಿದಿದ್ದರೆ ಈ ಸಂತೋಷ, ಸಂಭ್ರಮವನ್ನು ಖಂಡಿತವಾಗಿಯೂ ಮಿಸ್ ಮಾಡಿಕೊಳ್ಳುತ್ತಿದ್ದೆ. ಅಂದು ರಾತ್ರಿ ಆ ಬೆಟ್ಟದ ಬೆಳದಿಂಗಳ ಬೆಳಕಿನಲ್ಲಿ ಕುಳಿತು ನಾನೊಬ್ಬನೇ ನನ್ನ ಅಪ್ಪಾಜಿಯ ವೃತ್ತಿಜೀವನದ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿಕೊಂಡಿದ್ದೆ. ಅದೂ ಒಬ್ಬ ಮಗನಾಗಿ ಮತ್ತು ಒಬ್ಬ ಕಲಾವಿದನಾಗಿ. ಬಹುಶಃ ಮತ್ತೊಬ್ಬ ರಾಜ್ ಕುಮಾರ್ ಹುಟ್ಟಿಬರಲು ಸಾಧ್ಯವಿಲ್ಲ ಎಂಬ ಸತ್ಯ ನನಗೆ ಅಲ್ಲೇ ಅರಿವಾಗಿದ್ದು.

ಅಪ್ಪಾಜಿಗೆ ಪಾಲ್ಕೆ ಪ್ರಶಸ್ತಿ ಬಂದಾಗ ನಮ್ಮ ಮನೆಯಲ್ಲಿ ಹಬ್ಬದ ವಾತಾವರಣ. ಮುಂಬೈನಿಂದ ಅಮಿತಾಬ್‌ಬಚ್ಚನ್, ಮದ್ರಾಸಿನಿಂದ ರಜನೀಕಾಂತ್, ಹೈದ್ರಾಬಾದಿನಿಂದ ಅಕ್ಕಿನೇನಿ ನಾಗೇಶ್ವರರಾವ್, ಚಿರಂಜೀವಿ, ಕಮಲ್‌ಹಾಸನ್.... ಹೀಗೆ ಚಿತ್ರರಂಗದ ಅನೇಕ ಗಣ್ಯಾತಿ ಗಣ್ಯರು ಅಭಿನಂದಿಸಿದರು. ಕೆಲವರು ಮನೆಗೇ ಬಂದು ಶುಭ ಹಾರೈಸಿದರು. ಇಡೀ ಭಾರತೀಯ ಚಿತ್ರರಂಗ ಅಪ್ಪಾಜಿ ಬಗ್ಗೆ ಕೊಂಡಾಡಿತು. ಇನ್ನೊಂದೆಡೆ ಈ ಬೆಟ್ಟದ ಮೇಲೆ ಹಳ್ಳಿಯ ಜನ ಟೀವಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನೋಡಿ ಆನಂದದಿಂದ ಕುಣಿದದ್ದನ್ನು ನಾನು ನೋಡಿದ್ದೆ... ಮಾಸ್ ಮತ್ತು ಕ್ಲಾಸ್, ವಿದ್ಯಾವಂತರು ಮತ್ತು ಅವಿದ್ಯಾವಂತರು, ದಕ್ಷಿಣ ಭಾರತ ಮತ್ತು ಉತ್ತರ ಭಾರತ ಹೀಗೆ ಎಲ್ಲಾ ವರ್ಗದ ಜನರನ್ನು ತಲುಪಿದ ಅಪ್ಪಾಜಿಯ ವ್ಯಕ್ತಿತ್ವವನ್ನು ಕಂಡು ನಾನಂತೂ ಬೆರಗಾಗಿದ್ದೆ.

ಈ ಪಾಲ್ಕೆ ಪ್ರಶಸ್ತಿ ಲಭಿಸಿದಾಗ, "ಇದೇನು ಪಾಲ್ಕೆ ಪ್ರಶಸ್ತಿ?" ಎಂದು ಅಪ್ಪಾಜಿ ನನ್ನನ್ನು ಮುಗ್ಧವಾಗಿ ಕೇಳಿದ್ದು ಇನ್ನೂ ನೆನಪಿದೆ. ನಿಜ ಹೇಳುತ್ತೇನೆ, ಅಪ್ಪಾಜಿ ಇಂತಹ ವಿಷಯದಲ್ಲಿ ನಿಜಕ್ಕೂ ಮುಗ್ಧರು. ಆ ಮುಗ್ಧತೆಯೇ ಅವರ ಬಂಡವಾಳ ಎಂದರೆ ತಪ್ಪಾಗದು. ಅವರ ಮುಗ್ಧತೆಯನ್ನು ಹಿಂಬಾಲಿಸಿಕೊಂಡು ಡಾಕ್ಟರೇಟ್, ಪದ್ಮಶ್ರೀ ಪ್ರಶಸ್ತಿಗಳು ಬಂದವೆ ವಿನಃ ಅವರು ಎಂದೂ ಪ್ರಶಸ್ತಿಯ ಬೆನ್ನತ್ತಿದವರೇ ಅಲ್ಲ.

"ಅಪ್ಪಾಜಿ, ಪಾಲ್ಕೆಯೆಂದರೆ ಈ ದೇಶದಲ್ಲಿ ಸಿನಿಮಾದವರಿಗೆ ನೀಡುವ ಅತ್ಯುನ್ನತ ಪ್ರಶಸ್ತಿ" ಎಂದು ನಾನು ಅವರಿಗೆ ವಿವರಿಸಿದಾಗ "ಹೌದಾ ಕಂದಾ.... ಅಷ್ಟು ದೊಡ್ಡ ಪ್ರಶಸ್ತಿಯನ್ನು ಈ ರಾಜಕುಮಾರನಿಗೆ ಕೊಡ್ತಾರಾ...." ಎಂದು ಆಶ್ಚರ್ಯದಿಂದ ಪ್ರಶ್ನಿಸಿದ್ದರು. ಇವತ್ತು ಇದನ್ನು ಓದಿ ನಿಮಗೆ ಎಷ್ಟು ಆಶ್ಚರ್ಯವಾಗಬಹುದೋ, ಅವತ್ತು ಆ ಪ್ರಶ್ನೆಯನ್ನು ಕೇಳಿ ನನಗೂ ಅಷ್ಟೇ ಆಶ್ಚರ್ಯವಾಗಿತ್ತು.

ಈ ತರಹ ಆಶ್ಚರ್ಯಗಳನ್ನು ನಾನು ನನ್ನ ಜೀವನದಲ್ಲಿ ಅಪ್ಪಾಜಿಯಿಂದ ಬೇಕಾದಷ್ಟು ಕೇಳಿದ್ದೇನೆ, ನೋಡಿದ್ದೇನೆ, ಅನುಭವಿಸಿದ್ದೇನೆ. ಉದಾಹರಣೆಗೆ ಗಾಜನೂರಿನಲ್ಲಿದ್ದಾಗ "ಅಪ್ಪಾಜಿ ಹೋಗ್ಬಿಟ್ರು" ಎಂಬ ಸುದ್ದಿ ಹರಡಿದ್ದು ನಿಮಗೆ ನೆನಪಿದೆಯಲ್ಲವೇ? ಪತ್ರಿಕೆಗಳಲ್ಲಿ ಈ ಸುದ್ದಿ ಬಂದಾಕ್ಷಣ ಅವರ ಅಭಿಮಾನಿಗಳು ತಲ್ಲಣಗೊಂಡು ಬೀದಿಗಿಳಿದರು. ಆ ಸಂದರ್ಭದಲ್ಲಿ ನಾವು ಅನುಭವಿಸಿದ ಕಷ್ಟ ಮತ್ತು ಯಾತನೆಯನ್ನು ವಿವರಿಸಲು ಸಾಧ್ಯವೇ ಇಲ್ಲ. ಆದರೆ ಅಂತಹ ಒಂದು ಕೆಟ್ಟ ಸುದ್ದಿಯನ್ನು ಸ್ವತಃ ಅಪ್ಪಾಜಿ ಹೇಗೆ ಸ್ವೀಕರಿಸಿದರು ಗೊತ್ತಾ? ಆಗ ಅವರು ನನ್ನನ್ನು ಕರೆದು ಏನು ಹೇಳಿದರು ಗೊತ್ತಾ...?



(ಮುಂದುವರಿಯುವುದು)

ಗಾಜನೂರಿನಲ್ಲೊಂದು 'ಅಪ್ಪಾಜಿ ಭವನ'



ಗಾಜನೂರಿನಲ್ಲಿ ಸಂಪೂರ್ಣವಾಗಿ ಶ್ವೇತವರ್ಣಮಯವಾಗಿರುವ ಒಂದು 'ವೈಟ್ ಹೌಸ್' ತಲೆಯೆತ್ತುತ್ತಿದೆ. ಗಾಜನೂರಿನಲ್ಲಿ ಅಮೆರಿಕದ ವೈಟ್ ಹೌಸ್ ಯಾಕೆ ಎಂಬ ಪ್ರಶ್ನೆ ನಿಮ್ಮನ್ನು ಕಾಡುತ್ತಿರಬಹುದು. ಆದರೆ ಇದು ಜಾರ್ಜ್ ಬುಷ್ ವಾಸಿಸುವ ವೈಟ್‌ಹೌಸ್ ಅಲ್ಲ, ಬದಲಾಗಿ ಕನ್ನಡ ಚಿತ್ರರಸಿಕರ ಸಾಮ್ರಾಟ ರಾಜ್‌ಕುಮಾರ್ ರವರ ನೆನಪಿನಲ್ಲಿ ಅವರ ಮಕ್ಕಳು ಕಟ್ಟಿಸುತ್ತಿರುವ 'ಅಪ್ಪಾಜಿ' ಎಂಬ ಮನೆ.

ಮುಂದಿನ ತಿಂಗಳು ಡಾ. ರಾಜ್‌ಕುಮಾರ್‌ರವರ ಹುಟ್ಟುಹಬ್ಬದಂದು (ಏಪ್ರಿಲ್ 24) ಅವರ ತೋಟದಲ್ಲಿ ಕಟ್ಟುತ್ತಿರುವ 'ಅಪ್ಪಾಜಿ' ಮನೆಯನ್ನು ಉದ್ಘಾಟಿಸಲಿದ್ದಾರೆ. ಈ ಮನೆ ಇರುವ ಸ್ಥಳ ರಾಜ್‌ಕುಮಾರ್ ಅವರಿಗೆ ಅಚ್ಚುಮೆಚ್ಚಿನ ಜಾಗವಾಗಿದ್ದು ಅವರು ಆಗಾಗ ಅಲ್ಲೇ ಧ್ಯಾನಮಗ್ನರಾಗುತ್ತಿದ್ದರಂತೆ. ಅದಕ್ಕೆ ಶಾಂತಿ ಪ್ರತೀಕವಾಗಿರುವ ಮನೆ ಬಗ್ಗೆನೇ 'ಅಪ್ಪಾಜಿ' ಭವನಕ್ಕೆ ಸೂಕ್ತ ಎಂದು ಅವರು ನಿರ್ಧರಿಸಿದ್ದಾರೆ.

ಮತ್ತೊಂದು ಜನುಮದ ಜೋಡಿ

'ಭಾಗ್ಯದ ಬಳೆಗಾರ' ಎಂಬ ಹೆಸರಿನ ಚಿತ್ರವನ್ನು ಸದ್ಯದಲ್ಲೇ ರಾಜ್ ಸಂಸ್ಥೆಯವರು ಆರಂಭಿಸಲಿದ್ದಾರೆ. ಅಜಯ್ ಕುಮಾರ್ ಬರೆದಿರುವ ಕತೆಗೆ ಶಿವರಾಜ್‌ಕುಮಾರ್ ನಾಯಕ ಎಂದು ತೀರ್ಮಾನವಾಗಿದ್ದರೂ ನಿರ್ದೇಶಕನ ಆಯ್ಕೆ ಇನ್ನೂ ಆಗಿಲ್ಲ. ಬಹುಪಾಲು ನಾಗಾಭರಣ ಆಯ್ಕೆಯಾಗುವ ಸಾಧ್ಯತೆ ಕಾಣಿಸುತ್ತಿದೆ.

ಇಷ್ಟನ್ನು ಓದಿದ ಮೇಲೆ ನಿಮಗೆ ಇದು ಇನ್ನೊಂದು 'ಜನುಮದ ಜೋಡಿ' ಆಗಬಹುದು ಎಂದು ಅನಿಸಿರಬಹುದಲ್ಲವೇ? ನಿಮ್ಮ ಊಹೆ ನಿಜ. ಚಿತ್ರದ ಕಥೆಯೂ ಅದೇ ಧಾಟಿಯಲ್ಲಿದೆ ಎನ್ನುತ್ತಾರೆ ಕತೆಗಾರ ಅಜಯ್‌ಕುಮಾರ್.



R.B.P. LANKESH, Kannada Weekly   Price Rs. 10/-   21-3-2007   RNI No. KARKAN2005/14648   Regd.No.KA/BG(S)/2036/2005-07

ಡೈಸಿಯ ಅಟ್ಟಹಾಸ



ಡೈಸಿ ಬೋಪಣ್ಣ ಬಗ್ಗೆ ನಾವು ಕಳೆದ ವಾರ ಬರೆದದ್ದು ನಿಜವಾಯಿತು. ಆಕೆ ತನ್ನ ಚೊಚ್ಚಲ ಪತ್ರಿಕಾಗೋಷ್ಠಿಯಲ್ಲಿ ಹೊಸ ವಿಷಯವನ್ನೇನೂ ಹೇಳಲೇ ಇಲ್ಲ, ಆದರ ಬದಲಿಗೆ ಆಕೆಯನ್ನು ಚಿತ್ರರಂಗಕ್ಕೆ ಪರಿಚಯಿಸಿದ ಕವಿತಾ ಲಂಕೇಶ್ ಬಗ್ಗೆ ಮಾತನಾಡುತ್ತಾ "ತಮ್ಮ 'ಬಿಂಬ' ಚಿತ್ರದಲ್ಲಿ ನನ್ನನ್ನು ಇಬ್ಬರು ಮಕ್ಕಳ ತಾಯಿಯಾಗಿ ತೋರಿಸಿದರು" ಎಂದು ದೂರಿದಳು. ಆದರೆ ಆ ಪಾತ್ರವನ್ನು ಒಪ್ಪಿಕೊಂಡಾಗ ಆಕೆ ಏನನ್ನೂ ಅರಿಯದ ಹದಿನಾರು ವರ್ಷದ ಹುಡುಗಿಯೇನಾಗಿರಲಿಲ್ಲ, ಅಥವಾ ತುಂಡು ಬಟ್ಟೆ ಹಾಕಿಕೊಂಡು ಬೆಂಗಳೂರಿನ ಪಬ್‌ಗಳಲ್ಲಿ ಡ್ಯಾನ್ಸ್ ಮಾಡುತ್ತಿದ್ದ ಆಕೆ ಕಿವಿಯಲ್ಲಿ ಹೂವನ್ನೂ ಇಟ್ಟುಕೊಂಡಿರಲಿಲ್ಲವಲ್ಲಾ? ಇಂತಹ ಪ್ರಶ್ನೆಗಳಿಗೆ ಈ ಡೈಸಿ ಎಂಬ ಪೆದ್ದಿಯಲ್ಲಿ ಉತ್ತರಗಳಿರುವುದಿಲ್ಲ ಬಿಡಿ.

ಅದೆಲ್ಲ ಇರಲಿ, ಪತ್ರಿಕಾಗೋಷ್ಠಿಯಲ್ಲಿ ಆಕೆ ಮುಂಬೈಯಲ್ಲಿ ತೆಗೆಸಿಕೊಂಡ ಗ್ಲಾಮರಸ್ ಫೋಟೋಗಳ ಸಿಡಿಯನ್ನು ಎಲ್ಲರಿಗೂ ಕೊಟ್ಟಳು. ಅದರಲ್ಲಿನ ಕೆಲವು ಫೋಟೋಗಳು ಪ್ರಕಟಿಸಲು ಅಸಹ್ಯವಾಗಿದ್ದರೂ ಇದ್ದುದರಲ್ಲೇ ಒಂದು ಒಳ್ಳೆಯ ಫೋಟೋ ಇಲ್ಲಿದೆ ನೋಡಿ.

ಹಾರುವ ಹಕ್ಕಿ ಮೋನಿಕಾ

ಡೈಸಿ ಪತ್ರಿಕಾಗೋಷ್ಠಿ ಕರೆದ ಎರಡೇ ದಿನಕ್ಕೆ ಮತ್ತೊಬ್ಬಳು ನಟಿ ಪತ್ರಿಕಾಗೋಷ್ಠಿ ಕರೆದಳು. ಆಕೆಯ ಹೆಸರು ಮೋನಿಕಾ. ಯಾವ ಮೋನಿಕಾ ಎಂದು ನೀವು ತಲೆಕೆಡಿಸಿಕೊಳ್ಳಬೇಡಿ. 'ಜೂಟ್' ಚಿತ್ರದಲ್ಲಿ ನಾಯಕಿಯಾಗಿದ್ದ ಈ ಮೋನಿಕಾ ಆನಂತರ ಅವಕಾಶಗಳನ್ನು ಹುಡುಕುತ್ತಾ ಮುಂಬೈಗೆ ಹೋಗಿದ್ದಳು.



ಆದರೆ ಮುಂಬೈಗೆ ಹೋದ ನಂತರ ಆಕೆ ತನ್ನ ಮನಸ್ಸು ಬದಲಾಯಿಸಿದಳು. ಈಗ ಎರಡು ವರ್ಷಗಳಿಂದ ಸುರೇಶ್ ವಾಡ್ಕರ್ ಶಿಷ್ಯೆಯಾಗಿ ಹಿಂದೂಸ್ತಾನಿ ಸಂಗೀತವನ್ನು ಕಲಿಯುತ್ತಿದ್ದಾಳೆ. ಆಕೆ ಮೈಸೂರಿನಲ್ಲಿದ್ದಾಗ ವಸುಂಧರಾ ದೊರೆಸ್ವಾಮಿ ಶಿಷ್ಯೆಯಾಗಿ ಭರತನಾಟ್ಯ ನೃತ್ಯಗಾರ್ತಿಯಾಗಿ ಹೆಸರು ಮಾಡಿದ್ದಳು. ಚೀನಾ, ಸಿಂಗಾಪೂರ್ ಮೊದಲಾದ ಕಡೆ ಭರತನಾಟ್ಯ ಪ್ರದರ್ಶನವನ್ನೂ ನೀಡಿದ್ದಳು. ಅಂದರೆ ಕಳೆದ ಐದಾರು ವರ್ಷಗಳಿಂದ ನೃತ್ಯಗಾರ್ತಿ, ಆನಂತರ ನಾಯಕಿ ಈಗ ಗಾಯಕಿ... ಹೀಗೆ ಒಂದರಿಂದ ಇನ್ನೊಂದಕ್ಕೆ ಈಕೆ ಹಾರುತ್ತಲೇ ಇದ್ದಾಳೆ.

ಮೊನ್ನಿನ ಪತ್ರಿಕಾಗೋಷ್ಠಿಯಲ್ಲಿ ಎರಡು ಹಾಡನ್ನು ಹೇಳಿ ಎಲ್ಲರನ್ನೂ ರಂಜಿಸಿದಳು. ಸದ್ಯಕ್ಕೆ ಈಕೆ ನಟಿಸಿರುವ 'ಏಕದಂತ' ಬಿಡುಗಡೆ ಆದನಂತರ ಕನ್ನಡದಲ್ಲಿ ಹೊಸ ಅವಕಾಶ ಸಿಗಬಹುದು ಎಂಬ ನಿರೀಕ್ಷೆ ಹೊಂದಿದ್ದಾಳೆ. ಆಕಸ್ಮಾತ್ ಸಿಗದಿದ್ದರೆ ಆಕೆ ಯಾವ ಹೊಸ ಕಲೆಯನ್ನು ಆಯ್ಕೆ ಮಾಡಿಕೊಳ್ಳಬಹುದು?!

ಡೈಸಿ ಅವಕಾಶ ಕೊಟ್ಟವರನ್ನೇ ನಿಂದಿಸಿದರೆ, ಈಕೆ ತನ್ನ ಗುರುಗಳ ಸ್ಮರಣೆ ಮಾಡಿದಳು.

ಮದುವೆಯೆಂಬ ಜಾತ್ರೆ!



ಇದು ನಿಜಕ್ಕೂ ಜಾತ್ರೆಯೇ ಸರಿ. ಮೊನ್ನೆ ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ನಡೆದ ರಕ್ಷಿತಾ-ಪ್ರೇಮರ ಮದುವೆ ನಿಜಕ್ಕೂ ಜಾತ್ರೆಯಾಗಿ ಪರಿಣಮಿಸಿತ್ತು, ಬಂದ ಅತಿಥಿಗಳಿಗಂತೂ ಇಲ್ಲಿ ಮೂರು ಕಾಸಿನ ಬೆಲೆ ಸಿಗಲಿಲ್ಲ, ಪ್ರೇಮ್‌ನ ಬಂಟರು ಅಷ್ಟೊಂದು ಅಮಾನುಷವಾಗಿ ಬಂದವರನ್ನೆಲ್ಲ ಎಳೆದೆಳೆದು ಬಿಸಾಡುತ್ತಿದ್ದರು.

ಪ್ರೇಮ್‌ನ ತಮ್ಮ ಹಾಗೂ ಪ್ರೇಮ್‌ನ ಬಾಲಂಗೋಚಿಯಂತೆ ತಿರುಗಾಡುವ ದಶಾವತಾರ ಚಂದ್ರು ಇಬ್ಬರೂ ಅದ್ಯಾವ ಪರಿ ಜನರನ್ನು ಎಳೆದಾಡಿದರೆಂದರೆ ಎಷ್ಟೋ ಜನ ಹೆಣ್ಣುಮಕ್ಕಳು ತಮ್ಮ ಮಕ್ಕಳ ಸಮೇತ ಪ್ರೇಮ್-ರಕ್ಷಿತಾರ ಪಾದದಡಿ ಬೀಳುವಂತಾಗಿತ್ತು, ಅಷ್ಟೇ ಅಲ್ಲದೇ ಇವರ ಮದುವೆಯ ಫೋಟೋ ತೆಗೆಯಲು ಹೋಗಿದ್ದ ಪತ್ರಿಕಾ ಛಾಯಾಗ್ರಾಹಕ ನಾಗೇಶ್‌ಕುಮಾರ್ ಮೇಲೆ ಹರಿಹಾಯ್ದ ಪ್ರೇಂನ ತಮ್ಮ ಅಕ್ಷರಶಃ ಪ್ರಾಣಿಯಂತೆ ಮೇಲೆರಗಿದ್ದಾನೆ, ಜೊತೆಗೆ ಫೋಟೋ ತೆಗೆಯದಂತೆ ಧಮಕಿ ಹಾಕಿದ್ದಾನೆ. ಪ್ರೇಂನ ಪ್ರಸಾದ ಸ್ವೀಕರಿಸಿದ್ದ ಅಲ್ಲಿನ ಪೊಲೀಸರಂತೂ ಪತ್ರಕರ್ತರನ್ನೇ ಗದರಿಸಿ ಹೊರಹಾಕಿದ್ದಾರೆ.

ಇನ್ನು ಮದುಮಕ್ಕಳನ್ನು ಹರಸಲು ಬಂದ ಚಿತ್ರೋದ್ಯಮದ ಗಣ್ಯರ ಕತೆ ಕೇಳಲೇಬೇಡಿ. ಸಂಗೀತ ನಿರ್ದೇಶಕ ವಿ. ಮನೋಹರ್‌ರ ತಲೆಗೆ ಹಿಂದಿನಿಂದ ಯಾರೋ ತಟ್ಟನೇ ಹೊಡೆದರಲ್ಲದೇ ಅವರನ್ನು ಸೀದಾ ಪಕ್ಕಕ್ಕೆ ತಳ್ಳಿಬಿಟ್ಟರು. ಮಾಲಾಶ್ರೀ ಮತ್ತು ರಾಮು ದಂಪತಿಗಳಂತೂ ಆ ನೂಕುನುಗ್ಗಲಿನಲ್ಲಿ ಉಸಿರುಗಟ್ಟಿದವರಂತಾಗಿದ್ದರು. ಪಕ್ಕದ ಹೈದ್ರಾಬಾದಿನಿಂದ ಮದುವೆಗೆ ಬಂದಿದ್ದ ತೆಲುಗಿನ ಖ್ಯಾತ ನಟ ಜಗಪತಿ ಬಾಬುರವರನ್ನು ಕರೆದು ಕೂರಿಸುವ ವ್ಯವಧಾನವೂ ಅಲ್ಯಾರಿಗೂ ಇರಲಿಲ್ಲ.



ಎಗರಾಡಿದ ಪ್ರೇಂ ತಮ್ಮ

ಇಂಥ ಮದುವೆಯನ್ನು ಮಹಾನ್ ಎಂಬಂತೆ ಟೀವಿ ಚಾನೆಲ್‌ಗಳು ನೇರ ಪ್ರಸಾರವನ್ನೂ ನೀಡಿದವು. ಇದನ್ನೆಲ್ಲಾ ನೇರವಾಗಿಯೇ ನೋಡಿದ ಪ್ರೇಕ್ಷಕರಿಗೆ ಈ ಮದುವೆಯ ಕಾರ್ಯಕ್ರಮ ದೊಂಬಿಯಂತೆ, ಬೀದಿಗಲಾಟೆಯಂತೆ ಭಾಸವಾಗುತ್ತಿತ್ತು.

ಮದುವೆಗೆ ಅಬ್ಬರದ ಪ್ರಚಾರ ನೀಡಿ ಎಲ್ಲಿಲ್ಲದ ಪಬ್ಲಿಸಿಟಿಯನ್ನು ಗಿಟ್ಟಿಸಿಕೊಂಡ ಪ್ರೇಮ್‌ಗೆ ಆಮಂತ್ರಿತರನ್ನು ಸರಿಯಾದ ರೀತಿಯಲ್ಲಿ ಉಪಚರಿಸುವುದು ಮಾತ್ರ ಯಾಕೆ ಗೊತ್ತಾಗಲಿಲ್ಲ? ಅಸಲಿಗೆ ಅವರ ಮದುವೆಗೆ ಇಷ್ಟೊಂದು ಪ್ರಚಾರದ ಅಗತ್ಯವಿತ್ತೇ?

ಏನೇ ಇರಲಿ, ಇಷ್ಟೊಂದು ಆಡಂಬರದಿಂದ ಮದುವೆಯಾದ ಈ ತಾರಾ ದಂಪತಿಗಳು ಚೆಂದನೆಯ ಬದುಕನ್ನು ಸಾಗಿಸಲಿ ಎಂಬುದೇ ನಮ್ಮ ಹಾರೈಕೆ.




ಕಕ್ಕಾಬಿಕ್ಕಿಯಾದ ಜಗಪತಿಬಾಬು

ಜಂಭದ ಹುಡುಗಿಯ ಪರೀಕ್ಷೆ



ಪ್ರಿಯಾ ಹಾಸನ್ ಎಂಬ ನಿರ್ದೇಶಕಿ ಕಂ ನಾಯಕಿ ಕಂ ನಿರ್ಮಾಪಕಿಯ ಮೊದಲ ಚಿತ್ರ 'ಜಂಭದ ಹುಡುಗಿ' ಸದ್ಯದಲ್ಲೇ ತೆರೆಕಾಣಲಿದೆ. ಇದರ ಕೆಸೆಟ್ ಬಿಡುಗಡೆ ಸಮಾರಂಭ ಮೊನ್ನೆ ನಡೆಯಿತು. " ಈಗ ಪ್ರೇಕ್ಷಕರು ಎಲ್ಲಾ ಹೊಸಬರನ್ನು ಸ್ವಾಗತಿಸುತ್ತಿರುವುದರಿಂದ ನನ್ನನ್ನೂ ಜನ ಸ್ವಾಗತಿಸುತ್ತಾರೆ ಎಂಬ ಆತ್ಮವಿಶ್ವಾಸ ನನಗಿದೆ" ಎಂದಳು. ಆದರೆ ನಾಯಕಿಯಾಗಿಯೋ ಅಥವಾ ನಿರ್ದೇಶಕಿಯಾಗಿಯೋ ಎಂದು ಆಕೆ ಹೇಳಲಿಲ್ಲ, ಪತ್ರಕರ್ತರು ಕೇಳುವ ಗೋಜಿಗೂ ಹೋಗಲಿಲ್ಲ, ಯಾಕೆಂದರೆ ಈ ಚಿತ್ರದ ಬಹುತೇಕ ಭಾಗವನ್ನು ನಿರ್ದೇಶಿಸಿದ್ದು ಸೀತಾರಾಂ ಕಾರಂತ್. ಕೊನೇ ಕ್ಷಣದಲ್ಲಿ ಅವರಿಬ್ಬರ ನಡುವೆ ಭಿನ್ನಾಭಿಪ್ರಾಯ ಹುಟ್ಟಿದ್ದರಿಂದ ಈಕೆಯೇ ಕ್ಯಾಮೆರಾದ ಹಿಂದೆಯೂ ನಿಂತುಕೊಂಡಳು. ಅಷ್ಟರಮಟ್ಟಿಗೆ ಈ ಜಂಭದ ಹುಡುಗಿ ಮೊದಲ ಸುತ್ತಿನ ಜಯ ಗಳಿಸಿದ್ದಾಳೆ. ಅಂತಿಮ ಸುತ್ತಿನ ತೀರ್ಪಿಗಾಗಿ ಈಗ ಜನರತ್ತ ನೋಡುತ್ತಿದ್ದಾಳೆ.

ಆ ರತಿಯೇ ಈ ರತಿ



'ಅಹಂ ಪ್ರೇಮಾಸ್ಮಿ' ಚಿತ್ರದಲ್ಲಿ ನಾಯಕ ಈಶ್ವರ್ ಜೊತೆ ನಟಿಸಿ ಆಮೇಲೆ ನಾಪತ್ತೆಯಾಗಿದ್ದ ಆರತಿ ಛಾಬ್ರಿಯಾ ಮತ್ತೆ ಬಂದಿದ್ದಾಳೆ. ಈ ಬಾರಿ ಶಿವರಾಜ್‌ಕುಮಾರ್ ಜೊತೆ 'ಸಂತ' ಚಿತ್ರದಲ್ಲಿ ಈಕೆ ನಾಯಕಿ. ಈಕೆಯ ಬಾಡಿ ಲಾಂಗ್ವೇಜ್ ಮತ್ತು ಡ್ಯಾನ್ಸ್ ಟ್ಯಾಲೆಂಟನ್ನು ಶಿವರಾಜ್‌ಕುಮಾರ್ ಮತ್ತು ನೃತ್ಯ ನಿರ್ದೇಶಕ ಚಿನ್ನಿಪ್ರಕಾಶ್ ಸಿಕ್ಕಾಪಟ್ಟೆ ಹೊಗಳಿದ್ದಾರೆ. 'ಅಹಂ ಪ್ರೇಮಾಸ್ಮಿ'ಯಲ್ಲಿ ತನ್ನ ಹೊಕ್ಕಳು ಮತ್ತು ಸೊಂಟವನ್ನು ಕನ್ನಡ ಚಿತ್ರರಸಿಕರಿಗೆ ತೋರಿಸಿದ ಈ ರತಿ ಈ ಬಾರಿ 'ಸಂತ'ದ ಒಂದು ಹಾಡಿನಲ್ಲಿ ಇನ್ನಷ್ಟು ಹಾಟ್‌ಆಗಿ ಕಾಣಿಸಿಕೊಂಡಿದ್ದಾಳಂತೆ. ಚಿತ್ರದ ಹೆಸರು 'ಸಂತ'ನಾದರೂ ಈಕೆ ಮಾತ್ರ ಸನ್ಯಾಸಿನಿ ಥರ ಕಾಣಿಸಿಕೊಂಡಿಲ್ಲ ಎಂಬುದೇ ಪಡ್ಡೆಗಳಿಗೆ ಸಮಾಧಾನ ನೀಡುವ ವಿಷಯವಾಗಬಹುದು!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44